ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com

ಸಂಪುಟ 5 ಸಂಚಿಕೆ 28 ಜುಲೈ 10, 2011 ರೂ. 5/- ಪುಟ 16



ಬಗರ್ ಹುಕುಂ ಭೂಮಿಗೆ ಬಾಯಿ ಹಾಕಿದ ಸರ್ಕಾರ

8-9

ಅಪಹರಣ, ಹತ್ಯೆಗಳ ಹಿಂದೆ ಕೆಎಫ್‌ಡಿ ?

3



ಗ್ಯಾಸ್, ಪೆಟ್ರೋಲ್ ಉತ್ಪನ್ನಗಳ ಬೆಲೆ ಏರಿಕೆ ಜನರ ಕಣ್ಣಿಗೆ ಮಣ್ಣು

7

ಹಮಾಲರು : ಹತ್ತು ಬೇಡಿಕೆಗಳ ಹೊತ್ತು ಬಂದರು

11

14





ಬಾಗೇಪಲ್ಲಿ ಮುಖ್ಯರಸ್ತೆ ಅಗಲೀಕರಣಕ್ಕೆ ಒತ್ತಾಯ

ನಾಲ್ಕು ದಿನ ನಡೆದ ನಿರಂತರ ಧರಣಿ

ಚಿಕ್ಕಬಳ್ಳಾಪುರ

ಜೂನ್:20,. 2011 ರಂದು ಬಾಗೇಪಲ್ಲಿ ಪಟ್ಟಣದ ಮುಖ್ಯ ರಸ್ತೆಯನ್ನು 49.6 ಅಡಿಗಳಿಗೆ ಅಗಲೀಕರಿಸುವಂತೆ ಸುಪ್ರೀಮ್ ಕೋರ್ಟನ ಆದೇಶ ಇದ್ದರೂ, ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಮುಖ್ಯ ರಸ್ತೆಯನ್ನು ಸಮರ್ಪಕ ರೀತಿಯಲ್ಲಿ ಅಗಲೀಕರಣ ಮಾಡುವಲ್ಲಿ ನಿರ್ಲಕ್ಷ್ಯತಾಳಿರುವುದನ್ನು ಖಂಡಿಸಿ ಸಿ.ಪಿ.ಐ(ಎಂ) ಪಕ್ಷದ ಸಳೀಯ ಸಮಿತಿಯ ಸದಸ್ಯರು ಹಾಗೂ ಕಾರ್ಯಕರ್ತರು ಅನಿರ್ಧಿಷ್ಟಾವಧಿ ಧರಣಿ ನಡೆಸಿದರು. ಪಟ್ಟಣದ ಡಾಹೆಚ್.ಎನ್.ವೃತ್ತದಿಂದ ಕೆಂಪು ಬಾವುಟಗಳನ್ನು ಹಿಡಿದು ಮುಖ್ಯ ರಸ್ತೆಯಲ್ಲಿ ರ್ಯಾಲಿಯನ್ನು ನಡೆಸಿದ ಸಿ.ಪಿ.ಐ(ಎಂ) ಕಾರ್ಯಕರ್ತರು ನಿರ್ಲಕ್ಷ್ಯ ತಾಳುತ್ತಿರುವ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಮತ್ತು ಅಭಿವೃದ್ಧಿಗೆ ಸಹಕರಿಸುವ ಶಾಸಕರ ವಿರುದ್ಧ ಧಿಕ್ಕಾರಗಳನ್ನು. ಕೂಗಿದರು. ನಂತರ ಲೋಕೋಪಯೋಗಿ ಇಲಾಖೆಯ ಕಛೇರಿಗೆ ಬೀಗ ಜಡಿದ ಸಿ.ಪಿ.ಐ(ಎಂ) ಕಾರ್ಯಕರ್ತರು ಅಧಿಕಾರಿ ಮತ್ತು ಸಿಬ್ಬಂದಿಗೆ ಕಛೇರಿಯಲ್ಲಿ ದಿಗ್ಬಂಧನ ವಿಧಿಸಿದರು.

ನ್ಯಾಯಾಲಯದ ತೀರ್ಪಿನಂತೆ ಮುಖ್ಯ ರಸ್ತೆ ಅಗಲೀಕರಣ ಕೂಡಲೇ ಮಾಡಲೇಬೇಕೆಂದು ಒತ್ತಾಯಿಸಿದರು . ಲೋಕೋಪಯೋಗಿ ಇಲಾಖೆಯ ಎ.ಇ.ಇ. ಮಲ್ಲೇಶಪ್ಪ ಎರಡು ದಿನಗಳಲ್ಲಿ ಉಳಿಕೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದೆಂದು ತಿಳಿಸಿದರು ಅದಕ್ಕೆ ಪ್ರತಿಭಟನಾಕಾರರು ಒಪ್ಪಲಿಲ್ಲ ನಂತರ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ಇ.ಇ.ನಂಜೇಗೌಡರು ಸಹ ಅವರ ಮನವೊಲಿಸುವ ಕೆಲಸವನ್ನು ಮಾಡಿದ ರಾದರೂ ಪ್ರಯೋಜನೆಯಾಗಲಿಲ್ಲ. ಮೊದಲು ಕೆಲಸ ಪ್ರಾರಂಭಿಸಿ ನಂತರ ಮಾತುಕತೆ ಕೆಲಸ ಪ್ರಾರಾಂಭ ಮಾಡುವರೆವಿಗೂ ಧರಣಿ ಕೈಬಿಡಲಾಗುವುದಿಲ್ಲ ಎಂದು ಪಟ್ಟು ಹಿಡಿದು ಕಛೇರಿಯ ಮುಂಭಾಗದಲ್ಲಿಯೇ ಪಾತ್ರೆಗಳನ್ನು ತರೆಸಿ ಅಡಿಗೆಯನ್ನು ತಯಾರಿಸಿದ ಪ್ರತಿಭಟನಕಾರರು ತಮ್ಮ ಧರಣಿಯನ್ನು ಅನಿರ್ಧಿಷ್ಟಾಕಾಲ ಮುಂದೆ ವರೆಸಿದರು, ಧರಣಿಯ ಎರಡನೇ ದಿನವು ಹೆಚ್ಚಿನ ಕಾರ್ಯಕರ್ತರು ಧರಣಿ ಯಲ್ಲಿ ಪಾಲ್ಗೊಂಡಿದ್ದನ್ನು ಗಮನಿಸಿ ಪೋಲಿಸ್ ಇಲಾಖೆಯಿಂದ ಹೆಚ್ಚಿನ ಬಿಗಿಬಂದೋಬಸ್ತು ಮಾಡ ಲಾಗಿತ್ತು. ಇದೇ ಸಂದರ್ಭದಲ್ಲಿ ಮಾತನಾಡಿದ ಸಿ.ಪಿ.ಐ(ಎಂ) ಪಕ್ಷದ ಸ್ಥಳೀಯ ಸಮಿತಿ ಕಾರ್ಯ ದರ್ಶಿ ಚನ್ನರಾಯಪ್ಪನವರು ಸುಮಾರು ಎರಡು ವರ್ಷಗಳಿಂದಲೂ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿಯನ್ನು ಮಂದಗತಿಯಲ್ಲಿ ವಿವಿದ ಹಂತಗಳಲ್ಲಿ ಮಾಡಲಾಗುತ್ತಿದೆ. ಈಗಾಗಲೇ ಕಟ್ಟಡಗಳಿಗೆ ಪರಿಹಾರದ ಹಣವನ್ನು ಪಡೆದಿದ್ದರೂ ಅವುಗಳನ್ನು ನಿಗದಿತ ಅಳತೆಗೆ ಕೆಡುವುದರಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆ. ಇಲ್ಲಿನ ಶಾಸಕರು ಅಭಿವೃದ್ಧಿಗೆ ವಿರುದ್ಧವಾಗಿ ಅಧಿಕಾರಿಗಳ ಮೇಲೆ ಒತ್ತಡವನ್ನು ಹೇರುತ್ತಿರುವುದರಿಂದ ಅವರ ತಾಳಕ್ಕೆ ತಕ್ಕಂತೆ ಅಧಿಕಾರಿಗಳು ನಡೆಯುತ್ತಿರುವುದು ಸಾರ್ವಜನಿಕರಿಗೆ ತೀವ್ರ ತೊಂದರೆಯನ್ನು ತಂದಿದೆ ಎಂದು ಟೀಕಿಸಿದರು. ಸಿ.ಪಿ.ಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಎಂ.ಪಿ.ಮುನಿ ವೆಂಕಟಪ್ಪ ಮಾತನಾಡಿ ಮುಖ್ಯ ರಸ್ತೆಗೆ ತೆಪೆ ಗಳನ್ನು ಹಾಕುವ ನೆಪದಲ್ಲಿ 40.ಲಕ್ಷ ರೂ.ಖರ್ಚುಮಾಡಲಾಗಿದೆ. ಗುತ್ತಿಗೆದಾರರಿಗೆ ಉಪಯೋಗವಾಗಿದೆ ಹೊರತು ಸಾರ್ವಜನಿಕರಿಗೆ ಉಪಯೋಗವಾಗಿಲ್ಲ. ಚರಂಡಿ ವ್ಯವಸ್ಥೆ ಇಲ್ಲ, ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸಿಲ್ಲ, ಕೆಲವು ಕಟ್ಟಡಗಳನ್ನು ಹಾಗೆಯೇ ಬಿಡಲಾಗಿದೆ. ರಸ್ತೆಯಲ್ಲಿ ಸ್ವಚ್ಚತೆ ಇಲ್ಲ. ಸಾರ್ವಜನಿಕರೂ ಹಾಗೂ ವಿದ್ಯಾರ್ಥಿಗಳಿಗೆ ದಿನನಿತ್ಯಾ ಸಂಚರಿಸಲು ತೀವ್ರ ತೊಂದರೆಯಾಗುತ್ತಿದೆ. ಧರಣಿಯನ್ನು ಕೆಲಸ ಪ್ರಾರಂಭ ಮಾಡುವವರೆಗೂ ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ ತಮ್ಮ ಧರಣಿಯೂ ನಾಳೆಯೂ ಮುಂದುವರೆಯುತ್ತದೆ ಎಂದು ಪ್ರಕಟಿಸಿದರು.

3ನೇ ದಿನದ ಧರಣಿಯಲ್ಲಿ ಸಿ.ಪಿ.ಐ(ಎಂ) ಪಕ್ಷದ ತಾಲ್ಲೂಕು ಕಾರ್ಯದರ್ಶಿ

ಪುಟ 4ಕ್ಕೆ





ಸೀಮೆ ಎಣ್ಣೆ, ಡೀಸಲ್ ಗ್ಯಾಸ್ ದರ ಏರಿಕೆ ಖಂಡಿಸಿ ರಸ್ತೆ ತಡೆ

26-06-2011 ರಂದು ಬಾಗೇಫಲ್ಲಿ ಸಿಪಿಐ(ಎಂ) ತಾಲ್ಲೂಕು ಸಮಿತಿ ವತಿಯಿಂದ ಸೀಮೆ ಎಣ್ಣೆ, ಡೀಸಲ್ ಗ್ಯಾಸ್ ಧರ ಏರಿಸಿರಿವ ಕೇಂದ್ರ ಸರ್ಕಾರದ ವಿರುದ್ಧ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರಗಳನ್ನು ಹಾಕುತ್ತಾ ಪಟ್ಟಣದ ಬಸ್ಸ್ ನಿಲ್ದಾಣದ ಮುಂದೆ ರಸ್ತೆ ತಡೆ ಮಾಡಲಾಯಿತು.

ಪ್ರತಿಭಟನಕಾರರನ್ನು ಉದ್ದೇಶಿ ಮಾತನಾಡಿದ ಸಿ.ಪಿ.ಐ.(ಎಂ) ತಾಲ್ಲೂಕು ಸಮಿತಿ ಸದಸ್ಯರಾದ ಎಂ.ಪಿ.ಮುನಿವೆಂಕಟಪ್ಪ ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿ ಬಡವರ ಹೊಟ್ಟೆ ಮೇಲೆ ಬರೆ ಎಳೆದಿರುವ ಕೇಂದ್ರ ಸರ್ಕಾರ ಈಗ ಮತ್ತೆ ಡಿಸೇಲ್, ಸೀಮೆಎಣ್ಣೆ, ಗ್ಯಾಸ್ ದರ ಏರಿಸಿ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾಗಿದ್ದಾರೆ. ಬಹುತೇಕ ಜನರು ಗ್ಯಾಸ್, ಸೀಮೆಎಣ್ಣೆ, ಬಳಕೆಮಾಡುವರು ಈ ಬೆಲೆ ಏರಿಕೆಯಿಂದಾಗಿ ಕಂಗಾಲಾಗಿದ್ದಾರೆ. ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಡಿಸೇಲ್, ಪೆಟ್ರೋಲ್, ಗ್ಯಾಸ್ ಮೇಲೆ ಹೇರಿರುವ ತೆರಿಗೆಯನ್ನು ಕಡಿಮೆ ಗೊಳಿಸಿ ಬೆಲೆ ಏರಿಕೆಯನ್ನು ತಡಗಟ್ಟಬೇಕು. ಪದೇಪದೇ ಪೆಟ್ರೋಲ್, ಡಿಸೇಲ್ ಬೆಲೆ ಏರಿಸುವುದನ್ನು ಕಡಿಮೆಗೊಳಿಸಬೇಕು. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಜನಸಾಮನ್ಯರು ಕೆಂಗಾಲಾಗಿದ್ದಾರೆ. ರೈತರು ತಾವು ಬೆಳೆದಿರುವ ಬೆಲೆಗಳಿಗೆ ಕನಿಷ್ಟ ಬೆಲೆಯೂ ಸಿಗದೆ ಆತ್ಮಹತ್ಯೆಗೆ ಮೊರೆಹೋಗುತ್ತಿದ್ದಾರೆ. ಇದನ್ನು ತಡೆಗಟ್ಟಲು ಈ ಕೂಡಲೇ ಬೆಂಬಲ ಬೆಲೆ ಘೋಷಿಸಬೇಕು. ಬೆಲೆ ಏರಿಕೆ ತಡೆಗಟ್ಟದಿದಲ್ಲಿ ಸಿ.ಪಿ.ಐ(ಎಂ) ನಿಂದ ಉಗ್ರ ಹೋರಾಟ ಮಾಡಲಾಗುವುದು ಎಂದು ತಿಳಿಸಿದರು. ಈ ಪ್ರತಿಭಟನೆಯಲ್ಲಿ ಸಿ.ಪಿ.ಐ(ಎಂ) ತಾಲ್ಲೂಕು ಸಮಿತಿ ಸದಸ್ಯರಾದ ಚನ್ನರಾಯಪ್ಪ, ರಾಘು ರಾಮರೆಡ್ಡಿ, ಅಕ್ರಂ, ವೆಂಕಟೇಶ್‌ಬಾಬು, ಬಿಳ್ಳೂರು ನಾಗರಾಜು, ಮುಸ್ತಾಪ, ವೆಂಕಟ ರಾವ್ ಹಾಗೂ ಮಂಜುನಾಥರೆಡ್ಡಿ ಗೋವರ್ಧನಚಾರಿ, ರಾಮಲಿಂಗಪ್ಪ, ಸುಬ್ಬ ರಾಯಪ್ಪ, ವಾಲ್ಮಿಕಿ ಅಶ್ವತ್ಥಪ್ಪ, ನರಸಿಂಹರೆಡ್ಡಿ, ಶ್ರೀನಿವಾಸರೆಡ್ಡಿ ಮುಂತಾದವರು ಪಾಲ್ಗೊಂಡಿದ್ದರು. ●

ಸಂಪಾದಕೀಯ

ಆಣೆ-ಪ್ರಮಾಣಗಳ ಅಪರಾಧ ಹೀಗಾದರೆ ಉಳಿದೀತೆ ಪ್ರಜಾಪ್ರಭುತ್ವ?

ಮುಖ್ಯಮಂತ್ರಿ ಯಡಿಯೂರಪ್ಪ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿಯವರ ಆಣೆ-ಪ್ರಮಾಣದ ಅರ್ಥಹೀನ ಪ್ರಕರಣ ಯಾವುದೇ ತಾರ್ಕಿಕ ಫಲಿತಾಂಶವಿಲ್ಲದೆ ಅಂತ್ಯಗೊಂಡಿದೆ.

ಯಡಿಯೂರಪ್ಪನವರು ಹೇಳಿಕೊಂಡಂತೆ ಧರ್ಮಸ್ಥಳದಲ್ಲಿ ಆಣೆ-ಪ್ರಮಾಣ ಮಾಡಲಿಲ್ಲ ಎಂಬುದಕ್ಕೆ ಅವರಿಗೆ ದೇಶದ ಸಂವಿಧಾನ ಕಾನೂನಿನ ಮೇಲೆ ಇರುವ ಗೌರವದಿಂದಲ್ಲ. ಬದಲಾಗಿ ಸತ್ಯವನ್ನು ಎದುರಿಸಲಾಗದ ಕುಂಟು ನೆಪಗಳು ಮತ್ತು ಪಲಾಯನದ ತಂತ್ರಗಳು ಎಂಬುದು ಗಂಭೀರ ವಿಚಾರ.

ತಮ್ಮ ಹಗರಣ ಬಯಲುಗೊಳಿಸಲಿದ್ದ ಕುಮಾರಸ್ವಾಮಿಯೊಂದಿಗೆ ಬಿಜೆಪಿ ಖಜಾಂಚಿ ಲೆಹರ್ ಸಿಂಗ್ ಮೂಲಕ ಆಮಿಷಗಳ ಸಂಧಾನವನ್ನು ನಡೆಸಲಾಯಿತು ಎಂಬ ಆರೋಪವನ್ನು ನಿರಾಕರಿಸಿ ಧರ್ಮಸ್ಥಳದಲ್ಲಿ ಪ್ರಮಾಣ ಮಾಡಲು ಸಿದ್ಧವೆಂದು ಘೋಷಿಸಿದ್ದ ಯಡಿಯೂರಪ್ಪನವರು ಈ ಮೂಲಕ ತಮ್ಮ ಅಪರಾಧವನ್ನು ಒಪ್ಪಿಕೊಂಡಿದ್ದಾರೆ.

ಕರ್ನಾಟಕದ ಹಾಲಿ ಮತ್ತು ಮಾಜಿ ಸಿ.ಎಂ.ಗಳ ಈ ಆಣೆ-ಪ್ರಮಾಣದ ಪ್ರಸಂಗ ಕಳೆದ ಕೆಲವು ದಿನಗಳಿಂದ ರಾಜ್ಯದ್ಧ ಜನತೆಗೆ ಉಚಿತ ಮನೋರಂಜನೆಯನ್ನು ಒದಗಿಸಿತ್ತು. ಆದರೆ ಭ್ರಷ್ಟಾಚಾರದಂತಹ ಒಂದು ಪಿಡುಗು ನಾವು ನಕ್ಕು ಸುಮ್ಮನಾಗುವಂತಹ ಕ್ಷುಲ್ಲಕ ವಿಷಯವಲ್ಲ. ಅತ್ಯಂತ ಗಂಭೀರ ಸ್ವರೂಪದ ಈ ವಿದ್ಯಮಾನದ ಬಗ್ಗೆ ಜನರ ಆಕ್ರೋಶವನ್ನು ತಣ್ಣಗಾಗಿಸುವ, ಅವರ ಗಮನವನ್ನು ಬೇರೆಡೆಗೆ ಸೆಳೆಯುವ ತಂತ್ರ ಇದಾಗಿತ್ತು. ಅದರಲ್ಲಿ ಒಂದಿಷ್ಟು ಯಶಸ್ವಿಯಾಗಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯದ ಜನತೆ ಕೆಲವು ವಿಚಾರಗಳನ್ನು ಕುರಿತು ಗಂಭೀರವಾಗಿ ಆಲೋಚಿಸುವಂತೆ ಮಾಡಬೇಕಾದುದು ಸಮಯದ ಕರೆ ಎಂದೇ ಭಾವಿಸಬೇಕಾಗಿದೆ. ಭ್ರಷ್ಟಾಚಾರ ಎಂಬುದು ಶಿಕ್ಷಾರ್ಹ ಅಪರಾಧ. ಅದನ್ನು ಆಮಿಷ. ಸಂಧಾನದ ಮೂಲಕ ಮುಚ್ಚಿ ಹಾಕುವ ಪ್ರಯತ್ನವೂ ಅಪರಾಧವೇ ಆಗಿದೆ. ಇನ್ನೊಬ್ಬರ ಬಗ್ಗೆ ಸುಳ್ಳು ಆಪಾದನೆ ಮಾಡಿ ಅವರ ಮಾನನಷ್ಟ ಮಾಡುವುದು ಸಹ ಅಪರಾಧವೇ. ಅಪರಾಧಗಳನ್ನು ಆಣೆ ಪ್ರಮಾಣಗಳ ಮೂಲಕ ಇತ್ಯರ್ಥ ಪಡಿಸುವುದು ಸಾಧ್ಯವಿಲ್ಲ. ಹಾಗಿದ್ದರೆ ನ್ಯಾಯಾಲಯಗಳು ಏಕೆ ಇರಬೇಕು?

ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ತಾವು ಕಳಂಕಿತರಲ್ಲ ಎಂಬುದನ್ನು ಸಾಬೀತುಪಡಿಸಬೇಕು ಎಂಬುದರಲ್ಲಿ ಅಷ್ಟೊಂದು ಆಸಕ್ತಿ ಇದ್ದರೆ ಭ್ರಷ್ಟಾಚಾರದ ಎಲ್ಲಾ ಆರೋಪಗಳನ್ನು ತನಿಖೆಗೆ ಒಪ್ಪಿಸಿ, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟು, ಮುಕ್ತವಾದ ತನಿಖೆಗೆ ಏಕೆ ಮಾರ್ಗ ಸುಗಮಗೊಳಿಸಬಾರದು? ಇವರ ಹಾಗೂ ಕುಟುಂಬದವರ ವಿರುದ್ಧ ನ್ಯಾಯಾಲಯಗಳಲ್ಲಿ ನಡೆಯುತ್ತಿರುವ ಪ್ರಕರಣಗಳಿಗೆ ಇವರಾಗಲಿ, ಇವರ ಕುಟುಂಬದ ಸದಸ್ಯರಾಗಲಿ ಏಕೆ ತಡೆಯಾಜ್ಞೆ ಕೋರುತ್ತಿರುವುದು?


ನ್ಯಾಯಾಲಯದಲ್ಲಿ ಯಡಿಯೂರಪ್ಪನವರಿಗಾಗಲಿ, ಇನ್ನಾರಿಗಾಗಲಿ, ಆಣೆ-ಪ್ರಮಾಣ ಮಾಡಲು ಅವಕಾಶ ಇದ್ದೇ ಇರುತ್ತದೆ. ಆಗ ಧರ್ಮಸ್ಥಳದ ಮಂಜುನಾಥ ಸ್ವಾಮಿ ಹೆಸರಿನಲ್ಲಾಗಲಿ ಅಥವಾ ಬೇರೆ ಯಾವ ಅತಿ ದೊಡ್ಡ ಸ್ವಾಮಿಯ ಹೆಸರಿನಲ್ಲಾಗಲಿ ಆಣೆ ಮಾಡಬಹುದು. ಆಗ ಅವರ ಎದುರಾಳಿಯೂ ಬಂದು ಆಣೆ ಮಾಡಿಯೇ ಮಾಡುತ್ತಾನೆ. ಆದರೆ ಸತ್ಯ ಆಣೆ-ಪ್ರಮಾಣ ಮಾಡುವುದರೊಂದಿಗೆ ಹೊರ ಬರುವುದಿಲ್ಲ. ನಿಷ್ಪಕ್ಷಪಾತ ತನಿಖೆಯಿಂದ ಮಾತ್ರ ಸತ್ಯವನ್ನು ಹೊರಗೆಡವಲು ಸಾಧ್ಯ. ಇದನ್ನೇ ಅವರು ಮರೆಮಾಚಿದ್ದಾರೆ. ಆದ್ದರಿಂದ ಈಗಲಾದರೂ ಸಂವಿಧಾನಾತ್ಮಕ ಸಂಸ್ಥೆಯಿಂದ ತನಿಖೆಗೆ ಆದೇಶಬೇಕು. ಇನ್ನೂ ಮುಖ್ಯವಾಗಿ ಸಂವಿಧಾನದ ಮೇಲೆ ವಿಶ್ವಾಸವನ್ನೇ ಇರಿಸಿಕೊಂಡಿಲ್ಲದ, ಕಂದಾಚಾರ ಪಾಲಿಸುವ, ಸಂವಿಧಾನ ವಿರೋಧಿ ಮುಖ್ಯಮಂತ್ರಿಯು ಅಧಿಕಾರದಲ್ಲಿರಲು ಯೋಗ್ಯರಲ್ಲ, ಈಗಲಾದರೂ ರಾಜೀನಾಮೆ ನೀಡಿ ನಡೆಯಬೇಕು.

ದೇಶದ ಸಂವಿಧಾನ, ನ್ಯಾಯಾಂಗ ವ್ಯವಸ್ಥೆಯ ಮೇಲೆ ಜನತೆ ತಮ್ಮ ವಿಶ್ವಾಸವನ್ನು ಗಟ್ಟಿಗೊಳಿಸುವಂತೆ ಮಾಡುವಲ್ಲಿ ಮಾದರಿಯಾಗಬೇಕಾದವರೇ ಜನತೆಯಲ್ಲಿ ಮೌಢ್ಯತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವುದು ದೊಡ್ಡ ದುರಂತವಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಕಂದಾಚಾರ, ವಾಮಾಚಾರ ಮತ್ತು ಅವುಗಳ ಜೊತೆಯಲ್ಲಿ ಭ್ರಷ್ಟಾಚಾರ ಹೆಡೆ ಎತ್ತಿವೆ. ಇಂತಹ ಭ್ರಷ್ಟರು ದೇವಸ್ಥಾನಗಳಿಗೆ ಸುತ್ತುತ್ತಿರುವುದನ್ನು, ಮಠಾಧಿಪತಿಗಳ ಕಾಲಿಗೆರಗುವುದನ್ನು ನೋಡಿ ಪ್ರಭಾವಿತರಾಗುವ ಮುಗ್ಧ ಜನ ತಮ್ಮ ರಾಜಕೀಯ ನಾಯಕರ ಕಪಟತನವನ್ನು ಕಾಣದಾಗುತ್ತಾರೆ. ಭ್ರಷ್ಟಾಚಾರದಲ್ಲಿ ಲೂಟಿಯಾಗುತ್ತಿರುವುದು ತೆರಿಗೆಗಳ ಮೂಲಕ ತಮ್ಮಿಂದ ಸಂಗ್ರಹಿಸಲಾದ ಹಣ ಎಂಬುದನ್ನೇ ಅರಿಯದಂತಾಗುತ್ತಾರೆ. ಮತ್ತೆ ಮತ್ತೆ ಅದೇ ನಾಯಕರ ಚಿತ್ರಕ್ಕೆ ಮುದ್ರೆ ಒತ್ತುತ್ತಾರೆ.

ಇವರನ್ನು ಎಚ್ಚರಿಸಲಾಗದಿದ್ದರೆ ಉಳಿದಿತೇ ಈ ಪ್ರಜಾಪ್ರಭುತ್ವ?

ಅಪಹರಣ, ಹತ್ಯೆಯ ಹಿಂದೆ ಕೆಎಫ್‌ಡಿ?

ಯಾರು ಏನೇ ಹೇಳಲಿ ಅಥವಾ ಸರ್ಕಾರವೇ ಹೇಳಿಕೊಳ್ಳಲಿ ಅಪರಾಧಿಕೃತ್ಯಗಳ ಸಂಖ್ಯೆ ರಾಜ್ಯದಲ್ಲಿ ಹೆಚ್ಚುತ್ತಲೇ ಇದೆ. ಅದರಲ್ಲೂ ರಾಜಧಾನಿ ಬೆಂಗಳೂರು. ಸಾಂಸ್ಕೃತಿಕ ಮಹಾನಗರಿ ಮೈಸೂರು ಈ ಪ್ರದೇಶಗಳಲ್ಲಿನ ಕ್ರಿಮಿನಲ್ ಕೃತ್ಯಗಳು ತುಂಬಾ ಹೈಟೆಕ್‌ನಿಂದ ಕೂಡಿರುತ್ತದೆ. ವಿಶ್ವ ಬಂಡವಾಳದ ಹರಿವು, ಆಧುನಿಕ ಸಂಪರ್ಕ ಸಾಧನಗಳು, ದುಡ್ಡು ಹೊಡೆಯುವುದನ್ನೇ ದಂಧೆಯಾಗಿಸಿ ಕೊಂಡ ಜನವಿರೋಧಿ 'ಅಭಿವೃದ್ಧಿ ಸರ್ಕಾರ'ಗಳ ನೀತಿಗಳು ಬಿಕ್ಕಟ್ಟಿನ ಬದುಕು-ಮೌಢ್ಯಗಳು ಹುಟ್ಟು ಹಾಕುತ್ತಿರುವ ಹಿಂಸೆ, ಕ್ರೌರ್ಯಗಳ ಅಮಾನವೀಯ ಮೌಲ್ಯಗಳು ಕ್ರಿಮಿನಲ್‌ಗಳನ್ನು ಹುಟ್ಟು ಹಾಕದೇ ಇದ್ದೀತೆ? ಹೀಗಾಗಿ ಹಣಕ್ಕಾಗಿ, ಆಸ್ತಿಗಾಗಿ ನಿತ್ಯವೂ ಬಂದಿಲ್ಲೊಂದು ಬಗೆಯ ಕ್ರೌರ್ಯಗಳು ಘಟಿಸುತ್ತಲೇ ಇರುತ್ತವೆ. ನಾಗರೀಕರನ್ನು ಆತಂಕದ ಮಡುವಿಗೆ ತಳ್ಳುತ್ತಲೇ ಇರುತ್ತವೆ. ಈ ಕ್ರಿಮಿನಲ್ ಕೃತ್ಯಗಳಲ್ಲಿ ಭೂಗತ ಪಾತಕಿಗಳು, ಮಾತ್ರವಲ್ಲ ಭೂಗತ ಮತೀಯ ಸಂಘಟನೆಗಳು, ಸೇರಿಕೊಂಡರೆ ಅದರ ಅಪಾಯ ಅತಿಯಾದದು. ಕರ್ನಾಟಕದಲ್ಲಿ ಈಗಾಗಲೇ ಮತೀಯ ಸಾಮರಸ್ಯ ಕದಡಿದೆ. ಒಂದು ಧರ್ಮಿಯರನ್ನು, ಇನ್ನೊಂದು ಧರ್ಮಿಯರ ಮೇಲೆ ಎತ್ತಿಕಟ್ಟಲಾಗಿದೆ. ಬಹುಸಂಖ್ಯಾತವೆಂಬ ಬ್ರಾಂಡಿನಡಿ ಸಂಘ ಪರಿವಾರದ ದಾಳಿಗಳು ಅಲ್ಪಸಂಖ್ಯಾತರ ಮೇಲೆ ಸಾಗಿವೆ. ಇದಕ್ಕೆ ಪ್ರತಿಯಾಗಿ ಅಲ್ಪಸಂಖ್ಯಾತರ ಹೆಸರಿನಲ್ಲಿ ಭಯೋತ್ಪಾದನೆಯ ಕೃತ್ಯಗಳು ಫಲಿಸಿವೆ. ಬಿಜೆಪಿ ಅಧಿಕಾರಕ್ಕೆ ಬಂದ ಮೇಲಂತೂ 'ಗುಜರಾತ್ ಮಾದರಿ' ಘೋಷಣೆಯಿಂದ ಅನುಸರಣೆಯಿಂದ ರಾಜ್ಯ ಒಳಗೊಳಗೆ ಸ್ಫೋಟಕ್ಕೆ ಸಿದ್ಧವಾಗುತ್ತಿದೆ.



ಇದೇ ಜುಲೈ 8 ರಂದು ಎಂ.ಬಿ.ಎ. ವಿದ್ಯಾರ್ಥಿಗಳಾದ ಹುಣಸೂರಿನ ಸುಧೀಂದ್ರ, ವಿಘ್ನೇಶ್‌ರವರು ಮೈಸೂರಿನ ಕಾಲೇಜಿಗೆ ಹೋಗುವಾಗ ಡ್ರಾಪ್ ಕೊಡುವ ನೆಪದಲ್ಲಿ ಅವರನ್ನು ಅಪಹರಿಸಿ, ಕೋಟ್ಯಾಂತರ ರೂಪಾಯಿ ಕೊಡುವಂತೆ ಪಾಲಕರಿಗೆ ಪೀಡಿಸಿ ಕೊನೆಗೆ ಚಿತ್ರಹಿಂಸೆ ನೀಡಿ ಆ ಮಕ್ಕಳನ್ನು ಹತ್ಯೆಗೈದ ಪ್ರಕರಣ ರಾಜ್ಯಾದ್ಯಂತ ತಲ್ಲಣ ಸೃಷ್ಟಿಸಿತ್ತು. ಪೋಲೀಸರಿಗೆ ಇದು ಸವಾಲಾಗಿತ್ತು. ಕೊನೆಗೂ ಆರೋಪಿಗಳನ್ನು ಬಂಧಿಸುವ[...] ಪೋಲೀಸರೇನೋ ಯಶಸ್ವಿಯಾಗಿದ್ದಾ[...] ಒಳ್ಳೆಯದೇ ಆದರೆ ದೂರು ನೀಡಿದಾಗ[...] ಇದೇ ಪೋಲೀಸ್ ಇಲಾಖೆ ಜಾಗ್ರತವಾ[...] ಕಾರ್ಯ ನಿರ್ವಹಿಸಿದ್ದರೆ. ಅನಾಹು[...] ತಪ್ಪಿಸಬಹುದಿತ್ತು. ಈ ನಿರ್ಲಕ್ಷ್ಯತನ ಮ[...] ಮರೆಯುವಂತಹದ್ದೋ ಅಥವಾ ಹಾಗೇ ಬಿ[...] ಬಿಡುವಂತಹದ್ದೂ ಅಲ್ಲ. ತ[...] ಬೆನ್ನುತಟ್ಟಿಕೊಳ್ಳುತ್ತಿರುವ ಗೃಹ ಸಚಿ[...] ಆರ್.ಅಶೋಕರಾದಿಯಾಗಿ ಇದನ[...] ಗಮನಿಸಲೇಬೇಕು, ಉತ್ತರಿಸಬೇಕು.

ಕೆಎಫ್‌ಡಿ-ಪಾತ್ರ

ಅದರಲ್ಲೂ ಈ ಪ್ರಕರ[...] ಹನ್ನೊಂದರಲ್ಲಿ, ಇನ್ನೊಂದರಂ[...] ನೋಡಲು ಆಗಲಾರದು. ಇದ[...] ಅಪಹರಣ ಕೇವಲ ದುಡ್ಡಿ[...] ಆಸೆಗೆ ಮಾತ್ರ ಕೊಲೆ ನಡೆದಿ[...] ಬಂಧಿತ ಆರು ಆರೋಪಿಗ[...] ವಿಚಾರಣೆಯಿಂದ ತಿಳಿದ[...] ಬಂದ ಸಂಗತಿ ಯಾರನ್ನೂ ನಿದ್ದೆಗೆಡಿಸು ವಂತಹದ್ದು. ಇವರೆಲ್ಲಾ ಕೆ.ಎಫ್.[...] (ಕರ್ನಾಟಕ ಫೋರಂ ಫಾರ್ ಡಿಗ್ನಿಟಿ[...] ಘನತೆಗಾಗಿ ಕರ್ನಾಟಕ ವೇದಿಕೆ)ಯ[...] ಕಾರ್ಯಕರ್ತರು ಎಂಬುದು. ಒಂದಿಷ್ಟು ಸ್ವಂತ[...] ಅಲ್ಲದೇ, ಮುಖ್ಯ ವಾಗಿ ಸಂಘಟನೆಯ[...]

ಪುಟ 15

ಕಾರ್ಟೂನ್ ಕಾರ್ನರ್



ಬೆಂಗಳೂರು: ಭ್ರಷ್ಟಾಚಾರ–ಬೆಲೆ ಏರಿಕೆ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆ

ರಾಜ್ಯ ಬಿಜೆಪಿ ಸರ್ಕಾರ ಮತ್ತು ಮುಖ್ಯಮಂತ್ರಿಗಳು ಸ್ವಜನ ಪಕ್ಷಪಾತ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿ, ಬೆಲೆ ಏರಿಕೆ ನಿಯಂತ್ರಿಸಲು ಕ್ರಮ ವಹಿಸದಿರುವುದರ ವಿರುದ್ಧ ಸಿಪಿಐ(ಎಂ) ರಾಜ್ಯ ಸಮಿತಿಯ ರಾಜ್ಯವ್ಯಾಪಿ ಪ್ರತಿಭಟನೆಯ ಕರೆಯ ಮೇರೆಗೆ ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸಿಪಿಐ(ಎಂ) ಪ್ರತಿಭಟನೆ ಪ್ರದರ್ಶನ ನಡೆಸಿತು.

ಆಣೆ ಪ್ರಮಾಣದ ಪ್ರಹಸನದಲ್ಲಿ ತೊಡಗಿ ರಾಜ್ಯದ ಜನತೆಯ ಗಮನವನ್ನು ದಿಕ್ಕು ತಪ್ಪಿಸುತ್ತಿದ್ದಾರೆ ಮುಖ್ಯಮಂತ್ರಿಗಳು, ಶಾಸಕರು ಅನರ್ಹತೆಯ ವಿಷಯದಲ್ಲಿ ಸಿಎಂ ಮತ್ತು ಸ್ಪೀಕರ್ ಸುಪ್ರಿಂ ಕೋರ್ಟ್‌ನಿಂದ ಛೀಮಾರಿ ಹಾಕಿಸಿಕೊಂಡಿದ್ದರೂ ರಾಜೀನಾಮೆ ನೀಡದೆ ಮುಂದುವರಿದಿದ್ದಾರೆ. ಆ ಮೂಲಕ ತಮ್ಮ ಭಂಡತನವನ್ನು ಬಿಜೆಪಿ ಸರ್ಕಾರ ತೋರುತ್ತಿದೆ ಎಂದು ಪ್ರತಿಭಟನೆ ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ. ಕಾಂ॥ವಿ.ಜೆ.ಕೆ.ನಾಯರ್ ಸರ್ಕಾರವನ್ನು ಟೀಕಿಸಿ, ಕೂಡಲೇ ರಾಜೀನಾಮೆ ನೀಡಬೇಕು ಎಂದು ಒತ್ತಾಯಿಸಿದರು. ಭ್ರಷ್ಟಾಚಾರ ಮತ್ತು ಸ್ವಜನ ಪಕ್ಷಪಾತದ ಆರೋಪ–ಪ್ರತ್ಯಾರೋಪದ ಕುರಿತು ಸಮಗ್ರ ತನಿಖೆಯನ್ನು ನಡೆಸಬೇಕೆಂದು ಆಗ್ರಹಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಜಿ.ಎನ್.ನಾಗರಾಜ್ ಮಾತನಾಡಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ॥ ಕೆ.ಎನ್.ಉಮೇಶ್ ಸ್ವಾಗತಿಸಿದರು, ಕಾಂ॥ ಗೋಪಾಲಕೃಷ್ಣ ವಂದನಾರ್ಪಣೆ ಮಾಡಿದರು.

ಪ್ರತಿಭಟನೆಯಲ್ಲಿ ಮಾಜಿ ಶಾಸಕರಾದ ಕಾಂ॥ ಜಿ.ವಿ. ಶ್ರೀರಾಮರೆಡ್ಡಿ, ರಾಜ್ಯ ಮುಖಂಡರಾದ ಕಾಂ॥ ಮಾರುತಿ ಮಾನ್ಪಡೆ, ಕಾಂ॥ಎಸ್. ಪ್ರಸನ್ನಕುಮಾರ್, ಕಾಂ॥ ಬಯ್ಯಾರೆಡ್ಡಿ, ಕಾಂ॥ ಎಸ್.ವೈ. ಗುರುಶಾಂತ್, ಕಾಂ॥ವರಲಕ್ಷ್ಮಿ, ಕಾಂ॥ ವಿಮಲಾ ಮುಂತಾದವರು ಭಾಗವಹಿಸಿದ್ದರು.

ಬಾಗೇಪಲ್ಲಿ ಮುಖ್ಯರಸ್ತೆ ಅಗಲೀಕರಣಕ್ಕೆ.......

ಪುಟ 2ರಿಂದ

ವೆಂಕಟಸ್ವಾಮಿರೆಡ್ಡಿ ಆಗಮಿಸಿ ಮಾತನಾಡಿದರು. ತಮ್ಮ ಪಕ್ಷದ ಶಾಸಕರ ಅವಧಿಯಲ್ಲಿ ಮುಖ್ಯ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಎಲ್ಲಾ ಕಟ್ಟಡ ಮಾಲೀಕರನ್ನು ಕರೆದು ಸಭೆ ನಡೆಸಿ 35 ಅಡಿಗೆ ನಿಗದಿ ಮಾಡಲಾಗಿತ್ತು. ನಂತರ ಕೆಲವರು ಕೋರ್ಟಿಗೆ ಮೊರೆಹೋದರು ನ್ಯಾಯಾಲಯದ ಆದೇಶದಂತೆ 49.6ಅಡಿಗೆ ನಿಗದಿ ಗೊಳಿಸಲಾಯಿತು. ಈ ಆದೇಶದಂತೆ ಕೆಲಸ ನಡೆಯದಿದ್ದಲ್ಲಿ ಧರಣಿ ವಾಪಸ್ಸು ಪಡೆಯುವುದಿಲ್ಲವೆಂದು ಅವರು ಸಹ ಧರಣಿಯಲ್ಲಿ ಪಾಲ್ಗೊಂಡರು.

ಪರಿಸ್ಥಿತಿ ತೀವ್ರತೆಯನ್ನು ಅರಿತು ಅಧಿಕಾರಿಗಳು ಜೆ.ಸಿ.ಬಿ ಹಾಗೂ ಕಟ್ಟಡಗಳನ್ನು ತೆರವು ಗೊಳಿಸಲು ಕೆಲಸಗಾರರನ್ನು ಕೂಡಲೇ ಕರೆಸಿ ಮುಖ್ಯ ರಸ್ತೆಯಿಂದ 49.6 ಅಳತೆ ಮಾಡಿ ಕೆಲಸ ಪ್ರಾರಂಭಿಸಿದರು.

4ನೇ ದಿನ ಧರಣಿಗೆ ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಮಲ್ಲೇಶಯ್ಯ, ಬೆಸ್ಕಾಂ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಉಮೇಶ್, ಪುರಸಭೆ ಮುಖ್ಯಾಧಿಕಾರಿ ಸುಧಾಕರ್ ಚರ್ಚಿಸಿದರು. ಪಟ್ಟಣದ ಮುಖ್ಯ ರಸ್ತೆಯಲ್ಲಿ ಅನಧಿಕೃತವಾಗಿ ನಿರ್ಮಿಸಿಕೊಂಡ ಅಂಗಡಿಗಳನ್ನು ತೆರವು ಗೊಳಿಸಲಾಗುವುದು. ಬೇಡಿಕೆಗಳನ್ನು ಈಡೇರಿಸಲು ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ ನಂತರ ಮಾತನಾಡಿದ ಸ್ಥಳೀಯ ಸಮಿತಿಯ ಕಾರ್ಯದರ್ಶಿ ಚನ್ನರಾಯಪ್ಪ ಪಟ್ಟಣದ ಮುಖ್ಯರಸ್ತೆಯಲ್ಲಿ 2–3ಅಡಿಗಳಷ್ಟು ರಸ್ತೆಗೆ ಹೊಂದಿಕೊಂಡಂತೆ ಅನಧಿಕೃತವಾಗಿ ನಿರ್ಮಿಸಿ ಕೊಂಡಿರುವ ಅಂಗಡಿಗಳನ್ನು ತೆರವುಗೊಳಿಸ ಬೇಕು, ಕಾಟಾಚಾರಕ್ಕೆ ತೆರವು ಕಾರ್ಯನೆ ನಡೆಸಬಾರದು. ಮುಂದಿನ ದಿನಗಳಲ್ಲಿ ಒತ್ತುವರಿಗೆ ಅವಕಾಶ ನೀಡಬಾರದು ಎಂದು ತಿಳಿಸಿ 4ದಿನಗಳಿಂದ ಕೈಗೊಂಡಿರುವ ಧರಣಿಯನ್ನು ವಾಪಾಸ್ಸು ಪಡೆಯಲಾಯಿತು.

ಈ ಧರಣಿಯಲ್ಲಿ ಸಿ.ಪಿ.ಐ(ಎಂ) ಮುಂಖಡರಾದ ಬಿಳ್ಳೂರು ನಾಗರಾಜು, ವೆಂಕಟೇಶಬಾಬು, ಮೊಹಮದ್ ಅಕ್ರಮ್, ಡಿ.ಸಿ.ಶ್ರೀನಿವಾಸ್, ಮುಸ್ತಫಾ, ಜಿ.ಕೃಷ್ಣಪ್ಪ, ಅಶ್ವತ್ಥಪ್ಪ, ರಾಮಲಿಂಗಪ್ಪ, ಗೋವರ್ಧನಾಚಾರಿ, ಮಂಜುನಾಥರೆಡ್ಡಿ, ರಮೇಶ, ನಂಜಿರೆಡ್ಡಿ, ರಘುರಾಮರೆಡ್ಡಿ, ಶಂಕರರೆಡ್ಡಿ, ಸುಬ್ಬರಾಯಪ್ಪ, ನರಸಿಂಹರೆಡ್ಡಿ, ಗಂಗಾದರ, ಮೂರ್ತಿ ಮುಂತಾದವರು ಪಾಲ್ಗೊಂಡಿದ್ದರು.

ಭೂ ಸುಧಾರಣೆ ಇಲ್ಲಿ–ಅಲ್ಲಿ

"ಸಂಸದ ವಿಶ್ವನಾಥ್‌ರವರೇ ಗಮನಿಸಿ, ಅಲಂಡೆ ರಾಜನಲ್ಲ, ಚಿಲಿಯ ಜನನಾಯಕ"

ಇತ್ತೀಚೆಗೆ ಕಾಂಗ್ರೆಸ್ ಸಂಸದರಾದ ಎಚ್.ವಿಶ್ವನಾಥ್ ಕರ್ನಾಟಕದಲ್ಲಿ ದೇವರಾಜ ಅರಸು ಅವರು ಜಾರಿಗೆ ತಂದ ಭೂಸುಧಾರಣೆ ಜಗತ್ತಿನಲ್ಲೇ ಎಲ್ಲೂ ಇಲ್ಲದ ಕ್ರಾಂತಿಕಾರಕ ಸುಧಾರಣೆ ಎಂದಿದ್ದಲ್ಲದೇ ಭಾರತದ ಎಡ ಸರ್ಕಾರಗಳ ಭೂ ಸುಧಾರಣೆಯ ಕುರಿತು ಅದರ ಮಹತ್ವವನ್ನು ಕಡಿಮೆ ಮಾಡುವ ಅಜ್ಞಾನದ ಮಾತುಗಳನ್ನಾಡಿರುವುದು ವರದಿಯಾಗಿದೆ.

ಅವರ ಹೇಳಿಕೆಯ ಆಯ್ದು ಭಾಗ ಹಾಗೂ ಅದಕ್ಕೆ ಸಿಪಿಐ(ಎಂ) ಮೈಸೂರು ಜಿಲ್ಲಾ ಕಾರ್ಯದರ್ಶಿ ಲ. ಜಗನ್ನಾಥರವರು ಕೊಟ್ಟ ಪ್ರತಿಕ್ರಿಯೆಯನ್ನು ಇಲ್ಲಿ ನೀಡಲಾಗಿದೆ.

ವಿಶ್ವನಾಥ್ : "ದೇವರಾಜ ಅರಸುರವರು ಮಾಡಿದ ಭೂ ಸುಧಾರಣಾ ಕಾಯಿದೆಯ ಜಾರಿಯು ದೇಶದ ದೊಡ್ಡ ಹಾಗೂ ಕ್ರಾಂತಿಕಾರಕ ಸುಧಾರಣೆಯಾಗಿದೆ. ಜಗತ್ತಿನ ಯಾವುದೇ ದೇಶ ಕರ್ನಾಟಕದಷ್ಟು ಯಶಸ್ವಿಯಾಗಿ ಇದನ್ನು ಜಾರಿಗೆ ತಂದಿಲ್ಲ. ಚಿಲಿ ದೇಶದಲ್ಲಿ ಭೂ ಸುಧಾರಣಾ ಕಾನೂನನ್ನು ಜಾರಿಗೆ ತರಲು ಯತ್ನಿಸಿದ ಅಲೆಂಡೇ ಎಂಬ ರಾಜನನ್ನು ಭೂ ಮಾಲೀಕರು ಶಿರಚ್ಛೇದ ಮಾಡಿ ಕೊಂದು ಬಿಟ್ಟರು. ಆದರೆ ದೇವರಾಜ ಅರಸು ಅವರು ಮೌನವಾಗಿ, ರಕ್ತರಹಿತವಾಗಿ ಅದನ್ನು ಜಾರಿಗೆ ತಂದರು. ದೇಶದಲ್ಲಿ ಜಾರಿಯಾಗಿದ್ದ ತುರ್ತು ಪರಿಸ್ಥಿತಿಯನ್ನು ಸಕಾರಾತ್ಮಕವಾಗಿ ಬಳಸಿಕೊಂಡು ಭೂ ಸುಧಾರಣಾ ಕಾಯಿದೆಯನ್ನು ಸಮರ್ಥವಾಗಿ ಜಾರಿಗೊಳಿಸಿದರು".

"ಕೃಷಿ ಕಾರ್ಮಿಕರ ಬಗ್ಗೆ ಸದಾ ಕಾಲ ಧ್ವನಿಯೆತ್ತುವ ಪಶ್ಚಿಮಬಂಗಾಳದ ಕಮ್ಯುನಿಸ್ಟ್ ಸರ್ಕಾರ ಸಹಾ ಈ ಕಾಯಿದೆಯನ್ನು ಸಮರ್ಪಕವಾಗಿ ಜಾರಿಗೊಳಿಸಲು ಸಾಧ್ಯವಾಗಲಿಲ್ಲ".

ಲ. ಜಗನ್ನಾಥ್ ಉತ್ತರದಲ್ಲಿ

ಎಲ್ಲೆಂದು ತೋರಿಸಿ – "10,50,000 ಪರಿಶಿಷ್ಟ ಜಾತಿ ಮತ್ತು 5,30,000 ಪರಿಶಿಷ್ಟ ವರ್ಗದವರನ್ನೊಳಗೊಂಡ 28 ಲಕ್ಷ ಜನರಿಗೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರ ಹಂಚಿರುವ ಭೂಮಿ, 10 ಲಕ್ಷ ಎಕರೆಗೂ ಮೀರಿದ್ದು, ಇಡೀ ದೇಶದಲ್ಲಿ ಸ್ವಾತಂತ್ರ್ಯ ನಂತರ ಹಂಚಿರುವ ಭೂಮಿ 48,90,000 ಎಕರೆಯಾದರೆ ದೇಶದ 2.5% ರಷ್ಟು ಭೂ ಭಾಗ ಹೊಂದಿರುವ ಪಶ್ಚಿಮಬಂಗಾಳದ ಎಡರಂಗದ ಸರ್ಕಾರ 1978ರ ನಂತರ ಹಂಚಿರುವ ಭೂಮಿ 10 ಲಕ್ಷ ಎಕರೆಗೂ ಮೀರಿದೆ.(ಶೇ.20%ಕ್ಕೂ ಹೆಚ್ಚು) ಈ ಅಂಕಿ ಅಂಶಗಳು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯ (ಎಂಆರ್‌ಡಿಓ) ಮತ್ತು ನ್ಯಾಷನಲ್ ಸ್ಯಾಂಪಲ್ ಸರ್ವೆ(ಎನ್‌ಎಸ್‌ಎಸ್) ಪ್ರಕಟಪಡಿಸಿರುವ ಅಂಕಿ ಅಂಶಗಳು.

ದೇವರಾಜ ಅರಸು ಅವರ ಭೂ ಸುಧಾರಣೆ ಸ್ವಾಗತಿಸುತ್ತಲೇ ಅದು ಈ ರಾಜ್ಯದ ಪಾಳೇಗಾರಿ ಭೂ ಸಂಬಂಧಗಳ ಮೇಲೆ ಬಂಡವಾಳಶಾಹಿ ಭೂ ಸಂಬಂಧಗಳನ್ನು ಹೇರಲು ಪ್ರಯತ್ನಿಸಿತು ಎನ್ನುವ ಟೀಕೆಯನ್ನು ಮರೆಯಬಾರದು. (ನೋಡಿ–ಶ್ರೀ ನರೇಂದ್ರಪಾಣಿಯವರ Reforms to pre-empt change Land Legislation in Karnataka) ದೇವರಾಜ ಅರಸು ಮತ್ತು ಪಶ್ಚಿಮಬಂಗಾಳದ ಎಡರಂಗದ ಸರ್ಕಾರದ ಭೂ ಸುಧಾರಣೆಗಳ ಬಗ್ಗೆ ತೌಲನಿಕ ಅಧ್ಯಯನ, ಈ ವಿಷಯದ ಮೇಲೆ ಇನ್ನಷ್ಟು ಬೆಳಕು ಚೆಲ್ಲಬಹುದು. ಅರಸು ಹೆಸರಿನಲ್ಲಿ ವಿ.ವಿ.ಸ್ಥಾಪನೆಗೆ ಒತ್ತಾಯಿಸುತ್ತಿರುವ ಪ್ರೊ॥ ಮುಜಾಫರ್ ಅಸಾದಿಯಂತಹ ರಾಜಕೀಯ ಶಾಸ್ತ್ರಜ್ಞರು ಈ ಕಾರ್ಯಕ್ಕೆ ಮುಂದಾಗಬೇಕೆಂಬುದು ನಮ್ಮ ಆಶಯ.

ಚಿಲಿ ದೇಶದ ಸಾಲ್ವಡಾರ್ ಅಲೆಂಡೇ ಆ ದೇಶದ ರಾಜನಲ್ಲ. 24.10.1973ರಂದು ಚಿಲಿ ದೇಶದ ಚುನಾಯಿತ ಅಧ್ಯಕ್ಷನಾಗಿ ಅಧಿಕಾರ ಸ್ವೀಕಾರ ಮಾಡಿದ. ಯುಎಸ್‌ಎಯ ಕೈಗೊಂಬೆಯಾಗಲು ನಿರಾಕರಿಸಿದ ಈತನನ್ನು ಕೊಲೆ ಮಾಡಿದವರು ಈಗಿನ ಯುಪಿಎ–2ರ ಗಾಢ ಸ್ನೇಹಿತರಾದ ಯು.ಎಸ್.ಎ. ಸರ್ಕಾರದ ಸಿ.ಐ.ಎ. ಪ್ರೇರಿತ ಮಿಲಿಟರಿ ಅಧಿಕಾರಗಳು(ಈಗ ನಮ್ಮಲ್ಲಿರುವ ಅಧಿಕಾರಸ್ಥರು ಗಮನಿಸಬೇಕು). 11-09-1973ರಂದು ಸಿ.ಐ.ಎ. ಪ್ರೇರಿತ ಚಿಲಿ ಮಿಲಿಟರಿ ವಿರುದ್ಧ ಯುದ್ಧ ಮಾಡುತ್ತಾ ಮಡಿದವನು ಅಧ್ಯಕ್ಷ ಅಲೆಂಡೇ.

ಸಂಸದ ವಿಶ್ವನಾಥ್‌ರವರು ಈ ಐತಿಹಾಸಿಕ ಸತ್ಯವನ್ನು ಅರಿಯಬೇಕು. ಮತ್ತು ಪ್ರಚಾರ ಮಾಡಬೇಕು ಇದರಿಂದಾಗಿ ನಮ್ಮ ದೇಶದ ಸಾಮ್ರಾಜ್ಯಶಾಹಿ ವಿರೋಧಿ ಚಳುವಳಿ ಮತ್ತಷ್ಟು ಗಟ್ಟಿಯಾಗುತ್ತದೆ"

ಜನಶಕ್ತಿ
ಕನ್ನಡ ವಾರಪತ್ರಿಕೆ

ಪೆಟ್ರೋಲ್ ಬೆಲೆ ಏರಿಕೆಯ ಮಹಾ ವಂಚನೆ

ಕೆ. ಪ್ರಕಾಶ್

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸದೆ ಬೇರೆ ದಾರಿಯೇ ಇಲ್ಲ, ಅದು ನಿಜಕ್ಕೂ ಅನಿವಾರ್ಯ ಎನ್ನುವ ಸರ್ಕಾರದ ವಾದದಲ್ಲಿ ದೊಡ್ಡ ವಂಚನೆ ಇದೆ. ಬಂಡವಾಳಿಗರನ್ನು ಕೊಬ್ಬಿಸುವ, ಜನರನ್ನು ಸುಲಿದು ಖಜಾನೆ ತುಂಬಿಕೊಳ್ಳುವ ಸಂಚಿದೆ. ಓದಿ ವಿವರಗಳು


ಮೇರಾ ಭಾರತ ಮಹಾನ್ ಚರಿತ್ರೆಯಲ್ಲಿ ಕಂಡುಕೇಳಿ ಅರಿಯದಷ್ಟು ಪ್ರಮಾಣದ ಭ್ರಷ್ಟಾಚಾರ ಸಂಭವಿಸಿದ್ದೆ ಎಂದು ಹೇಳಲಾಗುತ್ತಿರುವ 2ಜಿ ಹಗರಣ ಮಾಸುವ ಮೊದಲೇ ಗೋದಾವರಿ ಕಣಿವೆಯ ಅಡುಗೆ ಅನಿಲದ ಕಂಟ್ರಾಕ್ಟ್‌ನಲ್ಲಿ ರಿಲಯನ್ಸ್ ಕಂಪನಿ ಮತ್ತು ಮನಮೋಹನಸಿಂಗ್ ಸರ್ಕಾರ ಭಾಗಿಯಾಗಿದೆ ಎಂದು ಸಿಎಜಿ ಪ್ರಾಥಮಿಕ ವರದಿಯಲ್ಲಿ ಹೇಳಲಾಗಿದೆ. ವರದಿ ಬಂದ ಎರಡೇ ದಿನಗಳಲ್ಲಿ ರಿಲಯನ್ಸ್ ಕಂಪನಿಯ ಮಾಲೀಕ ಮುಖೇಶ್ ಅಂಬಾನಿ ಮನಮೋಹನ ಸಿಂಗ್‌ರನ್ನು ನೇರವಾಗಿ ಭೇಟಿ ಮಾಡಿ ಮಾತನಾಡಿದ್ದಾರೆ. ಬೇಕೆಂದ ತಕ್ಷಣ ಪ್ರಧಾನಿಯನ್ನು ಭೇಟಿ ಮಾಡುವ ಸಾಮರ್ಥ್ಯ ಈ ದೇಶದ ಯಾವ ಮಂತ್ರಿಗಿದೆ; ಯಾವ ರಾಜ್ಯದ ಮುಖ್ಯಮಂತ್ರಿಗಿದೆ ? ಅಂಬಾನಿಗೆ ಸಾಧ್ಯವಿದೆ. ಇಂತಹ ಭೇಟಿ ಆದ ಕೆಲವೇ ಗಂಟೆಗಳಲ್ಲಿ ಯುಪಿಎ–2 ಸರ್ಕಾರ ತನ್ನ 2 ವರ್ಷದ ಆಡಳಿತದಲ್ಲಿ 9ನೇ ಬಾರಿಗೆ (24.6.2011) ಪೆಟ್ರೋಲಿಯಂ ವಸ್ತುಗಳ ಬೆಲೆಯನ್ನು ಏರಿಸಿದೆ.

ನಷ್ಟವಾಗುತ್ತಿದೆ ಎಂಬ ಸುಳ್ಳುವಾದ

ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಒಂದೇ ಸಮನೆ ಏರುತ್ತಿರುವಾಗ ಸಾಮಾನ್ಯ ಜನ ಇದರಿಂದ ತತ್ತರಿಸುತ್ತಿರುವಾಗ ಕೇಂದ್ರ ಸರ್ಕಾರ ಇಂತಹ ಏರಿಕೆ ಮಾಡಿದೆ ಮತ್ತು ಸಮರ್ಥಿಸಿಕೊಳ್ಳುತ್ತಿದೆ. ಪ್ರಸಕ್ತ ದರ ಏರಿಕೆ ಮೂಲಕ ತೈಲ ಕಂಪನಿಗಳಿಗೆ ಉಂಟಾಗುತ್ತಿರುವ "Under Recovery"ಯಲ್ಲಿ 21 ಸಾವಿರ ಕೋಟಿ ರೂ.ಗಳನ್ನು ಇದರಿಂದ ತುಂಬಿಸಲಾಗುವುದೆಂದು ಜೊತೆಗೆ ಆಮದು ಸುಂಕ ಮತ್ತು ಅಬಕಾರಿ ಸುಂಗಳಲ್ಲಿ ಕಡಿತ ಮಾಡಿರುವುದರಿಂದ 56 ಸಾವಿರ ಕೋಟಿ ಕೇಂದ್ರ ಸರ್ಕಾರಕ್ಕೆ ನಷ್ಟವಾಗಲಿದೆ ಎಂದೂ ಕಾಂಗ್ರೆಸ್ ಸರ್ಕಾರ ಹೇಳಿಕೊಂಡಿದೆ. ವಾದಕ್ಕೆ ನಿಲುಕದ ಸುಳ್ಳು ಕಾರಣಗಳಿವು. ಜನರನ್ನು ವಂಚಿಸಲು ಉಪಯೋಗಿಸುತ್ತಿರುವ ಸುಳ್ಳು ವಾದಗಳು.

1. ಭಾರತ ತನಗೆ ಬೇಕಾದ ಒಟ್ಟು ಕಚ್ಚಾ ತೈಲದ ಪ್ರಮಾಣದಲ್ಲಿ ಸುಮಾರು ಶೇ.80 ರಷ್ಟು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತದೆ ಮತ್ತು ಸುಮಾರು ಶೇ. 20 ರಷ್ಟು ದೇಶದ ಒಳಗೇ ಉತ್ಪಾದಿಸುತ್ತದೆ. ತೈಲ ಮತ್ತು ನೈಸರ್ಗಿಕ ಅನಿಲ ಕಾರ್ಪೋರೇಷನ್(ONGC) ತಾನು ಉತ್ಪಾದಿಸುವ ಕಚ್ಚಾ ತೈಲವನ್ನು ಭಾರತದ ಸಂಸ್ಕರಣಾ ಘಟಕಗಳಿಗೆ ಕಡಿಮೆ ದರದಲ್ಲಿ ಬದಗಿಸುತ್ತದೆ. ಈಗಿನ ಅಂತರರಾಷ್ಟ್ರೀಯ ಬೆಲೆಗಳು ಬ್ಯಾರೆಲ್‌ಗೆ 110 ಡಾಲರ್‌ಗಳು ಎಂದುಕೊಂಡರೂ, ONGC ನೀಡುವ ಕಚ್ಚಾ ತೈಲದ ಕಡಿಮೆ ಬೆಲೆಯನ್ನು ಪರಿಗಣಿಸಿದರೆ ಸರಾಸರಿ ಒಂದು ಬ್ಯಾರಲ್‌ಗೆ ಸುಮಾರು 100 ಡಾಲರ್‌ಗಳಾಗುತ್ತವೆ.

ಒಂದು ಬ್ಯಾರೆಲ್ ಎಂದರೆ 158.99 ಲೀಟರ್‌ಗಳು. ಈ ಪ್ರಕಾರ ಒಂದು ಲೀಟರ್ ಕಚ್ಚಾ ತೈಲಕ್ಕೆ 28 ರೂ.ಗಳಾಗುತ್ತವೆ. ವಿಚಿತ್ರವೇನೆಂದರೆ ಮಾಧ್ಯಮಗಳಲ್ಲಿ ಡಾಲರ್ ಮತ್ತು ಬ್ಯಾರೆಲ್‌ಗಳ ಆಧಾರದಲ್ಲಿ ಮಾತನಾಡುತ್ತಿರುತ್ತಾರೆ. ಆದರೆ ಸಾಮಾನ್ಯ ಜನ ಸಮಸ್ಯೆ ಅನುಭವಿಸುವುದು ಪ್ರತಿ ಲೀಟರ್‌ಗೆ ಅವರು ಪಾವತಿಸುವ ರೂಪಾಯಿಗಳಲ್ಲಿ.



ಸಂಸ್ಕರಣೆ ವೆಚ್ಚ ಕಾರಣ ಪೂರ್ತಿ ಹುಸಿ

ಇನ್ನು ಮುಖ್ಯವಾಗಿ ವೆಚ್ಚ ಎಂದು ಬರುವುದು (ಕಚ್ಚಾ ತೈಲದಿಂದ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಮುಂತಾದ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸಲು ಮಾಡುವ) ಸಂಸ್ಕರಣೆ ಹಾಗೂ ಸಾಗಾಣಿಕೆ ಮಾಡಲು ಆಗುವ ವೆಚ್ಚ. ಒಂದು ಅಂದಾಜಿನ ಪ್ರಕಾರ ಒಂದು ಲೀಟರ್ ಸಿದ್ಧಗೊಂಡ ಪೆಟ್ರೋಲಿಯಂ ಉತ್ಪನ್ನದಲ್ಲಿ ಶೇ. 93–94 ರಷ್ಟು ಕಚ್ಚಾ ತೈಲದ ಬೆಲೆಯಿರುತ್ತದೆ. ಅಂದರೆ ಉಳಿದ ಶೇ. 6–7 ರಷ್ಟು ಮಾತ್ರವೇ ಸಂಸ್ಕರಣಾ ವೆಚ್ಚ ಮತ್ತು ಸಾಗಾಣಿಕೆ ವೆಚ್ಚವಾಗುತ್ತದೆ. ಈ ಅಂದಾಜಿನ ಪ್ರಕಾರ ಲೆಕ್ಕ ಹಾಕಿದಾಗ, ಬೆಂಗಳೂರಿನಲ್ಲಿ ಈಗಿರುವ ಒಂದು ಲೀಟರ್ ಪೆಟ್ರೋಲ್ ಬೆಲೆ ರೂ.71ನ್ನು ಆಧಾರವಾಗಿಟ್ಟುಕೊಂಡರೆ, ಒಂದು ಬ್ಯಾರೆಲ್ ಕಚ್ಚಾ ತೈಲ ಸುಮಾರು 250 ಡಾಲರ್‌ಗಳಿಗೂ ಹೆಚ್ಚು ಎಂದಿರಬೇಕಾಗುತ್ತದೆ. ಆದ್ದರಿಂದ ಸರ್ಕಾರದ್ದು ಜನರನ್ನು ಮೂರ್ಖರನ್ನಾಗಿಸುವ ವಾದ.

ಕಚ್ಚಾ ತೈಲದಿಂದ ಒಂದು ಲೀಟರ್ ಪೆಟ್ರೋಲ್‌ನ್ನು ಸಂಸ್ಕರಣೆ ಮಾಡಲು ನಿಜವಾಗಿಯೂ ಆಗುವ ವೆಚ್ಚವೆಷ್ಟು ?. ಈ ಸದ್ಯ ದೇಶದಲ್ಲಿ ಅತ್ಯಂತ ದೊಡ್ಡ ಮತ್ತು ಆಧುನಿಕ ಸಂಸ್ಕರಣಾ ಘಟಕ ಇರುವುದು ರಿಲಯನ್ಸ್ ಕಂಪನಿಯದ್ದು. ಗುಜರಾತ್‌ನ ಜಾಮ್‌ನಗರದಲ್ಲಿರುವ ಈ ಘಟಕದಲ್ಲಿ ಒಂದು ಲೀಟರ್ ಸಂಸ್ಕರಣೆಗೆ ಕನಿಷ್ಟ 20 ಪೈಸೆಯಿಂದ ಹಿಡಿದು 1 ರೂಪಾಯಿವರೆಗೆ ಖರ್ಚು ಬರುತ್ತದೆ. ಒಂದು ರೂಪಾಯಿ ಎಂಬುದನ್ನೇ ಲೆಕ್ಕಕ್ಕೆ ತೆಗೆದುಕೊಂಡರೂ ಪೆಟ್ರೋಲ್‌ಗಾಗಲೀ, ಡೀಸೆಲ್‌ಗಾಗಲೀ 30 ರೂಪಾಯಿಗಳಿಗೂ ಹೆಚ್ಚಾಗುವುದಿಲ್ಲ. ಗಮನಿಸಬೇಕಾದ್ದು ಏನೆಂದರೆ ಸಂಸ್ಕರಣಾ ಹಂತದಲ್ಲಿ ಪೆಟ್ರೋಲ್, ಡೀಸೆಲ್, ಸೀಮೆಎಣ್ಣೆ ಬೆಲೆಗಳ ಯಾವುದೇ ವ್ಯತ್ಯಾಸ ಇರುವುದಿಲ್ಲ. ಸಾರ್ವಜನಿಕರು ವಿವಿಧ ರೀತಿಯ ಬೆಲೆಗಳನ್ನು ಪಾವತಿಸುವುದು ಕೇಂದ್ರ–ರಾಜ್ಯ ಸರ್ಕಾರಗಳು ವಿಧಿಸುವ ವಿವಿಧ ಪ್ರಮಾಣದ ತೆರಿಗೆಗಳ ಕಾರಣದಿಂದ. ಇದರ ಜೊತೆಗೆ ಸಂಸ್ಕರಣಾ ಲಾಭ, ವ್ಯಾಪಾರದ ಲಾಭ, ಸಾಗಾಣಿಕೆಯ ವೆಚ್ಚ ಎಲ್ಲವನ್ನೂ ಸೇರಿಸಿದರೂ ಸರ್ಕಾರ ಹೇಳುವ "Under Recoveries" ಎಂಬುದರ ಹತ್ತಿರ ಕೂಡಾ ಸುಳಿಯುವುದಿಲ್ಲ.

2. ಗ್ರಾಹಕರು ಮೇಲಿನ ಹೊರೆಯನ್ನು ಕಡಿಮೆ ಮಾಡಲು ಭಾರತ ಸರ್ಕಾರ ಕಚ್ಚಾ ತೈಲದ ಮೇಲಿನ ಆಮದು ಸುಂಕವನ್ನು ತೆಗೆದುಹಾಕಿದೆ ಮತ್ತು ಪೆಟ್ರೋಲಿಯಂ ವಸ್ತುಗಳ ಮೇಲಿನ ಆಮದು ಸುಂಕವನ್ನು ಕಡಿತಗೊಳಿಸಿದೆ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ತೀವ್ರವಾಗಿ ಕಡಿತಗೊಳಿಸಿದೆ ಎಂದು ಜಾಹಿರಾತನ್ನು ನೀಡಿದೆ.

ಇದರಲ್ಲಿ ಮುಖ್ಯವಾಗಿ ಎರಡು ಅಂಶಗಳನ್ನು ಗಮನಿಸಬೇಕು. ಭಾರತವು ವಿದೇಶಗಳಿಂದ ಕಚ್ಚಾ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಪೆಟ್ರೋಲಿಯಂ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವುದಿಲ್ಲ. ದೇಶದೊಳಗೆ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸುತ್ತದೆ. ದೇಶದ ಬೇಡಿಕೆಗಿಂತ ಹೆಚ್ಚಾಗಿ ಪೆಟ್ರೋಲಿಯಂ ಉತ್ಪನ್ನಗಳನ್ನು ತಯಾರಿಸಿ ವಿದೇಶಗಳಿಗೂ ದೊಡ್ಡ ಪ್ರಮಾಣದಲ್ಲಿ ರಫ್ತು ಮಾಡುತ್ತದೆ. ಈ ಪ್ರಕ್ರಿಯೆಯಲ್ಲಿ ರಿಲಯನ್ಸ್‌ನಂತಹ ಕಂಪನಿಗಳು ಅಪಾರ ಲಾಭಗಳಿಸುತ್ತಿವೆ. ಪೆಟ್ರೋಲಿಯಂ ಉತ್ಪನ್ನಗಳಿಗೆ ಆಮದು ಸುಂಕವನ್ನು ಕಡಿತಗೊಳಿಸಲಾಗಿದೆ ಎಂದು ಹೇಳುತ್ತಿರುವುದು ದಾರಿ ತಪ್ಪಿಸುವ ವಾದ. ಇದೇನಾದರೂ ಇದ್ದರೆ ತೀರಾ ನಗಣ್ಯವಾದದ್ದು.

ಎರಡನೆಯದಾಗಿ, ಸುಂಕಗಳನ್ನು ಕಡಿತಗೊಳಿಸಲಾಗಿದೆ ಆದ್ದರಿಂದ ಸರ್ಕಾರ 49,000 ಕೋಟಿ ರೂ.ಗಳನ್ನು ತ್ಯಾಗ ಮಾಡಿದೆ ಎಂದು ಬಿಂಬಿಸಿಕೊಂಡಿದೆ.

ಈ ಮೊದಲು ಹೇಳಿದ ಹಾಗೆ ಪೆಟ್ರೋಲ್ ಅಥವಾ ಡೀಸೆಲ್‌ನ್ನು ಒಂದು ಲೀಟರ್ ತಯಾರಿಸಲು ಆಗುವ ವೆಚ್ಚ 30 ರೂ.ಗಳಿಗಿಂತ ಹೆಚ್ಚಾಗಲು ಸಾಧ್ಯವಿಲ್ಲ. ಆದರೆ ಭಾರತ ಸರ್ಕಾರ ಜಗತ್ತಿನಲ್ಲೇ ಅತಿಹೆಚ್ಚು ಎನ್ನಬಹುದಾದ ತೆರಿಗೆಗಳನ್ನು ವಿಧಿಸಿದೆ. ಇದರಿಂದಾಗಿ ಪೆಟ್ರೋಲ್‌ನ ಪ್ರತಿ ಲೀಟರ್ ಬೆಲೆಯಲ್ಲಿ ಶೇ.51 ರಿಂದ 56 ರಷ್ಟು ತೆರಿಗೆಯನ್ನು ಡೀಸೆಲ್‌ನ ಪ್ರತಿ ಲೀಟರ್ ಬೆಲೆಯಲ್ಲಿ ಶೇ.30 ಕ್ಕೂ ಹೆಚ್ಚು ತೆರಿಗೆಯನ್ನು ವಸೂಲಿ ಮಾಡಲಾಗುತ್ತಿದೆ. ಹೀಗಾಗಿ ಕಡಿತಗೊಳಿಸಿದ್ದಾದರೂ ಏನನ್ನು ಎನ್ನುವುದು ಪ್ರಶ್ನೆ.

3. ಆಮದು ತೆರಿಗೆಯನ್ನು ಸ್ವಲ್ಪ ಪ್ರಮಾಣದಲ್ಲಿ ಕಡಿತಗೊಳಿಸಿದರೂ ಸರ್ಕಾರಕ್ಕೆ ನಷ್ಟವಾಗುವುದಿಲ್ಲ ಎಂಬ ಅಂಶವನ್ನು ಸರ್ಕಾರ ಮುಚ್ಚಿಡುತ್ತಿದೆ. ಒಂದು ಉದಾಹರಣೆಯನ್ನೇ ಗಮನಿಸಿ :– ಈಗ ಅಂತರರಾಷ್ಟ್ರೀಯ ಕಚ್ಚಾ ತೈಲ ಒಂದು ಬ್ಯಾರೆಲ್‌ಗೆ 110 ಡಾಲರ್ ಇದೆ ಎನ್ನಲಾಗುತ್ತಿದೆ. ಒಂದು ವರ್ಷದ ಹಿಂದೆ ಇದು 75 ಡಾಲರ್ ಇತ್ತು. ಆಮದು ಮಾಡುವಾಗ ಭಾರತ ಸರ್ಕಾರ ಶೇ.10 ರಷ್ಟು ಸುಂಕವನ್ನು ವಿಧಿಸಿದೆ ಎಂದುಕೊಳ್ಳೋಣ. ಒಂದು ವರ್ಷದ ಹಿಂದೆ ಒಂದು ಬ್ಯಾರೆಲ್ ಮೇಲೆ ಶೇ.10 ರ ಆಮದು ಸುಂಕದ ಆಧಾರದಲ್ಲಿ ಭಾರತ ಸರ್ಕಾರಕ್ಕೆ 7.5 ಡಾಲರ್ ಆದಾಯ ಬರುತ್ತಿತ್ತು. ಈಗ ಅದೇ ಪ್ರಮಾಣದ ತೆರಿಗೆಯಿಂದ 11 ಡಾಲರ್ ಆದಾಯ ಬರುತ್ತಿದೆ. ಸುಂಕದ ಪ್ರಮಾಣದಲ್ಲಿ ಹೆಚ್ಚಳವಿಲ್ಲದೆಯೇ ಸರ್ಕಾರಕ್ಕೆ 3.5 ಡಾಲರ್ ಹೆಚ್ಚು ಆದಾಯ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಸರ್ಕಾರ ಶೇ. 4 ರಷ್ಟು ಸುಂಕ ಇಳಿಸಿದರೂ ಆದಾಯ ಮೊದಲಿನಷ್ಟೇ ಇರುತ್ತದೆ

ಪುಟ 15ಕ್ಕೆ

ನೆರೆ ಹೊರೆ

ಆಂಧ್ರ ಪ್ರದೇಶ

ತೀವ್ರಗೊಂಡ ಭೂಮಿ ಹೋರಾಟ-ಶಾಸಕರನ್ನು ಅಟ್ಟಾಡಿಸಿದ ಜನತೆ

ಆಂಧ್ರ ಪ್ರದೇಶದಲ್ಲಿ ಭೂಮಿ ಪ್ರಶ್ನೆಯನ್ನು ಎತ್ತಿ ನಡೆಯುತ್ತಿರುವ ಚಳವಳಿ ಮತ್ತಷ್ಟು ತೀವ್ರಗೊಂಡಿದೆ. ಭೂಮಿ ಸಿಕ್ಕಿಯೇ ಸಿದ್ಧ ಎಂಬ ನಿಟ್ಟಿನಲ್ಲಿ ನಡೆಯುತ್ತಿರುವ ಚಳವಳಿಯ ತೀವ್ರತೆ ಎಷ್ಟೆಂದರೆ ಇದಕ್ಕೆ ವಿರುದ್ಧ ಲಾಬಿ ನಡೆಸುವ ಜನಪ್ರತಿನಿಧಿಗಳನ್ನು ಅಟ್ಟಾಡಿಸಿಕೊಳ್ಳುವ ಮಟ್ಟಿಗೆ ತಲುಪಿದೆ.

ವಿಶಾಖಪಟ್ಟಣದಲ್ಲಿ ಭೂಮಿಯ ಹೋರಾಟ ನಡೆಸುತ್ತಿರುವ ಬುಡಕಟ್ಟು ಜನರು ಸ್ಥಳೀಯ ಶಾಸಕ ಸೋಮ ಹಾಗೂ ಮಂಡಲ ಪಂಚಾಯತ್‌ನ ಅಧ್ಯಕ್ಷ ದನ್ನೇ ರಾವ್ ಮೇಲೆ ಎಗರಿ ಬಿದ್ದಿದ್ದಾರೆ. ತಾವು ವಶಪಡಿಸಿಕೊಂಡ ಭೂಮಿಯಲ್ಲಿ ಗಣಿಗಾರಿಕೆಗೆ ಅವಕಾಶ ನೀಡ ಬೇಕೆಂದು ಬಲವಂತಪಡಿಸಲು ಇವರು ಇಲ್ಲಿಗೆ ಆಗಮಿಸಿದ್ದರು.

ಬುಡಕಟ್ಟು ಜನರ ರೊಚ್ಚು ಎಷ್ಟಿತ್ತೆಂದರೆ, ಮೇ 11ರಂದು ಡುಂಬ್ರಿಗುಡದ ಖಂಡ್ರುಂ ಪ್ರದೇಶದಲ್ಲಿ ನಡೆದ ಬಹಿರಂಗ ರ‍್ಯಾಲಿಯ ಸಂದರ್ಭದಲ್ಲಿ ಮಂಡಲ ಪಂಚಾಯತ್ ಅಧ್ಯಕ್ಷನ ಶರ್ಟ್‌ನ್ನು ಹರಿದು ಹಾಕಲಾಯಿತು. ಅಲ್ಲದೆ ಸಾರ್ವಜನಿಕವಾಗಿ ಗೂಸಾ ನೀಡಲು ಮುಂದಾದರು. ಕಾಲ್ಕಿತ್ತ ಆತನನ್ನು ಪ್ರತಿಭಟನಾಕಾರರು ಅಟ್ಟಾಡಿಸಿಕೊಂಡು ಹೊಡೆದರು.

ಬುಡಕಟ್ಟು ಜನರ ಆಕ್ರೋಶ ಇಷ್ಟಕ್ಕೆ ನಿಲ್ಲಲಿಲ್ಲ. ಇದೇ ಭೂಮಿಯನ್ನು ಬುಡಕಟ್ಟು ಜನರಿಂದ ಕಸಿದುಕೊಂಡು ಖಾಸಗಿ ಗಣಿ ಲಾಬಿಗಳಿಗೆ ನೀಡಲು ಮುಂದಾಗಿದ್ದರು ಎಂಬ ಶಂಕೆಯಿಂದ ಸ್ಥಳೀಯ ತೆಲುಗು ದೇಶಂ ಶಾಸಕನ ವಾಹನವನ್ನು ಧ್ವಂಸಗೊಳಿಸ ಲಾಯಿತು. ಶಾಸಕ ಕೈಗೆ ಸಿಕ್ಕಿದ್ದರೆ ಧರ್ಮದೇಟು ಗ್ಯಾರಂಟಿ ಯಾಗಿತ್ತು. ಆದರೆ, ಶಾಸಕ ಸೋಮ ಯಾವುದೇ ಗಾಯ ಗಳಿಲ್ಲದೆ ತಪ್ಪಿಸಿ ಕೊಳ್ಳುವಲ್ಲಿ ಯಶಸ್ವಿ ಯಾಗಿದ್ದ!


ಟಿಡಿಪಿ ಶಾಸಕ ಸೋಮರನ್ನು ಜನರು ಅಟ್ಟಾಡಿಸಿಕೊಂಡು ಹೋದರು.

ಭೂಮಿ ದೇವಿ ಎಂಬ ಬುಡಕಟ್ಟು ಮಹಿಳೆಯ ಹೆಸರಲ್ಲಿ ಗಣಿಗಾರಿಕೆಗಾಗಿ ಭೂಮಿ ಯನ್ನು ಪಡೆಯಲು ಪರವಾನಿಗೆಯನ್ನು ಪಡೆಯಲಾಗಿತ್ತು. ಅಷ್ಟೇ ಅಲ್ಲ, ಈ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಲು ಪ್ರಾಥಮಿಕ ಅನುಮತಿ ಯನ್ನೂ ನೀಡಲಾಗಿತ್ತು. ವಿಚಿತ್ರ ಎಂದರೆ ಅಂಥ ಹೆಸರು ಮತ್ತು ವಿಳಾಸದವರು ಆ ಪ್ರದೇಶದವರು ಯಾರೂ ಇರಲಿಲ್ಲ ಎಂಬುದು ಚಳವಳಿಯ ನಾಯಕರು ನಡೆಸಿದ ತನಿಖೆಯಲ್ಲಿ ಬಯಲಾಗಿದೆ. ಇದು ಸರ್ಕಾರದ ಗಣಿಗಾರಿಕೆ ಕುರಿತ ಧೋರಣೆ ಮತ್ತು ಗಣಿ ಲಾಬಿಯ ಸಾಮರ್ಥ್ಯವನ್ನು ಬಿಚ್ಚಿಟ್ಟಿದೆ. ಗಣಿಗಾರಿಕೆಗಾಗಿ ಅಧಿಕಾರಿಗಳು, ಜನಪ್ರತಿನಿಧಿ,ಗಳನ್ನು ಎಂಥ ಕೃತ್ಯಕ್ಕೂ ಹೇಸು ವುದಿಲ್ಲ ಎಂಬುದನ್ನು ಇದು ತೋರಿಸಿಕೊಟ್ಟಿದೆ.

ಇಂಥ ಅಕ್ರಮ ಗಣಿಗಾರಿಕೆ ವಿರುದ್ಧ ಹಾಗೂ ಸರ್ಕಾರಿ ಜಮೀನನ್ನು ಬುಡಕಟ್ಟು ಜನರಿಗೆ ಹಂಚುವಂತೆ ಕೋರಿ ಆಂಧ್ರ ಪ್ರದೇಶ ಗಿರಿಜನ ಸಂಘಂ ಪ್ರಬಲ ಚಳವಳಿಯನ್ನೇ ಸಂಘಟಿಸಿದೆ. ಗಣಿ ಲೈಸನ್ಸ್ ರದ್ದು ಮಾಡಿ, ಭೂಮಿಯನ್ನು ನೀಡಿ ಎಂಬ ಘೋಷಣೆಯೊಂದಿಗೆ ಜಂಕರ ವಲಸ ಎಂಬ ಗ್ರಾಮದಿಂದ ಆರಂಭವಾದ ಪಾದಯಾತ್ರೆ ಪಂಚಾಯತ್‌ನ ಎಲ್ಲ ಗ್ರಾಮಗಳಲ್ಲೂ ಮುಂದುವರಿಯಿತು. ಈ ಜಾಥಾದ ಸಮಾರೋಪ ಮೇ 11ರಂದು ಖಂಡ್ರುಂ ಗ್ರಾಮದಲ್ಲಿ ನಡೆಯಿತು. ಗಣಿ ಲಾಬಿಗಾಗಿ ಭೂಮಿ ನೀಡುವಂತೆ ಒತ್ತಾಯ ಮಾಡುತ್ತಿದ್ದ ಈ ಜನಪ್ರತಿನಿಧಿಗಳು ಪ್ರತಿಭಟನಾಕಾರರ ಮನವೊಲಿಸಲೆಂದೇ ರ‍್ಯಾಲಿಗೆ ಆಗಮಿಸಿದ್ದರು. ಆಹ್ವಾನವಿಲ್ಲದೆ ಬಂದಿದ್ದ ಇವರನ್ನು ನೋಡಿಯೇ ಬುಡಕಟ್ಟು ಜನರ ಪಿತ್ತ ನೆತ್ತಿಗೇರಿತ್ತು.

ಮಂಡಲ ಪಂಚಾಯತ್ ಅಧ್ಯಕ್ಷ ಮತ್ತು ಸ್ಥಳೀಯ ಶಾಸಕನಿಗೆ ಧರ್ಮ ದೇಟು ನೀಡಿದ್ದಲ್ಲದೆ ಪರಾರಿ ಯಾಗುತ್ತಿರುವ ಅವರನ್ನು ಸುಮಾರು ಒಂದು ಕಿ.ಮೀ. ವರೆಗೆ ಓಡಿಸಿಕೊಂಡು ಹೋಗ ಲಾಯಿತು. ಕೈಗೆ ಸಿಕ್ಕ ಶಾಸಕ, ತಾನು ಹೋರಾಟಕ್ಕೆ ಬೆಂಬಲ ನೀಡುತ್ತೇನೆ, ಗಣಿ ಲೈಸನ್ಸ್ ರದ್ದುಗೊಳಿಸುತ್ತೇನೆ ಎಂಬ ಭರವಸೆ ಯನ್ನು ಸಾರ್ವ ಜನಿಕವಾಗಿ ನೀಡ ಬೇಕಾಯಿತು. ಈ ಬಗ್ಗೆ ರಾಜ್ಯ ಸರ್ಕಾರದ ಜೊತೆ ಮಾತುಕತೆ ನಡೆಸುವ ಭರವಸೆಯೂ ಈತನ ಬಾಯಿಯಿಂದ ಕೇಳಿಬಂತು.

ಒರಿಸ್ಸಾ

ಪಾಸ್ಕೋ ಚಳವಳಿಗೆ ಮಣಿದ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆಗೆ ತಾತ್ಕಾಲಿಕ ಬ್ರೇಕ್

ಒರಿಸ್ಸಾದ ಪ್ರಜಾಸತ್ತಾತ್ಮಕ ಚಳವಳಿಯಲ್ಲಿ ಜೂನ್ 21, 2011 ಪ್ರಮುಖ ಮೈಲು ಗಲ್ಲಾಯಿತು. ಇದಕ್ಕೆ ಕಾರಣ, ಅಂದು ನಡೆದ ಭೂಮಿ ಚಳವಳಿ. ಒರಿಸ್ಸಾದ ಪ್ಯಾರಾದೀಪ್‌ನಲ್ಲಿ ಪಾಸ್ಕೋ ಸ್ಥಾವರಕ್ಕಾಗಿ ಸರ್ಕಾರ ನಡೆಸಿರುವ ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ಜನ ನಡೆಸಿದ ಹೋರಾಟ ನಿಜಕ್ಕೂ ಸಮರಧೀರವಾಗಿತ್ತು.

ಧಿಂಕಿಯಾ ಗೋವಿಂದಪುರ ಮತ್ತು ನವಗಾಂವ್‌ನಲ್ಲಿ ಸ್ಥಳೀಯ ಜನತೆ ನಡೆಸಿದ ಹೋರಾಟಕ್ಕೆ ಪ್ರಜಾಸತ್ತಾತ್ಮಕ ಚಳವಳಿಯ ಬೆಂಬಲ ಇತ್ತು. ರಾಜ್ಯ, ಹೊರ ರಾಜ್ಯದಿಂದಲೂ ಬೆಂಬಲ ಹರಿದುಬಂದಿತ್ತು. ಇದರಿಂದಾಗಿ ರಾಜ್ಯ ಸರ್ಕಾರ ಭೂಸ್ವಾಧೀನದ ತನ್ನ ಕಾರ್ಯಾಚರಣೆಗೆ ತೀವ್ರ ಪ್ರತಿರೋಧ ಎದುರಿಸಬೇಕಾಯಿತು. ತನ್ನ ನಿಲುವಿನಿಂದ ಹಿಂದೆ ಸರಿಯುವುದಿಲ್ಲ ಎಂದು ಸರ್ಕಾರ ಘೋಷಿಸಿದರೂ ತಾತ್ಕಾಲಿಕವಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬೇಕಾಯಿತು.

ಲೋಕಸಭೆಯಲ್ಲಿ ಸಿಪಿಐಎಂ ಸಂಸದೀಯ ಪಕ್ಷದ ನಾಯಕ ಬಸುದೇವ ಆಚಾರ್ಯ, ಸಿಪಿಐ ನಾಯಕ ಗುರುದಾಸ ದಾಸ್‌ಗುಪ್ತಾ, ಫಾರ್ವರ್ಡ್ ಬ್ಲಾಕ್‌ನ ನರಹರಿ ಮಹತೊ ಅವರೊಂದಿಗೆ ಸಿಪಿಐಎಂನ ಒರಿಸ್ಸಾ ರಾಜ್ಯ ಕಾರ್ಯದರ್ಶಿ ಜನಾರ್ದನ ಪಟಿ, ರಾಜ್ಯ ಸಮಿತಿ ಸದಸ್ಯರಾದ ಸುರೇಶ್ ಪಾಣಿಗ್ರಹಿ, ಕಟಕ್ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಉಲ್ಲಾಸ್ ಸ್ವಾಯ್ನ್ ಸಿಪಿಐ ಮತ್ತು ಫಾರ್ವರ್ಡ್ ಬ್ಲಾಕ್‌ನ ಸ್ಥಳೀಯ ನಾಯಕರೊಂದಿಗೆ ಧಿಂಕಿಯಾದಿಂದ ಗೋವಿಂದ ಪುರದ ವರೆಗೆ ಕಾಲ್ನಡಿಗೆ ಜಾಥಾ ನಡೆಸಿದರು. ಈ ಮೂಲಕ ಹಲವು ದಿನಗಳಿಂದ ಇಲ್ಲಿ ನಡೆಯುತ್ತಿರುವ ಭೂಮಿ ಹೋರಾಟಕ್ಕೆ ಸ್ಫೂರ್ತಿ ನೀಡಿದರು.

ಚಳವಳಿಯನ್ನು ಮುರಿಯಲು ರಾಜ್ಯ ಸರ್ಕಾರ ಬೃಹತ್ ಪ್ರಮಾಣದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿತ್ತು. ಇದನ್ನು ಲೆಕ್ಕಿಸದೆ ಪ್ರತಿಭಟನಾಕಾರರು ಮಾನವ ಸರಪಳಿ ನಡೆಸಿದ್ದಲ್ಲದೆ ಧರಣಿಯನ್ನೂ ನಡೆಸಿದರು. ಇದರಲ್ಲಿ ಮಹಿಳೆಯರು, ಮಕ್ಕಳು ದೊಡ್ಡ ಪ್ರಮಾಣದಲ್ಲಿದ್ದರು.

ಒಮ್ಮೆ ಮಳೆ, ಮತ್ತೆ ಬಿಸಿಲು... ಹೀಗೆ ಪ್ರತಿಕೂಲ ಹವಾಮಾನದ ಮಧ್ಯೆಯೂ ಪ್ರತಿಭಟನೆ ನಿರಂತರವಾಗಿ ಸಾಗಿತ್ತು. ಸಣ್ಣ ಮತ್ತು ಅತಿ ಸಣ್ಣ ರೈತರು, ಕೃಷಿ ಕೂಲಿ ಕಾರ್ಮಿಕರು, ಗೂಡಂಗಡಿ ವ್ಯಾಪಾರಿಗಳು ಹಾಗೂ ಬಡ ಹಾಗೂ ಮಧ್ಯಮ ವರ್ಗದ ಜನಸ್ತೋಮವನ್ನು ಉದ್ದೇಶಿಸಿ ಸಿಪಿಐಎಂ ನಾಯಕ ಬಸುದೇವ ಆಚಾರ್ಯ ಮಾತನಾಡಿದರು.

ಪಾಸ್ಕೋ ಚಳವಳಿಗೆ ಸಂಪೂರ್ಣ ಬೆಂಬಲ ಘೋಷಿಸಿದ ಆಚಾರ್ಯ, ಪಾಸ್ಕೋ ಸ್ಥಾವರವನ್ನು ಇಲ್ಲಿಂದ ಮತ್ತೊಂದು ಕಡೆಗೆ ಸ್ಥಳಾಂತರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು. ಅಲ್ಲದೆ, ಬಲವಂತದ ಭೂಸ್ವಾಧೀನ ವನ್ನು ತಕ್ಷಣದಿಂದ ಕೈಬಿಡುವಂತೆ ಆಗ್ರಹಿಸಿದರು. ಈಗಾಗಲೇ ಪ್ಯಾರಾದೀಪ್‌ನಲ್ಲಿ ಬಂದರು ಇದೆ. ಇದರ 8–10 ಕಿ.ಮೀ. ದೂರದಲ್ಲಿ ಪಾಸ್ಕೋ ಮತ್ತೊಂದು ಬಂದರನ್ನು ನಿರ್ಮಿಸುವ ಅಗತ್ಯವಿಲ್ಲ, ಪಾಸ್ಕೋದ ಸರಕನ್ನು ನಿರ್ವಹಿಸಲು ಈಗಿರುವ ಬಂದರಿಗೆ ಎಲ್ಲ ಸಾಮರ್ಥ್ಯವಿದೆ ಎಂದು ಆಚಾರ್ಯ ಅಭಿಪ್ರಾಯಪಟ್ಟರು.

ಕೇಂದ್ರದ ಅರಣ್ಯ ಮತ್ತು ಪರಿಸರ ಖಾತೆಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ಬಸುದೇವ ಆಚಾರ್ಯ, ಎರಡು ಉಪ ಸಮಿತಿಗಳು ನಕಾರಾತ್ಮಕ ವರದಿ ನೀಡಿದ್ದರೂ ಪಾಸ್ಕೋ ಯೋಜನೆಗೆ ಅನುಮತಿ ನೀಡಿದ ಇಲಾಖೆಯ ನಿರ್ಧಾರಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಈ ಬಗ್ಗೆ ಕೇಂದ್ರಕ್ಕೆ ತಪ್ಪು ಮಾಹಿತಿ ನೀಡಿದ ಬಿಜೆಡಿ ಸರ್ಕಾರದ ವರದಿಯನ್ನು ಖಂಡಿಸಿದರು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಡಪಕ್ಷಗಳ ವಿವಿಧ ನಾಯಕರು ಮಾತ ನಾಡಿದರು. ಅಂತಿಮವಾಗಿ, ಬಲವಂತದ ಭೂಸ್ವಾಧೀನವನ್ನು ಸಧ್ಯಕ್ಕೆ ತಡೆಹಿಡಿದಿರು ವುದಾಗಿ ಜಿಲ್ಲಾಡಳಿತ ಘೋಷಿಸಿತು. ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತ ಗೊಂಡಿರುವುದಕ್ಕೆ ಚಳವಳಿಗಾರರು ಅತೀವ ಹರ್ಷ ವ್ಯಕ್ತಪಡಿಸಿದರು. ಹೋರಾಟಕ್ಕೆ ಸಿಕ್ಕ ಬೆಂಬಲದಿಂದ ಸ್ಫೂರ್ತಿ ಇಮ್ಮಡಿಸಿತು. ●

ತ್ರಿಪುರಾ

ತೈಲ ಬೆಲೆ ಏರಿಕೆ ತ್ರಿಪುರಾ ಬಂದ್ ಯಶಸ್ವಿ

ಯುಪಿಎ ಸರ್ಕಾರದ ತೈಲ ಬೆಲೆ ಏರಿಕೆ ವಿರುದ್ಧ ತ್ರಿಪುರಾದ್ಯಂತ ಕರೆ ನೀಡಿದ 12 ಗಂಟೆಗಳ ಮುಷ್ಕರಕ್ಕೆ ವ್ಯಾಪಕ ಜನಬೆಂಬಲ ವ್ಯಕ್ತವಾಗಿದೆ. ಎಡ ರಂಗ ಕರೆ ನೀಡಿದ್ದ ಈ ಮುಷ್ಕರದಲ್ಲಿ ಜನ ಸ್ವಯಂಪ್ರೇರಿತರಾಗಿ ಪಾಲ್ಗೊಂಡಿದ್ದು, ಜನಜೀವನ ವಸ್ತುಶಃ ಸ್ತಬ್ದಗೊಂಡಿತ್ತು.

ರಾಜ್ಯದ ಎಲ್ಲ ವಾಣಿಜ್ಯ ಮಾರುಕಟ್ಟೆಗಳು, ವ್ಯಾಪಾರ ಕೇಂದ್ರಗಳು ಮುಚ್ಚಿದ್ದವು. ಶಾಲಾ–ಕಾಲೇಜುಗಳು ಕಾರ್ಯನಿರ್ವಹಿಸಲಿಲ್ಲ. ರಸ್ತೆಗಳಲ್ಲಿ ವಾಹನ ಸಂಚಾರ ಸಂಪೂರ್ಣ ಸ್ತಬ್ದಗೊಂಡಿತ್ತು. ಜನಸಂಚಾರ ಬೆರಳೆಣಿಕೆಯಷ್ಟಿತ್ತು.

ತೈಲ ಬೆಲೆ ಏರಿಕೆ ವಿರುದ್ಧದ ಬಂದ್‌ಗೆ ಜನ ನೀಡಿದ ಬೆಂಬಲಕ್ಕೆ ಎಡರಂಗ ಅಭಿನಂದನೆ ಸಲ್ಲಿಸಿದೆ. ಕೇಂದ್ರದ ನಿರ್ಧಾರ ಜನಸಾಮಾನ್ಯರ ಮೇಲೆ ಮತ್ತಷ್ಟು ಹೊರೆ ಹಾಕಿದಂತಾಗಿದೆ. ಇದರ ಪರಿಣಾಮವಾಗಿ ಅಗತ್ಯ ವಸ್ತುಗಳ ಬೆಲೆಯಲ್ಲೂ ಏರಿಕೆ ಉಂಟಾಗಲಿದ್ದು, ಕೇಂದ್ರ ತಕ್ಷಣ ಏರಿಸಿದ ಬೆಲೆಯನ್ನು ಹಿಂದಕ್ಕೆ ಪಡೆಯಬೇಕೆಂದು ಎಡರಂಗ ಒತ್ತಾಯಿಸಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಾಗತಿಕ ಕಚ್ಚಾ ತೈಲ ಬೆಲೆಗಳು ಹೆಚ್ಚಿವೆ ಎಂಬುದು ಸರಕಾರ ಈ ಬೆಲೆಯೇರಿಕೆಗಳಿಗೆ ಕೊಡುವ ಸಮರ್ಥನೆ. ಆದರೆ ಈ ವರ್ಷದ ಎಪ್ರಿಲ್ -ಮೇ ತಿಂಗಳಲ್ಲಿ ಬೆಲೆಗಳು ಬ್ಯಾರೆಲ್ಲಿಗೆ 100-115 ಡಾಲರು ಇದ್ದದ್ದು ಈಗ 90-92 ಡಾಲರಿಗೆ ಇಳಿದು ಬಿಟ್ಟಿರುವಾಗ ಈ ಸಮರ್ಥನೆ ಅರ್ಥಹೀನವಾಗಿ ಬಿಟ್ಟಿದೆ. ಕಚ್ಚಾತೈಲದ ಮೇಲಿನ 5% ಆಮದು ಸುಂಕವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಸಾರುವಾಗ ಅದು ಜನಗಳ ಕಣ್ಣಿಗೆ ಮಣ್ಣೆರಚಿದೆ. ನಿಜಸಂಗತಿಯೆಂದರೆ, 2010ರ ಕೇಂದ್ರ ಬಜೆಟಿನಲ್ಲಿ ಭಾರೀ ವಿರೋಧವನ್ನೂ ಲೆಕ್ಕಿಸದೆ ಇದನ್ನು ಹೇರಲಾಗಿತ್ತು. ವಾಸ್ತವವಾಗಿ, ಜನಸಾಮಾನ್ಯರು ಈಗಲೂ 100ರೂ.ಗಳ ತೆರಿಗೆ ತೆತ್ತು 20ರೂ.ಗಳ 'ಸಬ್ಸಿಡಿ'ಯೆಂಬುದನ್ನು ಪಡೆಯುತ್ತಾರೆ! ಹೀಗಿರುವಾಗ ಯಾರು ಯಾರಿಗೆ ಸಬ್ಸಿಡಿ ಕೊಡುತ್ತಿದ್ದಾರೆ?

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆ


ಜನಗಳ ಕಣ್ಣಿಗೆ ಮಣ್ಣೆರಚುತ್ತಿರುವ ಸರಕಾರ

ಯುಪಿಎ ಸರಕಾರ ಡೀಸೆಲ್ ಬೆಲೆಯನ್ನು ಲೀಟರಿಗೆ 3 ರೂ., ಸೀಮೆ ಎಣ್ಣೆ ಬೆಲೆಯನ್ನು ಲೀಟರಿಗೆ 2 ರೂ. ಮತ್ತು ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರಿಗೆ 50ರೂ. ನಷ್ಟು ಹೆಚ್ಚಿಸಿದೆ. ಸರಕಾರದ ಒಂದು ಆಡಳಿತ ನಿರ್ಣಯದ ಮೂಲಕ ಮಾಡಿರುವ ಈ ಬೆಲೆಯೇರಿಕೆ ಈಗಾಗಲೇ ಅವಿರತ ಬೆಲೆಯೇರಿಕೆಗಳ ಅಡಿಯಲ್ಲಿ ಜರ್ಝರಿತರಾಗಿರುವ ಜನಸಾಮಾನ್ಯರ ಸಂಕಟಗಳ ಬಗ್ಗೆ ಅದರ ನಿರ್ಲಕ್ಷ್ಯವನ್ನು ಪ್ರದರ್ಶಿಸಿದೆಯಷ್ಟೇ ಅಲ್ಲ, ಯುಪಿಎ ಸರಕಾರ ಈ ದೇಶದ ಜನಗಳ ಹಿತವನ್ನು ಬಲಿಗೊಟ್ಟು ಆಡುತ್ತಿರುವ ಮೋಸದಾಟವನ್ನು ಕೂಡ ಬಯಲು ಮಾಡಿದೆ.

ಜಾಗತಿಕ ಕಚ್ಚಾ ತೈಲ ಬೆಲೆಗಳು ಹೆಚ್ಚಿವೆ ಎಂಬುದು ಸರಕಾರ ಈ ಬೆಲೆಯೇರಿಕೆಗಳಿಗೆ ಕೊಡುವ ಸಮರ್ಥನೆ. ಆದರೆ ಈ ವರ್ಷದ ಎಪ್ರಿಲ್ -ಮೇ ತಿಂಗಳಲ್ಲಿ ಬೆಲೆಗಳು ಬ್ಯಾರೆಲ್ಲಿಗೆ 100-115 ಡಾಲರು ಇದ್ದದ್ದು ಈಗ 90-92 ಡಾಲರಿಗೆ ಇಳಿದು ಬಿಟ್ಟಿರುವಾಗ ಈ ಸಮರ್ಥನೆ ಅರ್ಥಹೀನವಾಗಿ ಬಿಟ್ಟಿದೆ. ಎಪ್ರಿಲ್-ಮೇ ತಿಂಗಳಲ್ಲಿ ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳಿದ್ದುದರಿಂದ ಈ ಬೆಲೆಗಳಲ್ಲಿ ಕೈಯಾಡಿಸದಿರುವುದೇ ಲೇಸು ಎಂದು ಆಗ ಸರಕಾರ ಭಾವಿಸಿದ್ದು ಇದರಿಂದ ಸ್ಪಷ್ಟ. ಜನಗಳ ಸಂಕಟವನ್ನು ಈ ಸರಕಾರ ಪರಿಗಣಿಸುವುದು ಮತಗಳ ಪ್ರಶ್ನೆ ಬಂದಾಗ ಮಾತ್ರವೇ ಇರಬೇಕು.

ಸಬ್ಸಿಡಿ ಯಾರಿಂದ ಯಾರಿಗೆ ?

ಸರಕಾರ ತೆರಿಗೆಗಳನ್ನು ಕಡಿತ ಮಾಡಿದ್ದು ನಾಮಮಾತ್ರಕ್ಕೆ; ಅದರಿಂದ ಕೇಂದ್ರ ಮಟ್ಟದಲ್ಲಾಗಲಿ, ರಾಜ್ಯಮಟ್ಟದಲ್ಲಾಗಲೀ ಪರೋಕ್ಷ ತೆರಿಗೆಗಳ ಪುನರ್ರಚನೆಯೇನೂ ಆಗಿಲ್ಲ. ಎಡಪಕ್ಷಗಳು ಮತ್ತು ಪೆಟ್ರೋಲಿಯಂನ ಸಂಸದೀಯ ಸ್ಥಾಯೀ ಸಮಿತಿ ಕೂಡ ಕಳೆದ ಕೆಲವು ವರ್ಷಗಳಿಂದ ಎತ್ತುತ್ತಾ ಬಂದಿರುವ ಈ ಬೇಡಿಕೆಯನ್ನೇನೂ ಅದು ಪರಿಗಣಿಸಿಲ್ಲ.



ಕೃಪೆ: ದಿ ಹಿಂದೂ

ಕಚ್ಚಾತೈಲದ ಮೇಲಿನ 5% ಆಮದು ಸುಂಕವನ್ನು ಹಿಂತೆಗೆದುಕೊಳ್ಳಲಾಗಿದೆ ಎಂದು ಸಾರುವಾಗ ಅದು ಜನಗಳ ಕಣ್ಣಿಗೆ ಮಣ್ಣೆರಚಿದೆ. ನಿಜಸಂಗತಿಯೆಂದರೆ, ಯುಪಿಎ-2 ಸರಕಾರ 2010ರ ಕೇಂದ್ರ ಬಜೆಟಿನಲ್ಲಿ ಈ ತೆರಿಗೆಯನ್ನು ಹಾಕಿತ್ತು. ಆಗ ವಿರೋಧ ಪಕ್ಷಗಳು ಇದಕ್ಕೆ ಬಲವಾದ ವಿರೋಧವನ್ನು ವ್ಯಕ್ತಪಡಿಸಿದ್ದವು, ಲೋಕಸಭೆಯಲ್ಲಿ ಕಡಿತ ನಿಲುವಳಿಯನ್ನು ಕೂಡ ತಂದಿದ್ದವು.

2010-11ರಲ್ಲಿ ಪೆಟ್ರೋಲಿಯಂ ವಲಯದಿಂದ ಕೇಂದ್ರ ಸರಕಾರದ ಬೊಕ್ಕಸಕ್ಕೆ ಸಿಕ್ಕ ಕಾಣಿಕೆ 1,36,000 ಕೋಟಿ ರೂ, ರಾಜ್ಯ ಸರಕಾರಗಳಿಗೆ 80,000 ಕೋಟಿ ರೂ. ಎಂದು ವರದಿಯಿದೆ. ಇದೇ ಅವಧಿಯಲ್ಲಿ ಸರಕಾರ ಸಾರ್ವಜನಿಕ ವಲಯದ ತೈಲ ಮಾರಾಟ ಮಾಡುವ ಕಂಪನಿಗಳ ಮೇಲೆ ಹೊರಡಿಸಿದ ಸಾಲಪತ್ರಗಳೂ ಸೇರಿದಂತೆ ಒಟ್ಟು 40,000 ಕೋಟಿ ರೂ. ಸಬ್ಸಿಡಿ ಒದಗಿಸಿದೆ. ಇದು ತೆರಿಗೆಗಳು ಮತ್ತು ಸುಂಕಗಳ ಮೂಲಕ ಪೆಟ್ರೋಲಿಯಂ ವಲಯದ ಕಾಣಿಕೆಗಳ 20%. ಅಂದರೆ 'ಆಮ್ ಆದ್ಮಿ'ಗಳು(ಜನಸಾಮಾನ್ಯರು) 100ರೂ.ಗಳ ತೆರಿಗೆ ತೆತ್ತು 20ರೂ.ಗಳ 'ಸಬ್ಸಿಡಿ'ಯೆಂಬುದನ್ನು ಪಡೆಯುತ್ತಾರೆ! ಇಲ್ಲಿ ಯಾರು ಯಾರಿಗೆ ಸಹಾಯಧನ ಅಥವ ಸಬ್ಸಿಡಿ ಕೊಡುತ್ತಿದ್ದಾರೆ? ನಿಜಸಂಗತಿಯೆಂದರೆ, ಕೇಂದ್ರದ ಆದಾಯಗಳಿಗೆ ಕೇವಲ ಪೆಟ್ರೋಲಿಯಂ ವಲಯದ ಕಾಣಿಕೆಯೊಂದೇ 2001ರಲ್ಲಿ 46,603ಕೋಟಿ ರೂ.ನಿಂದ 2010-11ರಲ್ಲಿ 1,36,026 ಕೋಟಿ ರೂ.ಗಳಿಗೇರಿದೆ.

ಸರಕಾರದ ಧೋರಣೆಗಳೇ ಕಾರಣ

ಇನ್ನೊಂದೆಡೆ, ಸಂಸ್ಕರಣೆಗೆ ಮತ್ತು ಸಂಸ್ಕರಿಸಿದ(ರಿಫೈನ್ಡ್) ಉತ್ಪನ್ನಗಳನ್ನು ರಫ್ತು ಮಾಡಲಿಕ್ಕೆ ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುವ ಕಾರ್ಪೋರೇಟುಗಳು 'ಸುಂಕ ಹಿಂದಕ್ಕೆ ಪಡೆಯುವ ಉತ್ತೇಜಕಗಳು' ಎಂಬುದನ್ನು ಪಡೆದ ಮೇಲೆ ಅಪಾರ ಲಾಭಗಳನ್ನು ಗಿಟ್ಟಿಸುತ್ತಿವೆ. ಖಾಸಗಿ ರಿಫೈನರಿಗಳು ರೂ.1 ಲಕ್ಷ ಕೋಟಿ ರೂ.ಗಳ ಮೌಲ್ಯದ ಪೆಟ್ರೋಲಿಯಂ ಉತ್ಪನ್ನಗಳನ್ನು ರಫ್ತು ಮಾಡುತ್ತಿವೆ. ಹಾಗಿದ್ದಲ್ಲಿ ಈ 'ಉತ್ತೇಜಕ'ಗಳನ್ನು ಹಿಂತೆಗೆದುಕೊಳ್ಳುತ್ತಿಲ್ಲವೇಕೆ?

ಪೆಟ್ರೋಲಿಯಂ ಉತ್ಪನ್ನಗಳ ಈ ಸುತ್ತಿನ ಬೆಲೆಯೇರಿಕೆ, ಹಣದುಬ್ಬರ ಮತ್ತು ಬೆಲೆಯೇರಿಕೆಗಳಿಗೆ ತುಪ್ಪ ಸುರಿಯುತ್ತಿರುವುದು ಯುಪಿಎ ಸರಕಾರದ ಧೋರಣೆಗಳೇ ಎಂಬ ಸಂಗತಿಯನ್ನು ದೃಢಪಡಿಸಿದೆ. ಹಣದುಬ್ಬರ ದರ 9% ದ ಮೇಲಿದೆ. ನವ-ಉದಾರವಾದಿ ದೃಷ್ಟಿಕೋಣ ಹೊಂದಿರುವ ಸರಕಾರ ಜನತೆಯ ಮೇಲೆ ಈ ತೆರಿಗೆಯನ್ನು ಹೇರಿದೆ. ಇದು ನಿಲ್ಲಬೇಕು. ಸರಕಾರ ಈ ಪ್ರತಿಗಾಮಿ ಹಾದಿಯಿಂದ ಹಿಂದಕ್ಕೆ ಸರಿಯುವಂತೆ ಒತ್ತಡ ಹಾಕಬಲ್ಲ ಏಕೈಕ ದಾರಿಯೆಂದರೆ ಹಣದುಬ್ಬರ ಮತ್ತು ಬೆಲೆಯೇರಿಕೆಗಳನ್ನು ಉತ್ತೇಜಿಸುವ ಇಂತಹ ಧೋರಣೆಗಳನ್ನು ಕೊನೆಗೊಳಿಸಲು ಒತ್ತಾಯಿಸುವ ಒಂದು ಬಲಿಷ್ಟ ಜನತಾ ಆಂದೋಲನವನ್ನು ಕಟ್ಟುವುದು. ●

ಆರೋಪಗಳ ತನಿಖೆಯಾಗಲಿ – ಯಡಿಯೂರಪ್ಪ ರಾಜೀನಾಮೆ ನೀಡಲಿ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಆಗ್ರಹ

ಕರ್ನಾಟಕ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತೊಮ್ಮೆ ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ. ಈ ಬಾರಿ ಅವರು ಧರ್ಮಸ್ಥಳ ಮಂಜುನಾಥನ ಸನ್ನಿದಿಯಲ್ಲಿ ಆಣೆ-ಪ್ರಮಾಣ ಮಾಡುವುದಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿಯವರಿಗೆ ಎಸೆದಿದ್ದ ಸವಾಲಿನಿಂದ ಹಿಂದೆ ಸರಿದಿದ್ದಾರೆ.

ಇಷ್ಟಾದರೂ ಕುಮಾರಸ್ವಾಮಿಯವರು, 'ಯಡಿಯೂರಪ್ಪ ತಮ್ಮ ಆಪ್ತರ ಮೂಲಕ ಬಾರಿ ಪ್ರಮಾಣದ ಹಣದ ಆಮಿಷ ಒಡ್ಡಿದರು ಮತ್ತು ರಾಜ್ಯ ಸರ್ಕಾರದಿಂದ ತಾವು ಬಯಸುವ ಕೆಲಸಗಳನ್ನೆಲ್ಲ ಮಾಡಿ ಕೊಡುವುದಾಗಿ ಭರವಸೆ ನೀಡಿದ್ದರು. ಹಾಗೂ ಈಗ ಆಣೆ ಪ್ರಮಾಣದಿಂದಲೂ ಹಿಂದೆ ಸರಿದಿದ್ದಾರೆ. ಯಡಿಯೂರಪ್ಪ ಆಣೆ ಪ್ರಮಾಣ ದಿಂದ ಯಾಕೆ ಹಿಂದೆ ಸರಿದಿದ್ದಾರೆಂಬುದು ತಮಗೆ ಚೆನ್ನಾಗಿ ಗೊತ್ತಿದೆ' ಎಂದು ಹೇಳುವ ಮೂಲಕ ಕುಮಾರಸ್ವಾಮಿ ತಮ್ಮ ಹೇಳಿಕೆಗೆ ಬದ್ಧವಾಗಿದ್ದಾರೆ.

ಯಡಿಯೂರಪ್ಪನವರು ತಮ್ಮ ಆಣೆ ಪ್ರಮಾಣದ ಸವಾಲು ಘೋಷಣೆಗೆ ಬೆಂಬಲ ಸಿಗದೆ ಒಂಟಿಯಾಗಿ ಮುಖಭಂಗ ಅನುಭವಿಸ ಬೇಕಾಗಿ ಬಂದದ್ದರಿಂದ ಸವಾಲಿನಿಂದ ಹಿಂದೆ ಸರಿದಿದ್ದಾರೆ. ಹಲವು ಸ್ವಾಮೀಜಿಗಳು ಈ ಕ್ರಮ ಬೇಡವೆಂದು ಬುದ್ಧಿ ಹೇಳಿದರು. ವಿವಿಧ ಜನ ವಿಭಾಗಗಳ ಗಣ್ಯರು ಹಾಗೂ ಜನಾಭಿಪ್ರಾಯ ಕೂಡ ಈ ರೀತಿಯಲ್ಲಿ ರಾಜಕೀಯ ಸಮಸ್ಯೆಯನ್ನು 'ಆಣೆ-ಪ್ರಮಾಣ'ದ ಧಾರ್ಮಿಕ ವಿಧಾನದ ಮೂಲಕ ಇತ್ಯರ್ಥ ಪಡಿಸಲು ಯತ್ನಿಸುವ ಕ್ರಮಕ್ಕೆ ವಿರುದ್ಧವಾಗಿತ್ತು.

ಕುಮಾರಸ್ವಾಮಿಯವರಿಗೆ ಈ ಸವಾಲೆ ಸೆಯುವ ಮೂಲಕ ಹಾಗೂ ಆ ನಂತರ ಅದರಿಂದ ಹಿಂದೆ ಸರಿಯುವ ಮೂಲಕ ಯಡಿಯೂರಪ್ಪನವರು ತಮ್ಮನ್ನು ತಾವೇ ಬಯಲು ಮಾಡಿಕೊಂಡಿದ್ದಾರೆ.

ಯಡಿಯೂರಪ್ಪನವರು ಒಂದು ಕಡೆ ಅಸಂವಿಧಾನಿಕ ಚಟುವಟಿಕೆಗಳಲ್ಲಿ ತೊಡಗಲು ತುಡಿಯುತ್ತಿದ್ದಾರೆ. ಮತ್ತೊಂದೆಡೆ ಕುಮಾರ ಸ್ವಾಮಿಯವರೊಂದಿಗೆ ಸಂಧಾನಕ್ಕೆ ಮುಂದಾಗಿದ್ದ ರೆಂಬ ಆರೋಪದ ಬಗೆಗೆ ಕಾನೂನು ಬದ್ಧವಾದ ತನಿಖೆಗೆ ತಮ್ಮನ್ನು ಒಡ್ಡಿಕೊಳ್ಳಲು ತಯಾರಿಲ್ಲ ಎಂಬುದು ಇದರಿಂದ ಬಯಲಾಗಿದೆ.

ಸಂವಿಧಾನಾತ್ಮಕವಾದ ರೀತಿ ನೀತಿಗಳಲ್ಲಿ ಆಡಳಿತ ನಡೆಸುವಲ್ಲಿ ವಿಫಲವಾಗಿರು ವುದರಿಂದ ಮತ್ತು ಕುಮಾರಸ್ವಾಮಿಯವ ರೊಂದಿಗೆ ಸಂಧಾನ ನಡೆಸಿ ತಮ್ಮ ಭ್ರಷ್ಟಾಚಾರದ ಮೇಲಿನ ಪ್ರಕರಣಗಳನ್ನು ಮುಚ್ಚಿಹಾಕಲು ಯತ್ನಿಸಿದರು ಎಂಬ ಬಗ್ಗೆ ಮುಕ್ತ ಮತ್ತು ಸ್ವತಂತ್ರವಾದ ತನಿಖೆಯನ್ನು ನಡೆಸಲು ಅವಕಾಶ ನೀಡುವ ದೃಷ್ಟಿಯಿಂದ ರಾಜ್ಯದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ತಮ್ಮ ಸ್ಥಾನಕ್ಕೆ ರಾಜಿನಾಮೆ ನೀಡಬೇಕೆಂದು ಸಿಪಿಐ(ಎಂ) ಪಕ್ಷ ಒತ್ತಾಯಿಸಿದೆ.

'ಆಣೆ-ಪ್ರಮಾಣದ' ಪರಿಹಾರವನ್ನು ವಿರೋಧಿಸುವ ಮೂಲಕ ರಾಜ್ಯದ ರಾಜಕೀಯದಲ್ಲಿ ಹಾಗೂ ದೇಶದಲ್ಲಿ ಜಾತ್ಯಾತೀತ ರಾಜಕೀಯದ ರಕ್ಷಣೆಗೆ ಕಾಣಿಕೆ ನೀಡಿದ ಕರ್ನಾಟಕದ ಜನತೆಗೆ ಹಾಗೂ ರಾಜ್ಯದ ಪ್ರಬುದ್ಧ ನಾಯಕರಿಗೆಲ್ಲ ಸಿಪಿಐ(ಎಂ) ಕೃತಜ್ಞತೆಗಳನ್ನು ಸಲ್ಲಿಸಿದೆ. ●

ಬಗರ್‌ಹುಕುಂ ಭೂಮಿಗೆ ಬಾಯಿ ಹಾಕಿದ ಸರ್ಕಾರ

'ಹತ್ತಾರು ವರ್ಷ ಉತ್ತ ಭೂಮಿಯ ಹಕ್ಕು ಬಿಟ್ಟು ಕೊಡುವುದಿಲ್ಲ'

ಬಗರ್‌ಹುಕುಂ ಸಾಗುವಳಿದಾರರ ಹೋರಾಟ ಘೋಷಣೆ

ಜಿ.ಸಿ.ಬಯ್ಯಾರೆಡ್ಡಿ

ಭೂಮಿ ಒಂದು ಪ್ರಾಕೃತಿಕ ಕೊಡುಗೆ. ಪ್ರಕೃತಿಯ ಅಮೂಲ್ಯ ಕೊಡುಗೆಯಾದ ಈ ಭೂಮಿಯ ಮೇಲೆ ಮನುಷ್ಯನು ತನ್ನ ಶ್ರಮವನ್ನು ಹಾಕಿ ತನ್ನ ಬುದ್ಧಿಶಕ್ತಿಯನ್ನು 'ನಿಪುಣತೆಯನ್ನು ಬಳಸಿ ಕೃಷಿಯನ್ನು ಮಾಡುತ್ತಾನೆ. ಈ ರೀತಿ ಬೆಳೆಯುವ ಆಹಾರವು ಬೆಳೆದ ರೈತನ ಕುಟುಂಬಕ್ಕೆ ಮಾತ್ರವಲ್ಲ, ಒಟ್ಟಾರೆ ಸಮಾಜದ ಹಸಿವನ್ನು ಹಿಂಗಿಸಲು ಆಧಾರವಾಗಿರುತ್ತದೆ. ಆಹಾರ ಉತ್ಪಾದನೆ ಹೆಚ್ಚುವುದು ಎಂದರೆ ದೇಶದ ಆಹಾರ ಭದ್ರತೆಗೆ ಕಾರಣವಾಗುತ್ತದೆ.

ಗುಡ್ಡಬಾರೆ ಅಗೆದು, ನೆಲ ಹದಮಾಡಿ ಭೂಮಿಯನ್ನು ಕೃಷಿ ಯೋಗ್ಯ ಹೊಲ ಗದ್ದೆಯನ್ನಾಗಿ ಮಾಡುವುದು ಶ್ರಮಿಕ ರೈತನೇ ಆದರೂ ಈ ರೈತನ ಭೂಮಿಯ ಮಾಲೀಕತ್ವವನ್ನು ಕಬ್ಜಾ ಮಾಡಿ ರೈತನ ಶ್ರಮ ಶಕ್ತಿಯನ್ನು ಕೊಳ್ಳೆ ಹೊಡೆಯುವ ಸಂಚುಗಳು ಇತಿಹಾಸದುದ್ದಕ್ಕೂ ನಾನಾ ರೂಪಗಳಲ್ಲಿ ನಡೆಯುತ್ತಾ ಬಂದಿದೆ.

ಭೂಮಿಯ ಹಕ್ಕಿಗಾಗಿ ಅಥವಾ ಭೂಮಿಯ ಫಲದಲ್ಲಿ ತನ್ನ ನ್ಯಾಯಬದ್ಧ ಹಕ್ಕಿಗಾಗಿ ಎಷ್ಟೇಷ್ಟೋ ರೈತ ಬಂಡಾಯಗಳು ಇತಿಹಾಸದಲ್ಲಿ ದಾಖಲಾಗಿವೆ. ದೇಶದಲ್ಲಿ 40–50–60 ರ ದಶಕಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ ಭುಗಿಲೆದ್ದ ಆಂದೋಲನದ ಫಲವಾಗಿ ಹಲವಾರು ರಾಜ್ಯಗಳಲ್ಲಿ ಭೂ ಸುಧಾರಣಾ ಕಾಯ್ದೆಗಳು ಒತ್ತಡದಿಂದಲೋ, ತೋರಿಕೆ ಗಾಗಿಯೇ ಅಂಗೀಕಾರ ಪಡೆದವು. ಕೇರಳ, ಪಶ್ಚಿಮ ಬಂಗಾಳದಂತಹ ರಾಜ್ಯಗಳಲ್ಲಿ ಪರಿಣಾಮಕಾರಿ ಭೂ ಸುಧಾರಣೆಗಳು ಜಾರಿಗೆ ಬಂದರೆ ಕರ್ನಾಟಕದಲ್ಲಿ ದೇವರಾಜರ ಕಾಲದಲ್ಲಿ ಅಂಶಿಕ ಭೂ ಸುಧಾರಣೆ ತುಂಬಾ ಸೀಮಿತವಾಗಿ ಜಾರಿಗೆ ಬಂದಿತು. ಇಂತಹ ಒಟ್ಟು ವಾತಾವರಣಗಳ ಫಲವಾಗಿ ಸರ್ಕಾರಿ ಭೂಮಿ, ಅರಣ್ಯ ಭೂಮಿ, ಗೋಮಾಳ ಇತ್ಯಾದಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಕೃಷಿ ಮಾಡುವ ರೈತರಿಗೆ ಆ ಭೂಮಿಯ ಹಕ್ಕನ್ನು ನೀಡುವ ಕ್ರಮಗಳೂ ಜಾರಿಗೆ ಬಂದವು.



ಜನಸಂಖ್ಯೆ ಬೆಳೆದಂತೆ, ಆಹಾರದ ಅಗತ್ಯ ಹೆಚ್ಚಿದಂತೆಲ್ಲಾ ಈ ಬಗರ್‌ಹುಕುಂ ಎನ್ನುವ ಈ ಒತ್ತುವರಿಯೂ ನಡೆಯಿತು. ಕರ್ನಾಟಕದಲ್ಲಿ ರಾಜ್ಯ ಇಂತಹ ಭೂಮಿಯ ಸಕ್ರಮಕ್ಕಾಗಿ ಅರ್ಜಿ ಸಲ್ಲಿಸಲು ಮೊದಲಿಗೆ ಅರ್ಜಿ ನಮೂನೆ 50 ಸಲ್ಲಿಸಬೇಕಾದ ಕ್ರಮವಿದ್ದಿತು. ನಂತರ ಅರ್ಜಿ ನಮೂನೆ 53 ಅನ್ನು ಸಲ್ಲಿಸಬೇಕಾದ ಕ್ರಮ ಜಾರಿಗೆ ಬಂದಿತು.

ಬಡ ರೈತರ ಭೂಮಿಯನ್ನು ಕಿತ್ತು ಭೂದಂಧೆಕೋರರ ಬಾಯಿಗೆ ಹಾಕುವ ಕೆಲಸ, ದುಗ್ಗಾಣಿ ನೀಡಿ ರೈತರಭೂಮಿಯನ್ನು ಕಬಳಿಸಿ ಬಂಡವಾಳಿಗರ ಕಬ್ಜಾಕ್ಕೆ ಒಪ್ಪಿಸುವ ವ್ಯವಸ್ಥಿತ ಯೋಜನೆ ಬಿಜೆಪಿ ಸರ್ಕಾರದ ಅಡಿಯಲ್ಲಿ ಸಿದ್ಧಗೊಂಡಿದೆ. ನವೆಂಬರ್‌ನಲ್ಲಿ ಕೃಷಿಯಲ್ಲಿ ವಿದೇಶಿ ಬಂಡವಾಳ ಹೂಡಿಕೆ ಮಾಡುವ 'ವಿಶ್ವ ಬಂಡವಾಳಗಾರರ ಸಮಾವೇಶ'ವನ್ನು ನಡೆಸಲು ಬಿಜೆಪಿ ಸರ್ಕಾರ ಭರ್ಜರಿ ಸಿದ್ಧತೆ ನಡೆದಿದೆ. ಬಗರ್‌ಹುಕುಂ ಸಾಗುವಳಿದಾರರಿಂದ ಭೂಮಿ ಕಸಿಯುವ ಬಿಜೆಪಿ ಸರ್ಕಾರ ಈಗಿನ ಧೋರಣೆಯನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳಬೇಕು.

ಹಲವು ಅಕ್ರಮ, ಭ್ರಷ್ಟಾಚಾರ, ವಿಳಂಬ ಮುಂತಾದ ದೂರುಗಳಿದ್ದರೂ ರೈತರಿಗೆ ಅಷ್ಟಿಷ್ಟು ಭೂಮಿ ಸಿಗುತ್ತಿತ್ತು. ಎನ್ನುವುದು ಕೂಡ ವಾಸ್ತವವಾಗಿತ್ತು.

'ಬೆಂಗಳೂರಿನ 18ಕಿ.ಮೀ. ಸುತ್ತಳತೆಯಲ್ಲಿಲ್ಲ'

ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ ಅವತ್ತಿನ ಬೆಂಗಳೂರು ಮಹಾ ನಗರ ಪಾಲಿಕೆ ವ್ಯಾಪ್ತಿಯಿಂದಾಚೆಗೆ 18 ಕಿ.ಮೀ. ಸುತ್ತಳತೆಯಲ್ಲಿ ಬರುವ ಸರ್ಕಾರಿ ಜಮೀನಿನಲ್ಲಿ ಆಗಿರುವ ಒತ್ತುವರಿಯನ್ನು ಅಂಗೀಕರಿಸಬಾರದು. ಈ ವ್ಯಾಪ್ತಿಯ ಜಮೀನಿಗೆ ಸಂಬಂಧಿಸಿದ ಅರ್ಜಿ ನಮೂನೆ 50–53 ಗಳನ್ನು ತಿರಸ್ಕರಿಸಬೇಕೆಂದು ತೀರ್ಮಾನಿಸಲಾಗಿತ್ತು.

ಬೆಂಗಳೂರು ನಗರ ಬೆಳೆದಂತೆ ಶಾಲೆ, ಆಸ್ಪತ್ರೆಗಳು, ಉದ್ಯಾನವನಗಳು ಸ್ಮಶಾನ ಮುಂತಾದ ಸಾರ್ವಜನಿಕ ಅಗತ್ಯಗಳಿಗೆ, ಜಾಗಬೇಕಾಗಿರುವುದರಿಂದ ಆ ಜಮೀನನ್ನು ಸರ್ಕಾರ ರೈತರಿಗೆ ಕೊಡಲಾಗದು ಎಂಬುದು ಅಂದು ನೀಡಲಾಗಿದ್ದ ಕಾರಣವಾಗಿತ್ತು.

ಸಾರ್ವಜನಿಕ ಉದ್ದೇಶಗಳಿಗೆ ಜಮೀನು ಕಾದಿಡುವ ಘೋಷಿತ ಉದ್ದೇಶ ಒಂದು ರೀತಿಯಲ್ಲಿ ಒಳ್ಳೆಯದೇ ಆದರೂ ಅದಕ್ಕೆ ಬಗರ್‌ಹುಕುಂ ಸಕ್ರಮಕ್ಕಾಗಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ವಜಾ ಮಾಡುವುದೇನು ಅಗತ್ಯವಿರಲಿಲ್ಲ. ರೈತರಿಗೆ ಭೂಮಿಹಕ್ಕು ನೀಡಿಯೂ ಸಾರ್ವಜನಿಕ ಉದ್ದೇಶಕ್ಕೆ ಭೂಮಿ ಹೊಂದಿಸುವುದು. ಕಷ್ಟವೇನೂ ಆಗಿರಲಿಲ್ಲ.

1991ರಿಂದಾಚೆಗೆ ಜಾಗತೀಕರಣ ಎಂಬ ನೀತಿಯನ್ನು ದೇಶ ಅಪ್ಪಿಕೊಂಡ ಮೇಲೆ ನಮ್ಮ ಸರ್ಕಾರಗಳ ಆದ್ಯತೆ, ನೀತಿಗಳೆಲ್ಲ ತೀವ್ರವಾಗಿ ಬದಲಾಗಿ ಹೋಗಿವೆ. ಇಂದು ರೈತರ ಭೂಮಿಯನ್ನು ಅಗ್ಗವಾಗಿ ಕಬಳಿಸುವ ರಿಯಲ್ ಎಸ್ಟೇಟ್ ದಂಧೆ, ಭೂಗಳ್ಳ ತಿಮಿಂಗಲಗಳ ಲಾಬಿಗಳು ಬಲಿತು ಕೊಬ್ಬಿ ನಿಂತಿವೆ. ಭೂಮಿಯ ಬೆಲೆ ಎಂಬುದು ತೀವ್ರವಾಗಿ ಏರಿದೆ. ಇಂತಹ ಸನ್ನಿವೇಶದಲ್ಲಿ ನಮ್ಮ ಆಳುವ ಸರ್ಕಾರಗಳಿಗೆ ಬಗರ್‌ಹುಕುಂ ಸಾಗುವಳಿ ಸಕ್ರಮ ಮಾಡಿ ಎಂಬ ಬೇಡಿಕೆ ಕಿವಿ ಮೇಲೆ ಬಿದ್ದರೆ ಚೇಳು ಕುಟುಕಿದಂತಹ ಅನುಭವವಾಗುತ್ತದೆ.

2008ರಲ್ಲಿ ಅಧಿಕಾರಕ್ಕೆ ಬಂದ ಯಡಿಯೂರಪ್ಪ ನೇತೃತ್ವದ ಸರ್ಕಾರದ ಬಗೆಗೆ ಹೇಳುವುದೇನು? ಮುಖ್ಯಮಂತ್ರಿ ಆದಿಯಾಗಿ ಈ ಸರ್ಕಾರದ ಸಚಿವರುಗಳಿಗೆ ಶಾಸಕರುಗಳಿಗೆ ರೈತರ ಭೂಮಿ, ಸರ್ಕಾರಿ ಭೂಮಿಯನ್ನು ಯಾವ ಯಾವ ರೂಪದಲ್ಲಿ ಲಪಾಟಿಯಿಸುವುದು ಎಂಬುದೇ ಒಂದು ದೊಡ್ಡ ಕೆಲಸವಾಗಿದೆ.

ರಾಮಕೃಷ್ಣಹೆಗಡೆ ಕಾಲದಲ್ಲಿ ಘೋಷಿತವಾದ 'ಸಾರ್ವಜನಿಕ ಉದ್ದೇಶ'. ಎಂಬುದೀಗ ತೋರಿಕೆಗಾದರೂ ಉಳಿದಿಲ್ಲ. ಒಟ್ಟಾರೆ ಪರಿಸ್ಥಿತಿಯೇ ಅಗಾಧ ಎಂಬಷ್ಟು ಬದಲಾಗಿ ಹೋಗಿದೆ.

ವಿಮಾನ ನಿಲ್ದಾಣ, ರಸ್ತೆಯ ಹೆಸರಿನಲ್ಲಿ, ಕೈಗಾರಿಕೆ ಹೆಸರಿನಲ್ಲಿ, ವಿಶೇಷ ಆರ್ಥಿಕ ವಲಯದ ಹೆಸರಿನಲ್ಲಿ ರೈತರ ಬಡಬಗ್ಗರ ಜಮೀನನ್ನು ಅಗ್ಗವಾಗಿ ಕಿತ್ತುಕೊಂಡು ರಿಯಲ್ ಎಸ್ಟೇಟ್ ದಂಧೆಕೋರರ ದಾಯಿಗೆ ಹಾಕುವುದು, ಕೈಗಾರಿಕೆಗೆ ಅಗತ್ಯಕ್ಕಿಂತ ವಿಪರೀತ ಪ್ರಮಾಣದ ಜಮೀನನ್ನು ರೈತರಿಂದ ಕಸಿದುಕೊಂಡು ಬಂಡವಾಳಗಾರರ ಮಡಿಲಿಗೆ ಹಾಕುವುದಕ್ಕೆ 'ಅಭಿವೃದ್ಧಿ' ಎಂಬ ಹೆಸರು ಕೊಟ್ಟು ಜನರನ್ನು ವಂಚಿಸುವ ಕೆಲಸ ಭರ್ಜರಿಯಾಗಿಯೇ ಈಗ ನಡೆದಿದೆ.

ಈ ಎಲ್ಲದಕ್ಕೂ ಪೂರಕವಾಗಿ ರಾಜ್ಯದ ಬಿಜೆಪಿ ಸರ್ಕಾರ ಈಗಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯ ಅಂಚಿನಿಂದ ಹೊರಕ್ಕೆ 18 ಕಿ.ಮೀ. ಸುತ್ತಳತೆ ವ್ಯಾಪ್ತಿಯಲ್ಲಿ ಬರುವ ಯಾವುದೇ ಬಗರ್‌ಹುಕುಂ ಸಾಗುವಳಿ ಜಮೀನನ್ನು ರೈತರಿಗೆ ಕೊಡುವುದು ಸಾಧ್ಯವಿಲ್ಲ ಎಂದು ಫರ್ಮಾನು ಹೊರಡಿಸಿ ಬಿಟ್ಟಿದೆ.

ಸಹಸ್ರಾರು ಜನರ ಜೀವನಾಧಾರ

ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಡಿಸೆಂಬರ್ 2009ರ ಸರ್ಕಾರದ ಅಂಕಿಸಂಖ್ಯೆಗಳ ಪ್ರಕಾರ, ವಿಲೇವಾರಿಯಾಗದೇ ಸರ್ಕಾರ ಮುಂದೆ ಉಳಿದಿರುವ ಫಾರಂ ನಂ.50 ಮತ್ತು 53, ಅರ್ಜಿಗಳ ಒಟ್ಟು ಸಂಖ್ಯೆ 37,395. ಈ ಅರ್ಜಿದಾರರ ಸ್ವಾಧೀನದಲ್ಲಿ ಇರುವ ಭೂಮಿ 93,114,12 ಎಕರೆ. ಇದರ ಜೊತೆಗೆ ರಾಜಕೀಯ ಮತ್ತಿತರೆ ಕ್ಷುಲ್ಲಕ ಕಾರಣಗಳಿಂದ ಅನ್ಯಾಯವಾಗಿ ವಜಾ ಆಗಿರುವ ಅರ್ಜಿಗಳು ಮತ್ತು ಭೂಮಿಯ ವಿಸ್ತಾರ ಇದರ ಎರಡು ಪಟ್ಟು. ವಿಲೇವಾರಿಯಾಗದೇ ಉಳಿದಿರುವ ಅರ್ಜಿದಾರರು ಹಾಗೂ ವಜಾಗೊಂಡರೂ ಬಗರ್‌ಹುಕುಂ ಸಾಗುವಳಿಯಲ್ಲಿ ಸ್ವಾಧೀನದಲ್ಲಿರುವ ಸುಮಾರು ದಲಿತರು, ಬಡ ಜನಕ್ಕೆ ಈ ಭೂಮಿ ಬಿಟ್ಟರೆ ಬೇರೆ ಭೂಮಿಯೇ ಇಲ್ಲ. ಇಂತಹ ಸ್ಥಿತಿಯಲ್ಲಿ ಅರ್ಜಿ ವಜಾ ಆಗಿರುವ ರೈತರ ಭೂಮಿಯನ್ನು ಕಿತ್ತುಕೊಳ್ಳಲು ಒಂದು ಕಡೆಯಿಂದ ಡಾ॥ ಬಾಲಸುಬ್ರಮಣ್ಯಂ ಅಧ್ಯಕ್ಷತೆ ಸಮಿತಿ ಮೂಲಕ ಸರ್ಕಾರ ಹೊರಟಿದೆ. ಇನ್ನೊಂದು ಕಡೆಯಲ್ಲಿ 40–50 ವರ್ಷಗಳಿಂದ ಸ್ವಾಧೀನದಲ್ಲಿರುವ ಹಾಗೂ 20 ವರ್ಷಗಳ ಹಿಂದೆ ಅರ್ಜಿ ಹಾಕಿಕೊಂಡಿರುವ ಭೂಮಿಯನ್ನು ನಿನ್ನೆ, ಮೊನ್ನೆ ಹೊಸ ಕಾನೂನನ್ನು ಮಾಡಿ, ವಿಲೇವಾರಿಯಾಗದಿರುವ ಬಹುತೇಕ ಅರ್ಜಿಗಳನ್ನು ವಜಾ ಮಾಡಲು 18 ಕಿ.ಮೀ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಪ್ರಶ್ನೆಯ ಆಧಾರದಲ್ಲಿ ರಾಜ್ಯ ಸರ್ಕಾರ ಪಿತೂರಿ ನಡೆಸಿದೆ. ಇಂತಹ ರೈತರ, ಬಡವರ ಭೂಮಿ ಬೇಡಿಕೆ ಪ್ರಶ್ನೆಗಳ ಇತ್ಯರ್ಥಕ್ಕಾಗಿ ಇದೆ ಎನ್ನಲಾಗುವ ಭೂ ಮಂಜೂರಾತಿ ಸಮಿತಿಗಳು ಹಿಂದೆ ರಚನೆಯಾಗಿದ್ದರೂ ಕೂಡ ಅವು ಅರ್ಜಿಗಳನ್ನು ಇತ್ಯರ್ಥ ಮಾಡದೇ, ಕೆಲಸ ಮಾಡದೇ ಕೂತಿದ್ದವು. ಭೂ ಮಂಜೂರಾತಿ ಸಮಿತಿಯ ಅಧ್ಯಕ್ಷರು ಆ ಕ್ಷೇತ್ರದ ಶಾಸಕರೇ ಆಗಿರುತ್ತಾರೆ. ಈ ಶಾಸಕ ಮಹಾಶಯರುಗಳು ಬಹಳಷ್ಟು ಕಡೆಗಳಲ್ಲಿ ಭೂ ಮಂಜೂರಾತಿ ಸಮಿತಿಯ ಸಭೆಗಳನ್ನೇ ಕರೆದಿಲ್ಲ. ಇದಕ್ಕೆ ಯಾರು ಹೊಣೆ? ಎಲ್ಲಿಯಾದರೂ ಒಂದಷ್ಟು ಅರ್ಜಿಗಳು ಇತ್ಯರ್ಥವಾಗಿವೆ ಎಂದಾದರೆ ಬಹುತೇಕ ಅವು ಅನುಕೂಲಸ್ಥರ, ಪ್ರಭಾವಿಗಳ ಅರ್ಜಿಗಳು. ಅಥವಾ ದುಡ್ಡು ವಸೂಲಿ ಮಾಡಿಕೊಂಡವರ ಅರ್ಜಿಗಳು. ರಾಜಕೀಯ ಪ್ರಭಾವ ಇಲ್ಲದ, ವಶೀಲಿ ಬಾಜಿ ಮಾಡಿ, ಲಂಚ ಕೊಡುವ ಸಾಮರ್ಥ್ಯವಿಲ್ಲದ ಬಡ ರೈತರ ಅರ್ಜಿಗಳು ಹಾಗೆ ಇತ್ಯರ್ಥವಾಗದೇ ಬಾಕಿ ಉಳಿದು ಹೋಗಿವೆ. ಅಧಿಕಾರಸ್ಥರ ಹೊಣೆಗೇಡಿತನ ಲಂಚಕೋರತನಗಳಿಗಾಗಿ ಈ ಬಡ ರೈತರ ಬೆನ್ನಮೇಲೆ ಬಿಜೆಪಿ ಸರ್ಕಾರ ಬರೇ ಹಾಕಲು ಹೊರಟಿದೆ. ಅಂದೇ ಈ ಪ್ರಶ್ನೆಗಳು ಇತ್ಯರ್ಥವಾಗಿದ್ದರೆ, ಬಡ ರೈತರು ಎಂದೋ ಭೂಮಿಯ ಒಡೆಯರಾಗಿ ದಾಖಲೆ ಪಡೆದಿರುತ್ತಿದ್ದರು.

ಸಾಗುವಳಿ ನಿಷೇಧ

ಬಿಬಿಎಂಪಿಯಿಂದ 18 ಕಿ.ಮೀ. ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು, ಆ ಗ್ರಾಮಗಳಲ್ಲಿ ಸೇರಿದ ಬಗರ್‌ಹುಕುಂ ಸಾಗುವಳಿ ಸಕ್ರಮ ಮಾಡಬಾರದೆಂದು ತೀರ್ಮಾನಿಸಲಾಗಿದೆ. ಈ ತೀರ್ಮಾನದಂತೆ ಆನೇಕಲ್ ತಾಲ್ಲೂಕಿನ ಎಲ್ಲಾ 7252 ಅರ್ಜಿದಾರರು, ಹೊಸಕೋಟೆ ತಾಲ್ಲೂಕಿನ 175 ಗ್ರಾಮಗಳ ರೈತರು ಹೀಗೆ ಮೂರು ಜಿಲ್ಲೆಗಳ ಸುಮಾರು 20,000ಕ್ಕಿಂತ ಹೆಚ್ಚಿನ ರೈತರು ಸುಮಾರು 35–40,000 ಎಕರೆ ಭೂಮಿಯ ಮೇಲಿನ ಸ್ವಾಧಿನವನ್ನು ಕಳೆದುಕೊಳ್ಳುತ್ತಾರೆ. ಆದರೆ ಇತ್ತೀಚಿನ 4–5 ವರ್ಷಗಳಲ್ಲಿ ಇರುವ ಅಮೂಲ್ಯವಾದ ಸರ್ಕಾರಿ ಭೂಮಿಗಳನ್ನು ನೈಸ್ ರಸ್ತೆಯ ಖೇಣಿ, ಖೋಡೆ, ಇನ್‌ಫೋಸಿಸ್ ಇತ್ಯಾದಿ ಬಂಡವಾಳಶಾಹಿಗಳಿಗೆ ಮೂರು ಕಾಸಿಗೆ ಮಾರಿಕೊಂಡಿರುವ ಪ್ರಕರಣಗಳು ಜಗಜ್ಜಾಹೀರಾಗಿದ್ದು ಎಲ್ಲರಿಗೂ ಇದು ತಿಳಿದೆ ಇದೆ. ಗೋಶಾಲೆ, ಆ ಶಾಲೆ ಈ ಶಾಲೆ ಎಂಬ ನೆಪದಲ್ಲಿ ಸಂಘ ಪರಿವಾರಕ್ಕೆ ಸೇರಿದವರಿಗೆ ಕೇಳಿದರೂ, ಕೇಳದಿದ್ದರೂ ಧಾರಾಳವಾಗಿ ಜಮೀನು ಧಾರೆ ಎರೆಯುತ್ತಿರುವುದೂ ಜನರಿಗೆ ಗೊತ್ತಿದೆ. ಇದು ಸಾಲದೇ ಫಲವತ್ತಾದ ರೈತರ ಭೂಮಿಯನ್ನು ಸಹ ಬಲಾತ್ಕಾರದ ಮೂಲಕ ಸ್ವಾಧೀನಪಡಿಸಿಕೊಂಡು, ಶ್ರೀಮಂತರಿಗೆ ವರ್ಗಾವಣೆ ಮಾಡಲಾಗುತ್ತಿದೆ.

ಭೂಮಿ ಹರಾಜು ನಮಗೆ ಗೊತ್ತಿಲ್ಲವೇ?

ಸಾರ್ವಜನಿಕ ಉದ್ದೇಶ. ಜನರ ಅಗತ್ಯ ಎಂದು ಬೊಬ್ಬಿಡುವ ಸರ್ಕಾರವು ಇತ್ತೀಚೆಗೆ ಅಕ್ರಮ ಕಬ್ಜಾದಾರರಿಂದ ಮರು ವಶ ಮಾಡಿಕೊಂಡ ಭೂಮಿಯನ್ನು ಹರಾಜು ಹಾಕಿದ್ದೇಕೆ ? ಜಾತಿವಾದಿ ಮಠ, ಮಾನ್ಯಗಳಿಗೆ ಯಾರಿಗೂ ಯಾವ ಭಾಗ್ಯವನ್ನು ನೀಡದ ಪ್ರತಿಮೆಗಳ ಸ್ಥಾಪನೆಗೆ ಕೋಟಿ ಕೋಟಿ ರೂಪಾಯಿಗಳನ್ನು ನೀಡಿ ಖಜಾನೆ ಖಾಲಿ ಮಾಡುತ್ತಿರುವ ಸರ್ಕಾರ ತನ್ನ ದುಂದು ವೆಚ್ಚಗಳಿಗೆ ಕೊರತೆ ಬೀಳುವ ಹಣವನ್ನು ತುಂಬಿಕೊಳ್ಳಲು ಈ ಸಾರ್ವಜನಿಕ ಆಸ್ತಿಯನ್ನು ಹರಾಜು ಹಾಕುತ್ತಿದೆ. ಇದು ಸಾರ್ವಜನಿಕರ ಉದ್ದೇಶವೇ? ಎ.ಟಿ.ರಾಮಸ್ವಾಮಿ ವರದಿ ಗುರ್ತಿಸಿದ ಭೂಮಿಯಲ್ಲಿ ಸುಮಾರು 9000 ಎಕರೆ ಭೂಮಿಯನ್ನು ಸರ್ಕಾರ ಮರು ಸ್ವಾಧೀನ ಪಡೆದುಕೊಂಡು, ಹರಾಜು ಮೂಲಕ ಮತ್ತೆ ಬಂಡವಾಳಗಾರರಿಗೆ ನೀಡಲಾಗಿದೆ ಎಂಬುದು ಯಾರಿಗೆ ಗೊತ್ತಿಲ್ಲ.

ಇದರ ಮುಂದುವರಿದ ಭಾಗವಾಗಿಯೇ 18 ಕಿ.ಮೀ. ವ್ಯಾಪ್ತಿ ಭೂಮಿಯನ್ನು ಸಕ್ರಮ ಮಾಡುವುದಿಲ್ಲ ಎಂದು 'ಮೂಲ ದಾಖಲೆ' ಗಳ ಪ್ರಶ್ನೆ ಮತ್ತಿತರ ಪ್ರಶ್ನೆಗಳನ್ನು ಅಡ್ಡ ತರಲಾಗುತ್ತಿದೆ. ದಲಿತರು, ಬಡವರ ಬಾಯಿಗೆ ಮಣ್ಣುಹಾಕಿ, ಶ್ರೀಮಂತರ ಹೊಟ್ಟೆ ತುಂಬಿಸಲು ಸರ್ಕಾರ ಹೊರಟಿದೆ.

'ಎ.ಟಿ.ರಾಮಸ್ವಾಮಿ ವರದಿ ನೆಪ'ದಲ್ಲಿ ಅನ್ನದಾತ–ಭೂಗಳ್ಳ ಇಬ್ಬರನ್ನು ಒಂದೇ ತಕ್ಕಡಿಯಲ್ಲಿ ತೂಗುವ ಅನ್ಯಾಯ

ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಭೂ ದಂಧೆಕೋರರು, ಪ್ರಭಾವಿಗಳು, ಶ್ರೀಮಂತರು ಕಬಳಿಸಿರುವ ಸುಮಾರು 41 ಸಾವಿರಕ್ಕೂ ಅಧಿಕ ಎಕರೆಗಳಷ್ಟು ಪ್ರಮಾಣದ ಜಮೀನನ್ನು ಸರ್ಕಾರ ಮರುವಶಕ್ಕೆ ಪಡೆದುಕೊಳ್ಳಬೇಕೆಂದು ಎ.ಟಿ.ರಾಮಸ್ವಾಮಿ ನೇತೃತ್ವದ ಜಂಟಿ ಸದನ ಸಮಿತಿ ವರದಿ ಕೊಟ್ಟಿರುವುದು ನಿಜ. ಅದೊಂದು



ಸ್ವಾಗತಾರ್ಹ ವಿಷಯವೇ. ಆದರೆ ಮೂಲ ದಾಖಲೆಗಳಿಲ್ಲ ಎಂಬಂತಹ ಕಾರಣಕ್ಕಾಗಿ ಅಕ್ರಮ ಎಂದು ಎ.ಟಿ.ರಾಮಸ್ವಾಮಿ ಸಮಿತಿ ಗುರುತಿಸಿದ್ದರೂ ಕೂಡ ಅದು – ಭೂಮಿ ಇಲ್ಲದ ಬಡರೈತ ಕುಟುಂಬ ತನ್ನ ಜೀವನೋಪಾಯಕ್ಕಾಗಿ ಒತ್ತು ಮಾಡಿಕೊಂಡ ಭೂಮಿಯಾದರೆ ಸರ್ಕಾರ ಅದನ್ನು ಸರ್ಕಾರ ಪರಿಶೀಲಿಸಿ ಸರಿಯಾಗಿ ಇತ್ಯರ್ಥಪಡಿಸಬೇಕೇ ಹೊರತು ಅನ್ನದಾತ ರೈತನನ್ನು ಭೂಗಳ್ಳ ಭೂ ದಂಧೆಕೋರರನ್ನು ಒಂದೇ ತಕ್ಕಡಿಯಲ್ಲಿ ತೂಗಬಾರದು.

ಸರ್ಕಾರಿ ಭೂಮಿಯನ್ನು ಅತಿಕ್ರಮಿಸ 'ಬಾರದು ಎಂಬುದೇನು ಉಲ್ಲಂಘನೆ ಮಾಡಲಾಗದ ಪವಿತ್ರ ನೇಮ ಎಂದೇನು ಸರ್ಕಾರ ಭಾವಿಸಿಲ್ಲ. ಪ್ರಭಾವಿಗಳು, ಸ್ವಂತದವರು. ಬೇಕಾದವರು ಭೂಮಿ ಕಬಳಿಸಿದ್ದರೆ ಅದನ್ನು ಸರ್ಕಾರಿ ಅಧಿಕಾರಿಗಳೇ ನಿಂತು ತನಿಖೆ ಮಾಡದೇ ಮುಚ್ಚಿಹಾಕುತ್ತಾರೆಂಬುದು ಮೊನ್ನೆ ಮೊನ್ನೆಯ ಪ್ರಕರಣದಲ್ಲೂ ಸಾಬೀತಾಗಿಲ್ಲವೇ? ಬೆಂಗಳೂರು ವಿಶೇಷ ಜಿಲ್ಲಾಧಿಕಾರಿಯಾಗಿದ್ದ ರಾಮಾಂಜನೇಯ 428 ಭೂ ಕಬಳಿಕೆ ಪ್ರಕರಣಗಳನ್ನು ತನಿಖೆಯನ್ನೇ ಮಾಡದೇ ವಿಚಾರಣೆ ಕೈ ಬಿಟ್ಟ ಪ್ರಕರಣ ಏನನ್ನು ಹೇಳುತ್ತಿದೆ? ಬಡ ರೈತ ಕೃಷಿಗಾಗಿ ತುಂಡು ಭೂಮಿಯನ್ನು ಒತ್ತುವರಿ ಮಾಡಿದ್ದರೆ ಅದು ಅತಿಕ್ರಮಣವೇ? ಅಕ್ರಮವೇ? ರಾಮಸ್ವಾಮಿ ವರದಿ ಅದನ್ನು ಭೂ ಕಬಳಿಕೆ ಎಂದರೂ ಅದನ್ನು ಒಪ್ಪಲಾಗದು. ಮುಖ್ಯವಾಗಿ ದಾಖಲೆ ಪತ್ರಗಳ ಬೇಡಿಕೆಗೆ ಜೋತು ಬೀಳದೆ. ಸರ್ಕಾರ ಮನುಷ್ಯತ್ವದ ಆಧಾರದಲ್ಲಿ ನ್ಯಾಯ ಅನ್ಯಾಯಗಳ ವಿವೇಚನೆ ಆಧಾರದಲ್ಲಿ ಕ್ರಮವಹಿಸಬೇಕು.

ದೇವನಹಳ್ಳಿ ಬಗರ್‌ಹುಕುಂ ರೈತರ ಕತೆ

ಪುಟ10 ಕ್ಕೆ

ಬೆಂಗಳೂರು ಮಾತ್ರವಲ್ಲ ಇಡೀ ರಾಜ್ಯದಲ್ಲೂ ಸಮಸ್ಯೆ

ಬಗರ್‌ಹುಕುಂ ಸಾಗುವಳಿದಾರರ ಹೊಟ್ಟೆಯ ಮೇಲೆ ಹೊಡೆಯುವ ಕೆಲಸ ಬರೀ ಬೆಂಗಳೂರು ನಗರದ ಸುತ್ತಮುತ್ತಲ ಪ್ರದೇಶಕ್ಕೆ ಮಾತ್ರ ಸೀಮಿತ ಅಲ್ಲ. ಇಡೀ ರಾಜ್ಯವ್ಯಾಪ್ತಿಯಾಗಿ ಇದೇ ರೀತಿಯಾಗಿ ಬಡ ರೈತರ ಭೂಮಿ ಕಬಳಿಕೆಗೆ ಸರ್ಕಾರ ಕೈ ಹಾಕಿದೆ.

ಬೆಂಗಳೂರು ನಗರದ ಬಿಬಿಎಂಪಿ ವ್ಯಾಪ್ತಿಯ ಸುತ್ತಮುತ್ತ 18 ಕಿ.ಮೀ. ವ್ಯಾಪ್ತಿಯ ಪ್ರದೇಶದಲ್ಲಿ ಬಗರ್‌ಹುಕುಂ ಜಮೀನಿಗೆ ಹಕ್ಕು ಕೊಡುವುದಿಲ್ಲ ಎನ್ನುತ್ತಿದ್ದರೆ ಮೈಸೂರು ಮತ್ತು ಅಂತಹ ನಗರದ ಸುತ್ತಮುತ್ತಲ 10 ಕಿ.ಮೀ.ವ್ಯಾಪ್ತಿಯಲ್ಲಿನ ಬಡ ರೈತರ ಬೆನ್ನಮೇಲೆ ಇದೇ ರೀತಿ ಬರೆ ಹಾಕಲು ಹೊರಟಿದೆ. ಸಿಎಂಸಿಗಳಿರುವ ಊರಾದರೆ ಸಿಎಂಸಿ ವ್ಯಾಪ್ತಿಯ 5 ಕಿ.ಮೀ. ಸುತ್ತಳತೆಯೊಳಗೆ ಬರುವ ಬಗರ್‌ಹುಕುಂ ಭೂಮಿ, ಟಿ.ಎಂ.ಸಿ. ಅಂದರೆ ಟೌನ್ ಮುನಿಸಿಪಲ್ ಕೌನ್ಸಿಲ್ ಇರುವ ಊರಾದರೆ 3 ಕಿ.ಮೀ. ವ್ಯಾಪ್ತಿಯ ಸುತ್ತಳತೆಯಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮ ಇಲ್ಲ ಎನ್ನುತ್ತಿದೆ ಸರ್ಕಾರ. ಅಂದರೆ ಇದರ ಅರ್ಥ ಭೂ ಮಾಫಿಯಾದ ನಿಯಂತ್ರಣದಲ್ಲಿರುವ ಸರ್ಕಾರದ ದೃಷ್ಟಿ ಬೆಂಗಳೂರು ಮಾತ್ರವಲ್ಲ. ಇಡೀ ರಾಜ್ಯದ ಉದ್ದಗಲ ಬಡ ರೈತರ ಭೂಮಿಯ ಮೇಲೆ ಬಿದ್ದಿದೆ. ಹಾಗಾಗಿ ಇಡೀ ರಾಜ್ಯದ ರೈತರು. ಸಂಘಟಿತರಾಗಿ ಈ ಪ್ರಶ್ನೆಯಲ್ಲಿ ದಿಟ್ಟ ಹೋರಾಟ ನಡೆಸಬೇಕಾಗಿದೆ.

'ಮೂಲ ದಾಖಲೆ ಕೊಡಿ' ಎಂಬ ಕಿರುಕುಳ

ಸರ್ಕಾರದ ಕಿರುಕುಳ ದಾಖಲೆಗಳಿಲ್ಲದ ಅಂದರೆ ಇನ್ನೂ ದಾಖಲೆ ಪತ್ರಗಳ ಅಧಿಕೃತ ಹಕ್ಕು ಸಿಕ್ಕಿಲ್ಲದ ಜಮೀನಿಗೆ ಮಾತ್ರವಲ್ಲ. ಈಗಾಗಲೇ ಅರ್ಜಿ ಮನ್ನಿಸಿ ದಾಖಲೆ ಪತ್ರ ಇರುವ ರೈತರ ಮೇಲೆ ಸರ್ಕಾರ ಎರಗಿ ಬಿದ್ದಿದೆ.

ಸಂಬಂಧಿಸಿದ ಜಮೀನಿಗೆ ಪಹಣಿ ಇದ್ದರೂ, ಖಾತೆ ಆಗಿದ್ದರೂ ಈ ಜಮೀನಿಗೆ ಸಂಬಂಧಿಸಿದ ಮೂಲ ದಾಖಲೆ ಕೊಡಿ ಎಂದು ಕಿರುಕುಳ ನೀಡಲಾಗುತ್ತಿದೆ. 'ನಿಮ್ಮ ಬಳಿ ಮೂಲ 'ದಾಖಲೆಗಳಿಲ್ಲ' ಎಂದು ಕಂದಾಯ ಇಲಾಖೆಯ ಕಾಯ್ದೆ 1964 ಕಲಂ 136(3)ರಡಿಯಲ್ಲಿ ರೈತರಿಗೆ ನೋಟೀಸ್ ನೀಡಲಾಗುತ್ತಿದೆ. ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಯ ಆನೇಕಲ್‌ನಲ್ಲಿ 1,200 ಜನ ರೈತರಿಗೆ ಈ ರೀತಿ ನೋಟೀಸ್ ಜಾರಿಯಾಗಿದೆ.

ಮೂಲ ದಾಖಲೆ ಕೊಡದಿದ್ದಲ್ಲಿ ಜಮೀನು ಮುಟ್ಟುಗೋಲು ಹಾಕಿಕೊಳ್ಳಲಾಗುವುದೆಂದು ರೈತರನ್ನು ಬೆದರಿಸಲಾಗುತ್ತಿದೆ. ಈ ರೀತಿ ರೈತರನ್ನು ಬೆದರಿಸಲು ಕುಂಟುನೆಪಗಳನ್ನು ಬಳಸಿಕೊಳ್ಳಲಾಗುತ್ತಿದೆ. ಜಮೀನಿನ ಹಕ್ಕು ಹಲವು ಕೈ ಬದಲಾವಣೆ ಕಂಡಿರುವ ಪ್ರಕರಣಗಳಲ್ಲಿ ಅಥವಾ 50–60–70 ವರ್ಷಗಳ ಹಿಂದೆ ಮಂಜೂರಾಗಿರುವ ಜಮೀನಿಗೆ ಈಗ ಮೂಲ ದಾಖಲೆ ತೋರಿಸಿ ಎಂದು ಕೇಳಿದರೆ ರೈತರು ಮಾಡುವುದೇನು? ಮೂಲ ದಾಖಲೆ ಇದ್ದರೆ ಸರ್ಕಾರದ ಬಳಿಯೇ ಇರಬೇಕು. ಕೊಟ್ಟರೆ ಅದನ್ನು ಸರ್ಕಾರವೇ ಕೊಡಬೇಕು. ಹೇಗಾದರೂ ಸರಿ ಜಮೀನು ಕಬಳಿಸ 'ಬೇಕೆಂದು ಟೊಂಕಕಟ್ಟಿ ನಿಂತು ಬಿಟ್ಟಿರುವ ಸರ್ಕಾರ ಮೂಲ ದಾಖಲೆ ಪ್ರಶ್ನೆಯನ್ನು ಹಿಡಿದುಕೊಂಡು ರೈತರ ಬದುಕಿನಲ್ಲಿ ಚೆಲ್ಲಾಟವಾಡುತ್ತಿದೆ. 'ಮೂಲ ದಾಖಲೆ ಇಲ್ಲ. ನೀವು ನಕಲಿ ದಾಖಲೆ ಸೃಷ್ಟಿಸಿ ಜಮೀನು ಲಪಟಾಯಿಸಿದ್ದಿ' ಎಂದು ಸರ್ಕಾರ ರೈತರಿಗೆ ಧಮಕಿ ಹಾಕುತ್ತಿದೆ.

ಬಗರ್‌ಹುಕುಂ ಸಾಗುವಳಿದಾರರ ಹೋರಾಟ

ಪುಟ 9 ರಿಂದ

'ಕೈಗೆ ಬಂದ ತುತ್ತು ಬಾಯಿ ಸಿಗಲಿಲ್ಲ'

ಬೆಂಗಳೂರು ನಗರದಲ್ಲಿ ಇನ್ನೂ ಸಾಕಷ್ಟು ಆಯಸ್ಸಿರುವ ವಿಮಾನ ನಿಲ್ದಾಣವನ್ನು ಮುಚ್ಚಿ ಬೆಂಗಳೂರು ಗ್ರಾಮಾಂತರದ ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ತಲೆ ಎತ್ತಿದೆ. ಈ ಉದ್ದೇಶಕ್ಕಾಗಿ ರೈತರಿಂದ ಜಮೀನು ವಶಕ್ಕೆ ತೆಗೆದುಕೊಂಡಾಗ ಅವರಿಗೆ ಪರಿಹಾರ ಎಂದು ನೀಡಿದ್ದು, ಗರಿಷ್ಠ ಎಂದರೆ ಎಕರೆಗೆ 5.5 ಲಕ್ಷ ಮಾತ್ರ. ಇಂದು ದೇವನಹಳ್ಳಿ ಸುತ್ತಮುತ್ತ ಜಮೀನು ಎಕರೆಗೆ ಕೋಟಿ ಕೋಟಿ ಬಾಳುತ್ತಿದೆ. ವಿಮಾನ ನಿಲ್ದಾಣಕ್ಕೆ ಭೂಮಿ ಕೊಟ್ಟ ರೈತರಿಗೆ ಏನನ್ನಿಸುತ್ತದೆ.? ಅವರ ಬದುಕು ಈಗ ಏನಾಗಿದೆ?

ವಿಮಾನ ನಿಲ್ದಾಣ ಬರುವ ಮುಂಚೆ ಈ ಭಾಗದಲ್ಲಿ ಸರ್ಕಾರಿ ಜಮೀನಿನಲ್ಲಿ ಹತ್ತಾರು ವರ್ಷಗಳಿಂದ ಬಗರ್‌ಹುಕುಂ ಸಾಗುವಳಿ ಮಾಡುತ್ತಾ ಸಕ್ರಮಕ್ಕೆ ಅರ್ಜಿ ಹಾಕಿಕೊಂಡ ರೈತರಿದ್ದರು. ಭೂ ಮಂಜೂರಾತಿ ಸಮಿತಿಗಳು ಇದ್ದವು. ಅವು ಅರ್ಜಿ ಪರಿಶೀಲನೆ ಮಾಡಿ ಜಮೀನು ಮಂಜೂರು ಸಹ ಆಗಿತ್ತು. ಆದರೆ ಈ ಮಧ್ಯೆಯೇ ವಿಮಾನ ನಿಲ್ದಾಣಕ್ಕಾಗಿ ಭೂಮಿ ವಶ ಶುರುವಾಯಿತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ರೈತರು ಸಂಘಟಿತರಾಗಿ ಹೋರಾಟ ಮಾಡುತ್ತಿದ್ದಾರೆ. ವಾಸ್ತವ ರೈತರು ಬೇರೆ, ಅರ್ಜಿದಾರರು ಬೇರೆ ಎಂದು ಈಗ ವಾದ ಮಾಡುತ್ತಾ ರೈತರಿಗೆ ಸರ್ಕಾರ ವಂಚನೆ ಮಾಡುತ್ತಿದೆ. ಇಂತಹ ಹಲವು ಪ್ರಶ್ನೆಗಳು ಈಗ ಮುಂಚೂಣಿಗೆ ಬಂದಿವೆ.

ಶಿವಮೊಗ್ಗ ಮಾದರಿ ಬೆಂಗಳೂರಿಗೆ ಏಕಿಲ್ಲ?

ಮುಖ್ಯಮಂತ್ರಿಗಳು, ತಮ್ಮ ಜಿಲ್ಲೆಯಾದ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣಕ್ಕಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವಾಗ ಆ ಪ್ರದೇಶದ ಬಗರ್‌ಹುಕುಂ ಸಾಗುವಳಿದಾರರಿಗೂ ಪರಿಹಾರವನ್ನು ಕೊಡಿಸಿದ್ದಾರೆ. ಇದು ಸ್ವಾಗತಾರ್ಹ. ಇದೇ ರೀತಿಯಲ್ಲಿ ದೇವನಹಳ್ಳಿ ವಿಮಾನ ನಿಲ್ದಾಣಕ್ಕಾಗಿ ಭೂಮಿಯನ್ನು ಕಳೆದುಕೊಂಡು ಬಗರ್‌ಹುಕುಂ ಸಾಗುವಳಿ ದಾರರಿಗೂ ಪರಿಹಾರ ನೀಡಲೇಬೇಕು. ತನ್ನಗೊಂದು, ಬೇರೆಯವರಿಗೊಂದು ಮಾನದಂಡವಾಗಲು ಸಾಧ್ಯವಿಲ್ಲ. ಇಲ್ಲೂ ರೈತರು ಎದ್ದು ನಿಂತಿದ್ದಾರೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಗಡಿಯಿಂದ 18 ಕಿ.ಮೀ.ವರೆಗಿನ ಬಗರ್‌ಹುಕುಂ ಸಾಗುವಳಿ ಸಕ್ರಮ ಮಾಡಬಾರದೆಂಬ ಸರ್ಕಾರ ತೀರ್ಮಾನ ವಾಪಸ್ಸು ಪಡೆದು, ರೈತರ ಬಗರ್‌ಹುಕುಂ ಸಾಗುವಳಿಯನ್ನು ಸಕ್ರಮ ಮಾಡಬೇಕು, 40–50 ವರ್ಷಗಳಿಂದ ಪಹಣಿ, ಖಾತೆ ಇತ್ಯಾದಿ ದಾಖಲೆಗಳಿರುವ ರೈತರಿಂದ ಅವರ ಹತ್ತಿರ ಇಲ್ಲದ ಮೂಲ ದಾಖಲೆಗಳನ್ನು ನೀಡದಿದ್ದರೆ, ರೈತರ ಭೂಮಿಯನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವುದಾಗಿ ಆನೇಕಲ್, ದಕ್ಷಿಣ ತಾಲ್ಲೂಕು ಇತ್ಯಾದಿ ತಾಲ್ಲೂಕುಗಳಲ್ಲಿ ಕಂದಾಯ ಕಾಯ್ದೆ 1964ರ ಕಲಂ 136(3)ರ ಅಡಿಯಲ್ಲಿ ನೀಡಿರುವ ನೋಟೀಸ್‌ಗಳನ್ನು ಕೂಡಲೇ ವಾಪಸ್ ಪಡೆಯಬೇಕು, ದೇವನಹಳ್ಳಿ ವಿಮಾನ ನಿಲ್ದಾಣಕ್ಕಾಗಿ ಬಡ ರೈತರಿಂದ ಸ್ವಾಧೀನಪಡಿಸಿಕೊಂಡಿರುವ ಸಾವಿರಾರು ಎಕರೆ ಬಗರ್‌ಹುಕುಂ ಸಾಗುವಳಿಯ ಭೂಮಿಗೆ ಮುಖ್ಯಮಂತ್ರಿಗಳ ಜಿಲ್ಲೆ ಶಿವಮೊಗ್ಗ ವಿಮಾನ ನಿಲ್ದಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡ ಬಗರ್‌ಹುಕುಂ ಸಾಗುವಳಿ ಭೂಮಿಗೆ ಪರಿಹಾರ ನೀಡಿದಂತೆ ಪರಿಹಾರ ನೀಡಬೇಕು. ಎಲ್ಲಾ ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮ ಮಾಡಬೇಕು ಹಾಗೂ ಹತ್ತಾರು ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಬಗರ್‌ಹುಕುಂ ಭೂಮಿಯ ಸಕ್ರಮಕ್ಕಾಗಿ ಹೊಸದಾಗಿ ಅರ್ಜಿ ಸಲ್ಲಿಸಲು ಅವಕಾಶ ನೀಡಬೇಕೆಂದು ಆಗ್ರಹಿಸಿ ಜುಲೈ 5,2011 ರ ಮಂಗಳವಾರ 'ಬೃಹತ್ ವಿಧಾನಸೌಧ ಚಲೋ' ಹಮ್ಮಿಕೊಳ್ಳಲಾಗಿದೆ.

ರೈತರ ಒಕ್ಕಲೆಬ್ಬಿಸುವ ದೊಡ್ಡ ಕಾರ್ಯಾಚರಣೆಗೆ ಸಿದ್ಧತೆ

ಸರ್ಕಾರಿ ಭೂಮಿಯ ಒತ್ತುವರಿಯನ್ನು ತೆರವು ಮಾಡಿ ಬೇಲಿ ಹಾಕಿ ಭದ್ರಪಡಿಸುವ ಒಂದು ದೊಡ್ಡ ಕಾರ್ಯಾಚರಣೆ ಸರ್ಕಾರ ಸಿದ್ಧತೆ ಮಾಡಿಕೊಳ್ಳುತ್ತಿದೆ. ಪೋಲೀಸ್ ಬಲವನ್ನು ಬಳಸಿ ಈ ಕೆಲಸವನ್ನು ಸಾಧಿಸಲು ಪ್ರಯತ್ನಿಸುತ್ತದೆ ಎಂಬುದನ್ನು ಪ್ರತ್ಯೇಕವಾಗಿ ಏನೂ ಹೇಳಬೇಕಿಲ್ಲ. ಭೂಗಳ್ಳರ ಸ್ವಾಧೀನದಲ್ಲಿರುವ ಭೂಮಿಯನ್ನು ನಿರ್ದಾಕ್ಷಿಣ್ಯವಾಗಿ ಕಿತ್ತುಕೊಳ್ಳುವುದುಆಗಬೇಕಾದ ಕೆಲಸವೇ. ಆದರೆ ಇಲ್ಲಿ ಸರ್ಕಾರ 'ಒತ್ತುವರಿ' ಎಂಬುದಕ್ಕೆ ನೀಡುತ್ತಿರುವ ವಿವರಣೆ–ಡೆಫನೇಷನ್‌ನನ್ನು ಗಮನಿಸಬೇಕು.

"ಕೃಷಿ ಭೂಮಿಯಲ್ಲಿ ಉಳುಮೆ ಮಾಡಿಕೊಂಡು ಜೀವನ ಸಾಗಿಸುತ್ತಾ ಯಾರು 50/53 ಅರ್ಜಿ ಹಾಕಿಕೊಂಡಿದ್ದಾರೆ, ಆ ಭೂಮಿಯನ್ನು ಮುಟ್ಟುವುದಿಲ್ಲ. ಅರ್ಜಿ ಹಾಕಿಕೊಂಡು ತಿರಸ್ಕೃತರಾದವರ ಭೂಮಿ.. ಅರ್ಜಿಗಳನ್ನೇ ಹಾಕದವರ ಭೂಮಿ... ಮೂಲ ದಾಖಲೆಗಳಿಲ್ಲದ (ಇಲ್ಲ ಎಂದು ಹೇಳಲಾಗುತ್ತಿರುವ) ಭೂಮಿಯನ್ನು ಇಡೀ ರಾಜ್ಯದಲ್ಲಿ ವಶಕ್ಕೆ ತೆಗೆದುಕೊಳ್ಳ ಲಾಗುವುದು". ಇದು ಸರ್ಕಾರದ ನೀತಿಯಾಗಿದೆ.

ಆಗಸ್ಟ್ 25–26ರಂದು ರಾಜ್ಯ ವ್ಯಾಪಿಯಾಗಿ ಎಲ್ಲಾ ಜಿಲ್ಲಾಧಿಕಾರಿಗಳ ಕಛೇರಿಯನ್ನು ಮುತ್ತಿಗೆ ಹಾಕುವ ಹೋರಾಟವನ್ನು ಯೋಜಿಸಲಾಗಿದ್ದರೆ, ನವೆಂಬರ್ 2011 ರಲ್ಲಿ ಕರ್ನಾಟಕ ರಾಜ್ಯದಲ್ಲಿ ಯೋಜಿಸಲಾಗಿರುವ ಕೃಷಿ ರಂಗದಲ್ಲಿ 'ವಿದೇಶಿ ಬಂಡವಾಳ ಹೂಡುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ' ದ ಹೊತ್ತಿಗೆ ಈ ಭೂಮಿ ಹೋರಾಟವೂ ಸಹ ನಿರ್ಣಾಯಕ ಘಟ್ಟವನ್ನು ತಲುಪಲು ಯೋಜಿಸಲಾಗಿದೆ. ಚಳುವಳಿ ನಿರತ ರೈತರ ದೃಢತೆ ಹೋರಾಟದ ಕಿಚ್ಚು ಗಮನಿಸುವಾಗ ಸರ್ಕಾರದ ಈ ನಡೆಗೆ ಹೆಜ್ಜೆ ಹೆಜ್ಜೆಗೆ ರೈತ ಆಂದೋಲನ ಪ್ರತಿರೋಧ ಹೊಮ್ಮುವುದು ಮಾತ್ರ ಖಚಿತವಾಗಿದೆ. ಅಂತಿಮವಾಗಿ ಹತ್ತಾರು ವರ್ಷಗಳಿಂದ ಇತ್ಯರ್ಥವಾಗದೇ ವಿಳಂಬವಾಗುತ್ತಾ ಬಂದಿದ್ದ ಬಗರ್‌ಹುಕುಂ ಸಾಗುವಳಿ ಭೂಮಿಯ ಪ್ರಶ್ನೆ ಈಗ ಒಂದು ನಿರ್ಣಾಯಕ ಘಟ್ಟಕ್ಕೆ ಬಂದು ನಿಂತಿದೆ. ಒಂದು ರೀತಿಯಲ್ಲಿ ಕ್ಲೈಮ್ಯಾಕ್ಸ್ ಹಂತಕ್ಕೆ ಬಂದಾಂತಾಗಿದೆ. ಬಡ ರೈತರು, ಸಾಗುವಳಿದಾರರು, ತಮ್ಮ ಹಕ್ಕನ್ನೇನಾದರೂ ಪಡೆಯುವುದಿದ್ದರೆ ಈಗ ಪಡೆಯಬೇಕು. ಈಗ ಇಲ್ಲವಾದರೆ ಇನ್ನೆಂದಿಗೂ ಇಲ್ಲ ಎಂಬ ಪರಿಸ್ಥಿತಿಗೆ ವಿಷಯ ಬಂದು ಮುಟ್ಟಿದೆ.

ಈ ಹಿನ್ನೆಲೆಯಲ್ಲಿಯೇ ರೈತ ಆಂದೋಲನವು ತೀವ್ರಗೊಂಡಿದೆ. ರೈತರು ತಮ್ಮ ಹಕ್ಕಿಗಾಗಿ ಬೇಡಿಕೆಗಳಿಗಾಗಿ ಆಗ್ರಹಿಸಿ ಜುಲೈ 25, 2011ರಂದು ಸಹಸ್ರಾರು ರೈತರು ಬೆಂಗಳೂರಿನಲ್ಲಿ ಅಣಿ ನೆರೆಯಲಿದ್ದಾರೆ. ಮುಂದಿನ ಹಲವು ಹಂತಗಳ ಹೋರಾಟಗಳ ಸಂತತಿ ಹೋರಾಟಗಳಿಗೆ ಈಗಾಗಲೇ ಈ ರೈತರು ನಾಂದಿ ಹಾಡಿದ್ದಾರೆ.

ಏನಿದು ಕೃಷಿರಂಗಕ್ಕೆ ವಿದೇಶಿ ಬಂಡವಾಳ ಆಹ್ವಾನ! ಯಾಕೆ ವಿಶ್ವ ಬಂಡವಾಳಗಾರರ ಸಮಾವೇಶ?

ಬಗರ್‌ಹುಕುಂ ಸಾಗುವಳಿದಾರರ ಹಕ್ಕು ಹೊಸಕಿ ಹಾಕುವ ನೀತಿ, ಮೂಲ ದಾಖಲೆ ಕೇಳಿ ನೀಡಲಾಗುತ್ತಿರುವ ಕಿರುಕುಳ... ಆಳುವ ಸರ್ಕಾರಗಳ 'ಅಭಿವೃದ್ಧಿ ಅಭಿವೃದ್ಧಿ' ಎಂಬ ಜಪ, ಈ ಎಲ್ಲವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ಆಳುವ ಸರ್ಕಾರಗಳ ಒಟ್ಟು ನೀತಿ ಏನೆಂದು ಸಮಗ್ರವಾಗಿ ಅರ್ಥಮಾಡಿಕೊಳ್ಳುವುದು ಸಾಧ್ಯವಾಗಬೇಕು.

ಬೆಂಗಳೂರನ್ನು, ಕರ್ನಾಟಕವನ್ನು ವಿಶ್ವ ಬಂಡವಾಳ ಹೂಡಿಕೆಯ ಆಕರ್ಷಣೆಯ ಕೇಂದ್ರವನ್ನಾಗಿ ಮಾಡುತ್ತೇವೆ ಎನ್ನುವ ಹಿಂದೆ ದೇಶೀಯ ವಿದೇಶಿ ಬಂಡವಾಳಗಾರರ ಅಗ್ಗದ ಕೂಲಿ ಕೊಟ್ಟು ಕಾರ್ಮಿಕ ಶ್ರಮವನ್ನು ಕೊಳ್ಳೆಹೊಡೆಯುವ ಲಾಭಕೋರ ಹೊಂಚು–ಅಗ್ಗವಾಗಿ ಅಥವಾ ಪುಕ್ಕಟೆಯಾಗಿ ರೈತರ ಜಮೀನು, ಸಾರ್ವಜನಿಕ ಜಮೀನು ಕಬಳಿಸುವ ಸಂಚಿದೆಯೋ ಹಾಗೇ. ಕೃಷಿ ರಂಗದಲ್ಲಿ ಬಂಡವಾಳ ಹೂಡುವ ವಿಶ್ವ ಬಂಡವಾಳಗಾರರ ಸಮಾವೇಶ ಎಂದರೆ ರೈತರ ಜಮೀನನ್ನು ದುಗ್ಗಾಣಿ ಕೊಟ್ಟು ನುಂಗಿ ನೊಣೆಯುವ ವಿರಾಟ ದುಷ್ಟ ಯೋಜನೆ ಎಂಬುದು ಸೂರ್ಯನ ಬೆಳಕಿನಷ್ಟೇ ಸತ್ಯ.

ರೈತನನ್ನು ಇನ್ನಿಲ್ಲದಂತೆ ಉದ್ಧರಿಸುವ ಭರವಸೆ ನೀಡಿ, ರೈತರ ಹೆಸರಿನಲ್ಲೇ ಪ್ರಮಾಣ ವಚನ ಸ್ವೀಕಾರ ಮಾಡಿ. ರೈತನ ಹೆಸರಿನಲ್ಲೇ ಆಣೆ ಪ್ರಮಾಣ ಮಾಡುತ್ತಿರುವ ಡಾ॥ ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದ ಅಜೆಂಡಾಗಳ ಜಾರಿಗೆ ತರಾತುರಿಯಲ್ಲಿದೆ. ಬಿಜೆಪಿಯ ನಿಜವಾದ ಮುಖ ಹೀಗೆ ಇಲ್ಲಿ ಅನಾವರಣ ಗೊಳ್ಳುತ್ತಿದೆ.

'ಕೃಷಿ ರಂಗದಲ್ಲಿ ವಿಶ್ವಬಂಡವಾಳ ಹೂಡಿಕೆ' ಎಂಬ ಸುನಾಮಿ ರೈತರ ಬದುಕಿನ ಮೇಲೆ ಭೂಮಿಯ ಮೇಲೆ ಎರಗಲು ಭೂಮಿಕೆಯನ್ನು ಸಜ್ಜುಗೊಳಿಸಲಾಗುತ್ತಿದೆ. ಈ ತಿಳುವಳಿಕೆಯ ಬೆಳಕಿನಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಯೋಜನೆ ಯೋಚನೆಗಳನ್ನು ಅರ್ಥ ಮಾಡಿಕೊಂಡು ಸಂಘರ್ಷಕ್ಕೆ ಪ್ರತಿರೋಧಕ್ಕೆ ಜನತೆ ಸಜ್ಜಾಗಬೇಕಾದದ್ದು ಅಗತ್ಯವಾಗಿದೆ.

ರೈತರ ಮೇಲೆ 'ಭೂಮಿ ಅತಿಕ್ರಮಣ' ಎಂಬ ಆರೋಪದ ಹಿಂದಿನ ರಹಸ್ಯ

ಅವರ ಹೆಸರು ಕೃಷ್ಣಮೂರ್ತಿ. ಆನೇಕಲ್‌ನ ರೈತರು. ತಮ್ಮ ಜಮೀನಿಗೆ ಅವರ ಬಳಿ ಪಕ್ಕ ದಾಖಲೆ ಇದೆ. ಆದರೆ ಕಂದಾಯ ಇಲಾಖೆ ನಿಮ್ಮ ಬಳಿ ಮೂಲ ದಾಖಲೆ ಇಲ್ಲ ಅಂತ ನೋಟೀಸ್ ಕೊಟ್ಟಿದೆ.

ಅದು 1932ರಲ್ಲಿ ಬ್ರಿಟಿಷರ ಕಾಲದಲ್ಲಿ ಮಂಜೂರಾಗಿರುವ ಜಮೀನು! ಆ ನಂತರ ಬೇರೆಯವರಿಗೆ ಮಾರಿದ್ದಾರೆ. ಆ ಮೇಲೆ ಆ ಜಮೀನು ತಾತ, ಅಪ್ಪರ ಕೈ ಬದಲಾಯಿಸಿ ಈಗ ಮಕ್ಕಳ ಕೈಗೆ ಬಂದಿದೆ. ಸರ್ಕಾರ ಈ ಜಮೀನಿಗೆ ಈಗ ಮೂಲ ದಾಖಲೆ ಕೊಡಿ ಎಂದರೆ ಎಲ್ಲಿಂದ ಕೊಡುವುದು.

ಇವೆಲ್ಲಾ ಕ್ರಮಗಳ ಹಿಂದೆ ನಿಜಕ್ಕೂ ಏನಿದೆ. ಅಧಿಕಾರಿಗಳ ಪರವಾಗಿ ಈ ರೈತರನ್ನು ಕಾಡುವ 'ಏಜೆಂಟರು' ಆಮೇಲೆ ಸಮಸ್ಯೆ 'ಪರಿಹರಿಸಲು' ಎಕರೆಗೆ 4–5 ಲಕ್ಷ ಲಂಚ ಕೇಳುವುದನ್ನು ನೋಡಿದರೆ ಇಲ್ಲಿ ನಿಜಕ್ಕೂ ಏನು ನಡೆಯುತ್ತಿದೆ ಎಂದು ಗೊತ್ತಾಗುತ್ತದೆ. ನೋಟೀಸ್ ಕೊಡುವುದು, ಸ್ಥಳ ಸಮೀಕ್ಷೆ ಮಾಡುವುದು, ಕೋರ್ಟು, ಕಛೇರಿ ಓಡಾಟಗಳ ಕಿರಿಕಿರಿ ತಡೆದುಕೊಳ್ಳಲಾರದ ಅಮಾಯಕ ರೈತರನ್ನು ಬೆದರಿಸಿ ಲಕ್ಷಾಂತರ ರೂಪಾಯಿಗಳ ವಸೂಲಿ ನಡೆದಿದೆ.

ಬಡವರ ಮೇಲೆ, ರೈತರ ಮೇಲೆ ಸರ್ಕಾರಿ 'ಜಮೀನು ಅತಿಕ್ರಮಣ'ದ ಆರೋಪ ಹೊರಿಸುವುದರ ಹಿಂದಿನ ರಹಸ್ಯ ಹೀಗಿದೆ. ಹಲವು ಪ್ರಕರಣಗಳಲ್ಲಿ ಮೂಲ ದಾಖಲೆ ಕೊಟ್ಟರೂ ಭೂ ಪರಿವರ್ತನೆಗೆ ಅಥವಾ ಮಾರಾಟಕ್ಕೆ ಅನುಮತಿ ನೀಡದೆ ಡಿ.ಸಿ.ಯಿಂದ ವಿಶೇಷ ಅನುಮತಿ ತೆಗೆದುಕೊಳ್ಳಬೇಕು ಎಂದು ಕೊಡುತ್ತಿರುವ ಕಿರುಕುಳಗಳ ಹಿಂದಿನ ರಹಸ್ಯವೂ ಇಷ್ಟೇ ಆಗಿದೆ.



ತಲೆಯ ಮೇಲೆ, ಬೆನ್ನ ಮೇಲೆ ಭಾರ ಹೊರುವುದೇ ಹಮಾಲಿ ಕಾರ್ಮಿಕರ ಕಾಯಕ, ಈಗವರು ತಲೆಯ ಮೇಲೆ ಹತ್ತು ಬೇಡಿಕೆಗಳನ್ನು ಹೊತ್ತು ಬೆಂಗಳೂರಿಗೆ ಬಂದಿದ್ದರು. ಏನಾಯ್ತು ಇಲ್ಲಿ 'ಗುಲಾಬಿ ನಗರ'ದಲ್ಲಿ? ಸಿಕ್ಕತೆ ಸ್ಪಂದನೆ?

ಹತ್ತು ಬೇಡಿಕೆಗಳನ್ನು ಹೊತ್ತು ಬೆಂಗಳೂರಿಗೆ ಬಂದ ಹಮಾಲಿಗಳು

ರಾಜ್ಯದ ಅಕ್ಕಿ ಗಿರಣಿ, ಎಣ್ಣೆ, ಬೇಳೆ ಮಿಲ್‌ಗಳಲ್ಲಿ, ಎಫ್‌ಸಿಐ ಗ್ರೋಡಾನ್. ಸೆಂಟ್ರಲ್ ಮತ್ತು ಸ್ಟೇಟ್ ವೇರ್ ಹೌಸ್, ಆಹಾರ ನಿಗಮ ಮತ್ತು ಪಾನೀಯ ನಿಗಮ,ರೇಷ್ಮೆ ಮಾರುಕಟ್ಟೆ ಮತ್ತು ರೈಲ್ವೇ ಗೂಡ್ ಶೆಡ್ ಹಾಗೂ ಸರ್ಕಾರಿ/ಖಾಸಗಿ ಬಸ್ ನಿಲ್ದಾಣಗಳು ಮತ್ತು ನಗರ/ಗ್ರಾಮೀಣ ಮಾರುಕಟ್ಟೆ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿರುವ ಹಮಾಲಿ ಕಾರ್ಮಿಕರು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಬೆಂಗಳೂರಿನಲ್ಲಿಂದು"ವಿಧಾನ ಸೌಧ ಚಲೋ " ನಡೆಸಿ ಕಾರ್ಮಿಕ ಸಚಿವರಿಗೆ ಮನವಿ ಸಲ್ಲಿಸಿದರು.

ಬೆಲೆ ಏರಿಕೆಗೆ ತಕ್ಕಂತೆ ವೇತನ ಹೆಚ್ಚಳವಾಗಬೇಕು, ಭವಿಷ್ಯನಿಧಿ ವಿಮಾಸೌಲಭ್ಯ ಜಾರಿಯಾಗಬೇಕು. ಎಲ್ಲರಿಗೂ ಬಿಪಿಎಲ್ ಕಾರ್ಡ್ ನೀಡಿ ಕಡಿಮೆದರದಲ್ಲಿ ಆಹಾರ ಧಾನ್ಯ ವಿತರಿಸಬೇಕು, ಉಚಿತ ನಿವೇಶನ ವಸತಿ ಸೌಕರ್ಯ ಕಲ್ಪಿಸಬೇಕು ಮತ್ತು ಅಸಂಘಟಿತ ಕಾರ್ಮಿಕ ಮಂಡಳಿಯಿಂದ ಗುರುತಿನ ಚೀಟಿ, ಖಾತ್ರಿಯಾದ ಪಿಂಚಣಿ ನೀಡಬೇಕು, ಕಾರ್ಮಿಕ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೂಳಿಸಬೇಕು ಮೊದಲಾದ ಬೇಡಿಕೆಗಳನ್ನು ಸರ್ಕಾರದ ಮುಂದೆ ಕಾರ್ಮಿಕರು ಮಂಡಿಸಿದ್ದಾರೆ.


ರಾಜ್ಯದಲ್ಲಿ ಮೇಲ್ಕಂಡ ವಿಭಾಗದಲ್ಲಿ ಸುಮಾರು ಒಂದು ಲಕ್ಷಕ್ಕಿಂತ ಅಧಿಕ ಕಾರ್ಮಿಕರು ಹತ್ತಾರು ವರ್ಷಗಳಿಂದ ಭಾರವಾದ ಮೂಟೆಗಳನ್ನು ಹೊರುತ್ತಾ ಯಾವೊಂದು ಕನಿಷ್ಠ ಸೌಲಭ್ಯಗಳಿಲ್ಲದೆ ದುಡಿಯುತ್ತಿದ್ದಾರೆ. ಈ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವ ಅಧಿಕಾರಿಗಳು ಮತ್ತು ಗುತ್ತಿಗೆದಾರರು ಎಲ್ಲಾ ಕಾನೂನುಗಳನ್ನು ಉಲ್ಲಂಘಿಸಿ ಕಾರ್ಮಿಕರನ್ನು ತೀವ್ರವಾಗಿ ಶೋಷಿಸುತ್ತಿದ್ದಾರೆ. ಈ ಬಗ್ಗೆ ಕಾರ್ಮಿಕರು ಹತ್ತಾರು ಬಾರಿ ಹೋರಾಟ ಮಾಡಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಹಿನ್ನೆಲೆಯಲ್ಲಿ **"ಕರ್ನಾಟಕ ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್"** ಈ ಹೋರಾಟವನ್ನು ಹಮ್ಮಿಕೊಂಡಿತ್ತು

ರಾಜ್ಯದ ಬೆಂಗಳೂರಿನ ಬೊಮ್ಮಸಂದ್ರ ಕುಂಬಳಗೋಡು, ತುಮಕೂರಿನ ಕೊರಟಗೇರೆ, ಗುಂಡ್ಲಪೇಟೆ, ಚಳ್ಳಕೆರೆ, ಶಿರಗುಪ್ಪ, ಗಂಗಾವತಿ, ಕುಷ್ಟಗಿ, ಬಾಲ್ಕಿ, ಹುಮನಾಬಾದ್, ಚಿಟಗುಪ್ಪ, ಬಿಜಾಪುರ, ಮಹಾಲಿಂಗಪೂರ, ಚಿಕ್ಕೋಡಿ, ಗೋಕಾಕ, ರಾಯಬಾಗ, ಬೆಳಗಾವಿ, ರಾಮದುರ್ಗ, ಬೈಲಹೊಂಗಲ, ಹುಬ್ಬಳ್ಳಿ, ಹಾನಗಲ್, ಶಿರಹಟ್ಟಿ, ಭದ್ರಾವತಿ, ಶಿಕಾರಿಪುರ, ಶಿವಮೊಗ್ಗಾ, ಶಿಡ್ಲಘಟ್ಟ ಮೊದಲಾದ ಕಡೆಗಳಿಂದ ಬೆಂಗಳೂರಿಗೆ ಆಗಮಿಸಿದ್ದ ಸಾವಿರಾರು ಹಮಾಲಿ ಕಾರ್ಮಿಕರು ರೈಲ್ವೇ ನಿಲ್ದಾಣದಿಂದ ಸ್ವಾತಂತ್ರ್ಯ ಉದ್ಯಾನದವರೆಗೂ ಮೆರವಣಿಗೆ ನಡೆಸಿ ನಂತರ ಪ್ರತಿಭಟನಾ ಸಭೆ ನಡೆಸಲಾಯಿತು.

ಪ್ರತಿಭಟನಾಕಾರರನ್ನು ಉದ್ದೇಶಿಸಿ ಫೆಡರೇಷನ್ ರಾಜ್ಯ ಅಧ್ಯಕ್ಷರಾದ ಮಹೇಶ ಪತ್ತಾರ್, ಪ್ರಧಾನ ಕಾರ್ಯ ದರ್ಶಿ ಕೆ.ಮಹಾಂತೇಶ [illegible] ಮಾತನಾಡಿದರು. [illegible]

ಪ್ರತಿಭಟನಾ [illegible] ಮೂರ್ತಿಯವರು [illegible] ಬೇಡಿಕೆಗಳ ಕುರಿತು ಕಾರ್ಮಿಕ [illegible] ಚರ್ಚಿಸಿ ಸಭೆ ಕರೆಯಲು ಕ್ರಮವಹಿಸುವುದಾಗಿ ಭರವಸೆ ನೀಡಿದರು.


ರಾಜ್ಯ ಪದಾಧಿಕಾರಿಗಳಾದ ಎ.ಹುಲುಗಪ್ಪ, ಸೈಯದ್ ಮುಜೀಬ್, [illegible], ತುಕಾರಾಮ್ ತಳವಾರ್, ಸಿದ್ದಪ್ಪ ಮಂತ್ರಿ, ಪುರಂಧರ್ ಘಟ್ಟಿ, ಕಲ್ಲಪ್ಪ ಕಡಬಲ್ಲನವರ, ನೂರಅಹ್ಮದ ಖೇಣಿ, ಬೋರೇಗೌಡ, ಜಿ. ಓಬಳೇಶಪ್ಪ, ಸುರೇಶ, ಟಿ. ತಿಪ್ಪೇಸ್ವಾಮಿ, ಈ. ನಾಗರಾಜ, ಎಚ್.ಓ.ನಾಗರಾಜ ಸೇರಿದಂತೆ ಹಲವಾರು ಮುಖಂಡರು ಹೋರಾಟದ ನೇತೃತ್ವ ವಹಿಸಿದ್ದರು.



ಮೆರವಣಿಗೆ



ರಾಜ್ಯ ಹಮಾಲಿ ಕಾರ್ಮಿಕರ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ್ ಮಾತನಾಡುತ್ತಿರುವುದು



ಇದು ನಿಮಗೆ ಗೊತ್ತೆ?


ಭಾರತೀಯರ ರೂ. 5.8 ಲಕ್ಷ ಕೋಟಿ ಕಿತ್ತ ಹಣದುಬ್ಬರ

ಅತೀವ ಹಣದುಬ್ಬರವು ಭಾರತೀಯ ಕುಟುಂಬಗಳಿಂದ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ತೆರುವಂತೆ ಮಾಡಿದೆ ಎಂಬುದು ನಿಮಗೆ ಗೊತ್ತೆ? ಇಲ್ಲಿದೆ ನೋಡಿ 'ಕ್ರಿಸಿಲ್' ಎಂಬ ಆರ್ಥಿಕ ಸೂಚ್ಯಂಕ ಸಂಸ್ಥೆಯ ವರದಿ.

ಅದು ತನ್ನ ಅಧ್ಯಯನದಲ್ಲಿ 2008 ರಿಂದ 2011ರ ಇಲ್ಲಿಯವರೆಗೆ ಭಾರತೀಯರು ಗ್ರಾಹಕ ವಸ್ತುಗಳ ಮೇಲೆ ಹೆಚ್ಚಿಗೆ ತೆತ್ತದ್ದು 5 ಲಕ್ಷದ 80 ಸಾವಿರ ಕೋಟಿ ರೂಪಾಯಿಗಳು ಎಂದಿದೆ.

2008-09 ರಲ್ಲಿ 0.45 ಲಕ್ಷ ಕೋಟಿ 2009-10ರಲ್ಲಿ 1.62 ಲಕ್ಷ ಕೋಟಿ, 2010-11ರಲ್ಲಿ 3.76 ಲಕ್ಷ ಕೋಟಿ ರೂಪಾಯಿಗಳು ಎಂದು ವಿವರವಾಗಿ ಅಧ್ಯಯನ ತಿಳಿಸಿದೆ.

(ಕೃಪೆ: ಬಿಸಿನೆಲ್‌ಲೈನ್, 2011)




ಕೈಜೋಡಿಸಿ, ಚಂದಾದಾರರನ್ನಾಗಿಸಿ

ಜನಶಕ್ತಿ ಪ್ರಚಾರಾಂದೋಲನ-2011 ಜೂನ್ 15 ರಿಂದ ಜುಲೈ 15. ಪತ್ರಿಕೆಯ ಪ್ರಸಾರ ಹೆಚ್ಚಿಸಲು ಚಂದಾ. [illegible] ಹೆಚ್ಚಿಸುವ ಮೂಲಕ ಕೈಜೋಡಿಸಿ. ಸ್ವಾತಂತ್ರ್ಯೋತ್ಸವ ಸಂಚಿಕೆಗೆ ಜಾಹೀರಾತು ಸಂಗ್ರಹಿಸಿ ನೀಡಿ.

- ಸಂ

ಪೆಟ್ರೋಲಿಯಂ ಉತ್ಪನ್ನಗಳ ದರಗಳಲ್ಲಿ ಏರಿಕೆಯ ಮತ್ತೊಂದು ಕಂತು ಪ್ರಕಟವಾಗಿದೆ. ಇದು ಸರಕಾರದ್ದೇ ನಿರ್ಧಾರವಾದ್ದರಿಂದ ಪೆಟ್ರೋಲ್ ದರ ಏರಿಕೆಯಂತೆ ತೈಲ ಕಂಪನಿಗಳತ್ತ ತೋರಿಸುವಂತಿಲ್ಲ. ಎಂದಿನಂತೆ ದರ ಏರಿಕೆಗಳನ್ನು ಸಮರ್ಥಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಈ ನಡುವೆ 'ದಿವ್ಯ ಮೌನ'ವನ್ನು ತೊರೆಯಬೇಕೆಂಬ ತಮ್ಮ ಆಪ್ತರ ಸಲಹೆ ಪಾಲಿಸುವಂತೆ ಕಾಣುತ್ತಿರುವ ಪ್ರಧಾನಿಗಳು ಸಂಸತ್ತಾಗಲೀ, ಸಿಎಜಿಯಾಗಲೀ, ಮಾಧ್ಯಮಗಳಾಗಲೀ ಯುಪಿಎ ಸರಕಾರ ತನ್ನ ಧೋರಣೆಗಳನ್ನು ಪರಿಶೀಲಿಸುವಲ್ಲಿ, ಅವುಗಳ ಜಾರಿಯಲ್ಲಿ ಯಾವ 'ಅನಿಶ್ಚಿತತೆಯ ಜಗತ್ತಿನಲ್ಲಿ' ಕೆಲಸ ಮಾಡಬೇಕಾಗಿದೆ ಎಂಬುದನ್ನು ಗಮನಕ್ಕೆ ತಗೊಳ್ಳಬೇಕಾಗಿ ಮನವಿ ಮಾಡಿದ್ದಾರೆ! ಇದಕ್ಕೆ ಮೊದಲೇ ಸಿಎಜಿ ಉದಾರೀಕರಣದ ಯುಗದಲ್ಲಿ ತಾನು ಎಂತಹ ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ ಎಂಬುದನ್ನು ಗಮನಿಸಬೇಕು ಎಂದು ಮಾಡಿರುವ ಮನವಿಗೆ ಮಾತ್ರ ಇದೇ ಯುಪಿಎ ಸರಕಾರ ಸ್ಪಂದಿಸಿಲ್ಲ. ಭಾರತ–ಅಮೆರಿಕಾ ಪರಮಾಣು ವ್ಯವಹಾರದಲ್ಲಿ ಈ ಪ್ರಧಾನಿ, ಯುಪಿಎ ಸರಕಾರ ದೇಶಕ್ಕೆ, ಸಂಸತ್ತಿಗೆ ತಪ್ಪು ಮಾಹಿತಿ ನೀಡಿದ್ದಾರೆಯೇ ಎಂದು ಉತ್ತರಿಸಬೇಕಾದ ಸನ್ನಿವೇಶವೂ ಈ ವಾರ ಉಂಟಾಗಿದೆ.



ವೇದರಾಜ ಎನ್.ಕೆ.

ಭ್ರಷ್ಟಾಚಾರದ ಮಾತಾಡುವವರಿಗೆ 'ಲೈಸೆನ್ಸ್ -ಪರ್ಮಿಟ್ ರಾಜ್ಯಭಾರ'ದ ಭೂತದರ್ಶನ

ಪ್ರಧಾನ ಮಂತ್ರಿಗಳು ತಾನು 'ಅತ್ಯಂತ ಭ್ರಷ್ಟ ಸರಕಾರ'ದ ನೇತೃತ್ವ ವಹಿಸಿದ್ದೇನೆ ಎಂಬುದು ಕೇವಲ ಅಪಪ್ರಚಾರ ಎಂದು 'ದೃಢವಾಗಿ' ಹೇಳಿದ್ದಾರೆ. ಜೂನ್ 29ರಂದು ಪ್ರಧಾನ ಮಂತ್ರಿಗಳು ಪತ್ರಿಕಾ ಸಂಪಾದಕರ ಒಂದು ಸಣ್ಣ ಗುಂಪಿನೊಂದಿಗೆ ಎರಡು ಗಂಟೆಗಳ 'ಸಂವಾದ' ನಡೆಸಿ ತಮ್ಮ ಸರಕಾರದ ಬಗ್ಗೆ ಇರುವ ಸಂದೇಹಗಳನ್ನು ಪರಿಹರಿಸಲು ಪ್ರಯತ್ನ ನಡೆಸಿದ್ದಾರೆ. ಭ್ರಷ್ಟ ಸರಕಾರ ಎಂಬ ಸಿನಿಕತನ, ಬಾಣ ಪ್ರಯೋಗ ಉದ್ದಿಮೆಗೆ ಒಳ್ಳೆಯದಲ್ಲ, ಅದು ಮತ್ತೆ ಲೈಸೆನ್ಸ್ -ಪರ್ಮಿಟ್ ರಾಜ್ಯಭಾರದ ಭೀತಿಯನ್ನು ಹುಟ್ಟಿಸುತ್ತದೆ ಎಂದು ಅವರೇ ಹೆದರಿಸಿದ್ದಾರೆ! ಸಂಸತ್ತಾಗಲೀ, ಸಿಎಜಿಯಾಗಲೀ, ಮಾಧ್ಯಮಗಳಾಗಲೀ ಯುಪಿಎ ಸರಕಾರ ತನ್ನ ಧೋರಣೆಗಳನ್ನು ಪರಿಶೀಲಿಸುವಲ್ಲಿ, ಅವುಗಳ ಜಾರಿಯಲ್ಲಿ ಯಾವ 'ಅನಿಶ್ಚಿತತೆಯ ಜಗತ್ತಿನಲ್ಲಿ' ಕೆಲಸ ಮಾಡಬೇಕಾಗಿದೆ ಎಂಬುದನ್ನು ಗಮನಕ್ಕೆ ತಗೊಳ್ಳಬೇಕಾಗಿ ಅವರು ಮನವಿ ಮಾಡಿದ್ದಾರೆ ಎಂದು ವರದಿಯಾಗಿದೆ.

ಇದರ ಅರ್ಥ ಏನೋ ತಿಳಿಯದು. ಭ್ರಷ್ಟಾಚಾರದ ಹಗರಣಗಳ ಸರಮಾಲೆ ಪ್ರಕಟವಾಗುತ್ತಿರುವಾಗ ಪ್ರಧಾನಿಗಳ ದಿವ್ಯಮೌನ ಸರಿಯಲ್ಲ ಎಂದು ಅವರ ಆಪ್ತರಿಗೂ ಅನಿಸಿದಂತಿದೆ. ಇನ್ನು ಮುಂದೆ ನಿಯಮಿತವಾಗಿ ಪತ್ರಿಕಾ ಸಂಪಾದಕರೊಂದಿಗೆ ಇಂತಹ 'ಸಂವಾದ'ಗಳ ಮೂಲಕ ಯುಪಿಎ ಸರಕಾರದ ಇಮೇಜು ಇನ್ನಷ್ಟು ಇಳಿಯದಂತೆ ನೋಡಿಕೊಳ್ಳಲಾಗುವುದಂತೆ.

ಇದರ ಮೊದಲೇ ಸಿಎಜಿ ತಾನು ಎಂತಹ ಮಿತಿಗಳೊಳಗೆ ಕೆಲಸ ಮಾಡಬೇಕಾಗಿದೆ ಎಂದು ಇದೇ ಯುಪಿಎ ಸರಕಾರದ ಗಮನಕ್ಕೆ ತಂದಿತ್ತು. ಇದಕ್ಕಾಗಿ 1971ರ ಆಡಿಟ್(ಲೆಕ್ಕ ಪರಿಶೋಧನೆ) ಶಾಸನಕ್ಕೆ ಮೂರು ತಿದ್ದುಪಡಿಗಳನ್ನು ಅದು ಸೂಚಿಸಿದೆಯಂತೆ. ಮೊದಲನೆಯದಾಗಿ, ಈಗ ಸರಕಾರದ ಇಲಾಖೆಗಳು ಸಿಎಜಿ ಕೇಳಿರುವ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಮಿತಿ ಇಲ್ಲ. ಅದನ್ನು ಕನಿಷ್ಟ 30 ದಿನ ಎಂದು ನಿಗದಿಪಡಿಸಬೇಕು; ಎರಡು, ಸಂಪೂರ್ಣಗೊಂಡ ಸಿಎಜಿ ವರದಿಯನ್ನು ಸಂಸತ್ತು ಮತ್ತು ಬೇರೆ ಶಾಸನ ಸಭೆಗಳ ಮುಂದೆ ಮಂಡಿಸಲು ಕೂಡ ಒಂದು ಸ್ಪಷ್ಟ ವೇಳಾಪಟ್ಟಿಯನ್ನು ನಿಗದಿ ಮಾಡಬೇಕು;

ಮೂರನೆಯದ್ದು ಸಿಎಜಿಯ ಅಧಿಕಾರ ವ್ಯಾಪ್ತಿಗೆ ಸಂಬಂಧಪಟ್ಟದ್ದು. ಈಗ ಸಾರ್ವಜನಿಕ ಹಣದ ಬಳಕೆಯಲ್ಲಿ ವ್ಯಾಪಕ ಬದಲಾವಣೆ ಯಾಗಿದ್ದು ಅವೆಲ್ಲವನ್ನೂ ಪರಿಶೋಧಿಸುವ ಅಧಿಕಾರ ಸಿಎಜಿಗೆ ಇದೆಯೇ ಇಲ್ಲವೇ ಎಂಬುದು ಸ್ಪಷ್ಟವಿಲ್ಲ (ಬಹುಶಃ ಆರ್ ಐಎಲ್ ತೈಲ ಸಚಿವಾಲಯಕ್ಕೆ ಬರೆದ ಪತ್ರ ಇದನ್ನು ಸೂಚಿಸುತ್ತದೆ), ವಿಶೇಷವಾಗಿ ಉದಾರೀಕರಣದ ಈ ಯುಗದಲ್ಲಿ ಜಂಟಿ ಉದ್ದಿಮೆಗಳು ಮತ್ತು ಪಿಪಿಪಿ(ಖಾಸಗಿ–ಸಾರ್ವಜನಿಕ ಪಾಲುದಾರಿಕೆ) ಮಾದರಿಗಳು ಹೆಚ್ಚುತ್ತಿದ್ದು, ಸಾರ್ವಜನಿಕ ಹಣದ ಖರ್ಚಿನ ವ್ಯಾಪ್ತಿ ಹೆಚ್ಚುತ್ತಿದೆ; ಸಿಎಜಿಯ ಲೆಕ್ಕ ಪರಿಶೋಧನೆಯ ವ್ಯಾಪ್ತಿಯನ್ನು ಇವನ್ನೂ ಒಳಗೊಳ್ಳುವಂತೆ ಸ್ಪಷ್ಟ ಪಡಿಸುವ ಅಗತ್ಯವಿದೆ. ಆದ್ದರಿಂದ ಒಂದು ಆಧುನೀಕೃತ ಆಡಿಟ್ ಕಾನೂನನ್ನು ರೂಪಿಸಬೇಕಾಗಿದೆ ಎಂಬುದು ಸಿಎಜಿ ಸೂಚನೆ. ಇವು ಯಾವುದಕ್ಕೂ ಯುಪಿಎ ಸರಕಾರ ಇದುವರೆಗೆ ಸ್ಪಂದಿಸಿದಂತಿಲ್ಲ. ಬಹುಶ: 'ಅನಿಶ್ಚಿತತೆಯ ಜಗತ್ತಿನಲ್ಲಿ' ಕೆಲಸ ಮಾಡುವ ಅನಿವಾರ್ಯತೆಯಿಂದಾಗಿ!



ಕೃಪೆ : ದಿ ಹಿಂದು

★

ಡೀಸೆಲ್, ಸೀಮೆ ಎಣ್ಣೆ, ಎಲ್‌ಪಿಜಿ ದರ ಏರಿಕೆ – ಹಣದುಬ್ಬರದ ಭಯ ಬೇಡವಂತೆ!

ಯುಪಿಎ–2 ಸರಕಾರದ 'ಇಜಿಒಎಂ'(ಅಧಿಕಾರ ಪಡೆದ ಮಂತ್ರಿಗಳ ಗುಂಪು) ಶಿಫಾರಸಿನಂತೆ ಡೀಸೆಲ್ ದರ ಲೀಟರಿಗೆ 3ರೂ., ಸೀಮೆ ಎಣ್ಣೆಯದ್ದು ಲೀಟರಿಗೆ 2ರೂ. ಮತ್ತು ಅಡುಗೆ ಅನಿಲದ ದರ ಸಿಲಿಂಡರ್ ಗೆ 50ರೂ. ಹೆಚ್ಚಿದೆ. ಇದು 'ಮಿತವಾದ' ಏರಿಕೆ ಎಂದು ಈ ಇಜಿಒಎಂ ಮುಖ್ಯಸ್ಥ ಮತ್ತು ಹಿರಿಯ ಯುಪಿಎ–2 ಮಂತ್ರಿ ಪ್ರಣಬ್ ಮುಖರ್ಜಿ ಹೇಳಿದ್ದಾರೆ.

ಈ ಬೆಲೆಯೇರಿಕೆಯಿಂದಾಗಿ, ಈಗಾಗಲೇ 9ಶೇ. ದಾಟಿರುವ ಹಣದುಬ್ಬರ ದರ ಎರಡಂಕಿಯನ್ನು ದಾಟುವ ಸಂಭವವಿದೆ ಎಂದು ತಜ್ಞರು ಹೇಳಿದ್ದಾರೆ. ಆದರೆ ಈ ರೀತಿ ಇಂಧನ ದರ ಏರಿಕೆಗಳು ತಕ್ಷಣವೇ ಹಣದುಬ್ಬರ ಏರಿಸಿದರೂ ಒಟ್ಟಾರೆಯಾಗಿ ಆರ್ಥಿಕ ವ್ಯವಸ್ಥೆಯಲ್ಲಿ 'ಹಣವನ್ನು ಹೀರಿಕೊಂಡು' ಮುಂದೆ ಹಣದುಬ್ಬರವನ್ನು ಹಗುರಗೊಳಿಸುತ್ತವೆ ಎಂದು ಯೋಜನಾ ಆಯೋಗದ ಉಪಾಧ್ಯಕ್ಷರು ಅಪ್ಪಣೆ ಕೊಡಿಸಿದ್ದಾರೆ. ಅತ್ತ ಅವರ ನಂಬಿಕಸ್ಥ ಜಾಗತಿಕ ಹಣಕಾಸು ಸಂಶೋಧನಾ ಕಂಪನಿ ಕ್ರೈಸಿಲ್ ಹೇಳುವ ಕಥೆಯೇ ಬೇರೆ. ಕಳೆದ ಮೂರು ವರ್ಷಗಳಲ್ಲಿ ಗಗನಕ್ಕೇರಿರುವ ಬೆಲೆಗಳಿಂದಾಗಿ ಭಾರತೀಯ ಕುಟುಂಬಗಳ ತಲೆಯ ಮೇಲೆ 5.80 ಲಕ್ಷ ಕೋಟಿ ರೂ.ಗಳಷ್ಟು ಹೆಚ್ಚಿನ ಹೊರೆ ಬಿದ್ದಿದೆ ಎಂದು ಅದು ಲೆಕ್ಕ ಹಾಕಿದೆಯಂತೆ. 'ಹಣದುಬ್ಬರ ನೋಯಿಸುತ್ತದೆ' ಎಂಬುದು ಈ ವರದಿಯ ತಲೆಬರೆಹ. ಭಾರತದ 'ಆಮ್ ಆದ್ಮಿ'ಗಂತೂ 'ಇದು ಹೊಸ ಸಂಶೋಧನೆಯೇನಲ್ಲ; ಇಂಧನ ದರ ಏರಿಕೆಗಳು ಹಣದುಬ್ಬರವನ್ನು ಮುಂದೆ ಹಗುರಗೊಳಿಸುತ್ತವೆ ಎಂಬುದು ಮಾತ್ರ ಹೊಸ ಸುದ್ದಿಯೇ.

ವಾಸ್ತವವಾಗಿ, ಅಂತರ‍್ರಾಷ್ಟ್ರೀಯ ಕಚ್ಚಾ ತೈಲ ಉತ್ಪಾದನೆಯನ್ನು ಹೆಚ್ಚಿಸುವ ಮಾತು ಬರುತ್ತಿದ್ದು ಅದರಿಂದಾಗಿ ಬೆಲೆ ಇಳಿಯುವ ಸಂಭವ ಇರುವುದರಿಂದ ಆತುರಾತುರದಿಂದ ಯುಪಿಎ-2 ಸರಕಾರ ಈ ದರ ಏರಿಕೆಯನ್ನು ಪ್ರಕಟಿಸಿದೆ ಎಂದೂ ಹೇಳಲಾಗುತ್ತಿದೆ.

ಯುಪಿಎ–2 ಸರಕಾರ ಕಚ್ಚಾತೈಲದ ಮೇಲೆ ಹಾಕಿದ್ದ ಸೀಮಾಸುಂಕವನ್ನು ಹಿಂತೆಗೆದುಕೊಂಡು ಬಹಳ ಉಪಕಾರ ಮಾಡಿರುವಂತೆ ಬೆನ್ನು ತಟ್ಟಿಕೊಳ್ಳುತ್ತಿದೆ. ವಾಸ್ತವವಾಗಿ ಇದರಿಂದ ಕಚ್ಚಾತೈಲ ಆಮದು ಮಾಡಿಕೊಳ್ಳುವ ಕಂಪನಿಗಳಿಗೆ ಪ್ರಯೋಜನವಷ್ಟೇ, ಸಾಮಾನ್ಯ ಜನರಿಗೆ ಏನೂ ಪ್ರಯೋಜನವಿಲ್ಲ. ಜನಸಾಮಾನ್ಯರಿಗೆ ಪ್ರಯೋಜನ ತರಬಹುದಾದ ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಆಧರಿಸಿದ ತೆರಿಗೆದರಗಳನ್ನು ಇಳಿಸಲು ಮಾತ್ರ ಅದು ನಿರಾಕರಿಸುತ್ತಲೇ ಇದೆ. ರಾಜ್ಯ ಸರಕಾರಗಳು ಮಾತ್ರ ಅವುಗಳ ತೆರಿಗೆಯನ್ನು ಕಡಿತ ಮಾಡಬೇಕಂತೆ.

ಯುಪಿಎ–2ರ ಒಂದು ಅಂಗಪಕ್ಷ ಎನ್‌ಸಿಪಿ ಈ ದರ ಏರಿಕೆಗಳಿಗೆ ತಾನು ಜವಾಬ್ದಾರಿಯಲ್ಲ ಎಂದಿದೆ. ಸಾಮಾನ್ಯವಾಗಿ ಈ ಬಗ್ಗೆ ಸದ್ದು ಮಾಡುತ್ತಿದ್ದ ಇನ್ನೊಂದು ಅಂಗಪಕ್ಷ ತೃಣಮೂಲ ಕಾಂಗ್ರೆಸ್ ಈ ಬಾರಿ ತನ್ನ ವಿರೋಧವನ್ನೇನೂ ವ್ಯಕ್ತಪಡಿಸಿಲ್ಲ, ಬದಲಾಗಿ ಅದರ ನೇತೃತ್ವದ ಪಶ್ಚಿಮ ಬಂಗಾಳ ಸರಕಾರ ತನ್ನ ತೆರಿಗೆ ದರ ಇಳಿಸಿ ತನ್ನ ಸಾಧನೆಯೆಂಬಂತೆ ಬೆನ್ನು ತಟ್ಟಿಕೊಳ್ಳುತ್ತಿದೆ.

ಸಿಐಟಿಯು ಮತ್ತು ಇತರ ಕಾರ್ಮಿಕ ಸಂಘಟನೆಗಳು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಅಖಿಲ ಭಾರತ ಕಿಸಾನ್ ಸಭಾ, ಕೃಷಿಕೂಲಿಕಾರರ ಸಂಘಟನೆ ಈ ದರ ಏರಿಕೆಗಳು ಸಾಗಾಣಿಕೆ ದರ, ಕೃಷಿ ಖರ್ಚುಗಳನ್ನು ಕೂಡ ಹೆಚ್ಚಿಸಿ ಜನಸಾಮಾನ್ಯರ ಸಂಕಟಗಳನ್ನು ಮತ್ತಷ್ಟು ಹೆಚ್ಚಿಸುತ್ತವೆ, ಇವನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿವೆ. ದೇಶಾದ್ಯಂತ ದುಡಿಯುವ ಜನಗಳು ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಆದರೆ, ಅರ್ಧ ಡಝನ್ ಉನ್ನತ ಹಣಕಾಸು ಅಧಿಕಾರಿಗಳೊಂದಿಗೆ ಅಮೆರಿಕಾ ಭೇಟಿಯಲ್ಲಿರುವ, ನವ-ಉದಾರವಾದಿ 'ಆರ್ಥಿಕ ಸುಧಾರಣೆಗಳ ವೇಗವನ್ನು ಹೆಚ್ಚಿಸಲು ಬದ್ಧರಾಗಿದ್ದೇವೆ' ಎಂದು ಅಮೆರಿಕನ್ ಬಂಡವಾಳಶಾಹಿಗಳಿಗೆ ಭರವಸೆ ನೀಡಿರುವ ನಮ್ಮ ಮಾನ್ಯ ಹಣಕಾಸು ಮಂತ್ರಿಗಳು

→

ಈ ದರ ಏರಿಕೆಗಳನ್ನು ಮಾತ್ರ ಹಿಂದೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದೂ ಹೇಳಿದ್ದಾರೆ.

★

ಯುಪಿಎ ಪರಮಾಣು ವ್ಯವಹಾರಕ್ಕೆ ಕುತ್ತು

ಭಾರತ-ಅಮೆರಿಕಾ ಪರಮಾಣು ವ್ಯವಹಾರ ಯುಪಿಎ ಸರಕಾರದ, ಅದರ ಪ್ರಧಾನ ಮಂತ್ರಿಗಳ 'ಹೆಮ್ಮೆಯ' ಕೂಸು. ಆದರೆ ಈಗ ಅದಕ್ಕೆ ದೊಡ್ಡ ಕುತ್ತು ಬಂದಿದೆ. ಈ ವ್ಯವಹಾರದ ಬಗ್ಗೆ ಗಂಭೀರ ಪ್ರಶ್ನೆಗಳೆದ್ದಾಗ ಮಾನ್ಯ ಪ್ರಧಾನಿಗಳು ಮತ್ತು ಯುಪಿಎ ಸರಕಾರ 'ಪರಮಾಣು ಪೂರೈಕೆದಾರರ ಗುಂಪಿ'(ಎನ್ಎಸ್‌ಜಿ)ನಿಂದ 'ಸ್ವಚ್ಛ ವಿನಾಯ್ತಿ' ದೊರೆತಿದೆ, ಇದರಿಂದಾಗಿ ಇಎನ್ಆರ್ ಅಂದರೆ 'ಇಂಧನ ಸಮೃದ್ಧಿ ಮತ್ತು ಮರುಸಂಸ್ಕರಣ' ತಂತ್ರಜ್ಞಾನವೂ ಸೇರಿದಂತೆ ಎಲ್ಲ ತಂತ್ರಜ್ಞಾನಗಳ ವರ್ಗಾವಣೆಗೆ ಅವಕಾಶ ಇರುವ 'ಪೂರ್ಣ ಪರಮಾಣು ಇಂಧನ ಆವರ್ತ'ಕ್ಕೆ ಅಮೆರಿಕಾದ ಸಹಕಾರ ಇರುತ್ತದೆ ಎಂದು ಸಂಸತ್ತಿಗೆ, ದೇಶಕ್ಕೆ ಭರವಸೆ ನೀಡಿದ್ದರು.

ಆದರೆ ಈಗ ಅದೇ ಎನ್ಎಸ್‌ಜಿ ಈ ಇಎನ್ಆರ್ ತಂತ್ರಜ್ಞಾನ ವರ್ಗಾವಣೆಗೆ ಬಹಳ ಕಠಿಣ ಶರತ್ತಿಗಳಿರುವ ಹೊಸ ವಿಧಿ-ವಿಧಾನಗಳನ್ನು ಅಂಗೀಕರಿಸಲು ನಿರ್ಧರಿಸಿದೆ. ಅಣುಪ್ರಸರಣ ನಿಷೇಧ ಸಂಧಿ(ಎನ್‌ಪಿಟಿ)ಗೆ ಸಹಿ ಹಾಕದ ಯಾವುದೇ ದೇಶಕ್ಕೆ ಈ ತಂತ್ರಜ್ಞಾನವನ್ನು ಕೊಡಲೇ ಬಾರದು ಎಂದು ಇವು ವಿಧಿಸುತ್ತವೆ: ಇದರಿಂದಾಗಿ ಯುಪಿಎ ಸರಕಾರ ಹೇಳುತ್ತಿದ್ದ 'ಸ್ವಚ್ಛ ವಿನಾಯ್ತಿ' ಅರ್ಥಹೀನವಾಗಿದೆ. ಏಕೆಂದರೆ ಎನ್‌ಪಿಟಿ ತಾರತಮ್ಯದಿಂದ ಕೂಡಿದ ಸಂಧಿ, ಅದಕ್ಕೆ ಸಹಿ ಹಾಕಲು ಸಾಧ್ಯವಿಲ್ಲ ಎಂಬುದು ಭಾರತದ ದೀರ್ಘ ಕಾಲದ ನಿಲುವು.

ಭಾರತಕ್ಕೆ ತಾನು ಎನ್ಎಸ್‌ಜಿಯಿಂದ ಕೊಡಿಸಿದ 'ಸ್ವಚ್ಛ ವಿನಾಯ್ತಿ'ಯನ್ನು ದುರ್ಬಲಗೊಳಿಸುವುದಿಲ್ಲ ಎಂದು ಅಮೆರಿಕಾ ಭರವಸೆ ನೀಡಿರುವುದಾಗಿ ಯುಪಿಎ-2 ಸರಕಾರ ಸಮಾಧಾನ ಪಟ್ಟುಕೊಳ್ಳುತ್ತಿದೆ. ಆದರೆ ಇದಕ್ಕೆ ಅರ್ಥವಿಲ್ಲ. ಏಕೆಂದರೆ ಸೂಕ್ಷ್ಮ ತಂತ್ರಜ್ಞಾನವನ್ನು ಕೊಡುವ ಭರವಸೆಯೇನೂ ಭಾರತ-ಅಮೆರಿಕಾ ಪರಮಾಣು ವ್ಯವಹಾರದಲ್ಲಿ ಅಲ್ಲ. ಅಲ್ಲದೆ ಎನ್ಎಸ್‌ಜಿ ಈ ಹೊಸ ವಿಧಿ-ವಿಧಾನಗಳನ್ನು ಅಂಗೀಕರಿಸುವಂತೆ ಮುತುವರ್ಜಿ ವಹಿಸಿರುವುದು ಕೂಡ ಸ್ವತಃ ಅಮೆರಿಕಾವೇ. ಈ ಹೊಸ ವಿಧಿ-ವಿಧಾನಗಳು ಎನ್ಎಸ್‌ಜಿ ಭಾರತಕ್ಕೆ ನೀಡಿರುವ ವಿನಾಯ್ತಿಗೆ ಬಗೆದಿರುವ ವಿಶ್ವಾಸಾಘಾತ, ಭಾರತ-ಅಮೆರಿಕಾ ಪರಮಾಣು ಒಪ್ಪಂದ ಭಾವನೆಗೆ ವಿರುದ್ಧವಾದದ್ದು ಎಂದು ಅಣುಶಕ್ತಿ ಆಯೋಗದ ಮಾಜಿ ಅಧ್ಯಕ್ಷ ಡಾ. ಅನಿಲ್ ಕಾಕೋಡ್ಕರ್ ಕೂಡ ಹೇಳಿದ್ದಾರೆ.

★

ಕೆಜಿ ಹಗರಣ: ಪ್ರಧಾನಿಗಳನ್ನು ಭೇಟಿ ಮಾಡಿದ ಅಂಬಾನಿ

ಭ್ರಷ್ಟಾಚಾರದ ಬಗ್ಗೆ ಅಪಪ್ರಚಾರ ಜಾಸ್ತಿಯಾಯಿತು, ಅದು ಉದ್ದಿಮೆಗಳಿಗೆ ಒಳ್ಳೆಯದಲ್ಲ ಎಂದು ಪ್ರಧಾನಿಗಳು ಪತ್ರಿಕಾ ಸಂಪಾದಕರಿಗೆ ಹೇಳುವ ಐದು ದಿನಗಳ ಮೊದಲು ದೇಶದ ಅತ್ಯಂತ ಶ್ರೀಮಂತ ಉದ್ಯಮಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ ಸುದ್ದಿ ಬಂದಿತ್ತು. ಕೆಜಿ ಅನಿಲ ಉತ್ಪಾದನೆಯಲ್ಲಿ ಮುಕೇಶ್ ಅಂಬಾನಿಯ ರಿಲಯನ್ಸ್(ಆರ್‌ಐಎಲ್) ಕಂಪನಿಗೆ ತೈಲ ಸಚಿವಾಲಯ ಮತ್ತು ಅದರ ತಾಂತ್ರಿಕ ವಿಭಾಗ(ಡಿಜಿಹೆಚ್) ವಿಶೇಷ ಒಲವು ತೋರಿಸಿವೆ ಎಂದು ಸೂಚಿಸುವ ಸಿಎಜಿ ವರದಿಯ ನಂತರ ನಡೆದ ಭೇಟಿಯಿದು. ಅವರಿಬ್ಬರು ಏನು ಚರ್ಚಿಸಿದರು ಎಂದು ಸರಕಾರವಾಗಲೀ, ರಿಲಯನ್ಸ್ ಕಂಪನಿಯಾಗಲೀ ತಿಳಿಸಿಲ್ಲ. ಈಗ ವರದಿಯಾಗಿರುವ ಸಿಎಜಿ ಕರಡಿನ ಅಂಶಗಳು ಕಾನೂನು. ಮತ್ತು ಗುತ್ತಿಗೆಯ ಅಂಶಗಳಿಗೆ ತದ್ವಿರುದ್ಧವಾಗಿದ್ದು ತಮ್ಮ ಪ್ರತಿಷ್ಠೆಗೆ ಕುಂದು ತಂದಿವೆ, ಅದರ ಒಂದು ಪ್ರತಿ ತಮಗೆ ಬೇಕು ಎಂದು ರಿಲಯನ್ಸ್ ಕಂಪನಿ ತೈಲ ಸಚಿವಾಲಯಕ್ಕೆ ಬರೆದಿದ್ದು ಆ ಕಂಪನಿಗೆ ಸಂಬಂಧಪಟ್ಟ ಅಂಶಗಳನ್ನು ಒದಗಿಸಲಾಗಿದೆಯಂತೆ.

ಸಿಎಜಿ ಕರಡಿನ ಸುದ್ದಿ ಮಾಧ್ಯಮಗಳಲ್ಲಿ ಜೂನ್ 13ರಂದು ಪ್ರಕಟವಾದ ನಂತರ ಆರ್‌ಐಎಲ್‌ನ ಶೇರುಗಳ ಬೆಲೆಗಳಲ್ಲಿ 8% ಇಳಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಮುಕೇಶ್ ಅಂಬಾನಿ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿರಬಹುದು ಎಂದು ಹೇಳಲಾಗಿದೆ. ಆದರೆ ಕರಡು ತಯಾರಿಸುವ ಮೊದಲು ಆರ್‌ಐಎಲ್ ಮತ್ತು ಇನ್ನೊಂದು ಕಂಪನಿಯ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಲಾಗಿದೆ ಎಂದು ಸಿಎಜಿ ವಕ್ತಾರರು ತಿಳಿಸಿದ್ದಾರೆ.

ಸ್ವಿಸ್ ಖಾತೆಗಳ ಮಾಹಿತಿ ಇನ್ನು ಕಷ್ಟವಿಲ್ಲ

ಭಾರತದ ಶ್ರೀಮಂತ ಮಂದಿಯ ಕಪ್ಪು ಹಣಕ್ಕೆ ಆಶ್ರಯ ನೀಡಿರುವ ಸ್ವಿಸ್ ಬ್ಯಾಂಕುಗಳಿಂದ ಮಾಹಿತಿ ಪಡೆಯುವುದು ಕಷ್ಟದ ಕೆಲಸ ಎಂದು ಇನ್ನು ಮುಂದೆ ನಮ್ಮ ಕೇಂದ್ರ ಸರಕಾರ ನೆಪವೊಡ್ಡುವಂತಿಲ್ಲ. ಸ್ವಿಸ್ ಪಾರ್ಲಿಮೆಂಟು ಬೇರೆ ದೇಶಗಳೊಂದಿಗೆ ತೆರಿಗೆ ಸಂಧಿಗಳಿಗೆ ಸೂಚಿಸಿರುವ ತಿದ್ದು ಪಡಿಗಳಿಗೆ ಮಂಜೂರಾತಿ ನೀಡಿದೆ. ಇದರಿಂದಾಗಿ ಆ ದೇಶಗಳ ನಾಗರಿಕರು ಸ್ವಿಝರ್ಲೆಂಡಿನ ಖಾಸಗಿ ಬ್ಯಾಂಕುಗಳಲ್ಲಿ ಇಟ್ಟಿರುವ ಕಾನೂನುಬಾಹಿರ ಹಣದ ಬಗ್ಗೆ ಮಾಹಿತಿ ಪಡೆಯುವುದು ಸುಲಭವಾಗುತ್ತದೆ. ಈ ರೀತಿ ಅದು ತೆರಿಗೆ ಸಂಧಿಯಲ್ಲಿ ತಿದ್ದುಪಡಿ ಮಾಡಿಕೊಂಡಿರುವ ದೇಶಗಳಲ್ಲಿ ಭಾರತವೂ ಸೇರಿದೆ.

ವಿದೇಶಿ ಬ್ಯಾಂಕುಗಳಲ್ಲಿನ ಕಪ್ಪು ಹಣವನ್ನು ತರಬೇಕು ಎಂದು ಭಾರತದಲ್ಲಿ ಸುಪ್ರಿಂ ಕೋರ್ಟ್ ಸೇರಿದಂತೆ ಎಲ್ಲೆಡೆ ಒತ್ತಡಗಳು ಬಂದಾಗ ಕಳೆದ ವರ್ಷ ಆಗಸ್ಟ್ 30ರಂದು ಭಾರತದ ಹಣಕಾಸು ಮಂತ್ರಿಗಳು ಸ್ವಿಝರ್ಲೆಂಡಿನ ಫೆಡರಲ್ ಕೌನ್ಸಿಲರ್ ಜತೆ ಡಬಲ್ ಟ್ಯಾಕ್ಸೇಶನ್ ಒಪ್ಪಂದಕ್ಕೆ ತಿದ್ದುಪಡಿ ತರುವ ಬಗ್ಗೆ ದಸ್ತಾವೇಜಿಗೆ ಸಹಿ ಮಾಡಿದರು. ಈಗ ಸ್ವಿಸ್ ಸಂಸತ್ತಿನ ಮಂಜೂರಾತಿಯೊಂದಿಗೆ ಭಾರತದ ಯಾವುದೇ ಖಾತೇದಾರನ ಹೆಸರು ಮತ್ತು ಇತರ ಮಾಹಿತಿಗಳನ್ನು, ಇದಕ್ಕೆ ಅಗತ್ಯವಾದ ಕಾನೂನು ನೆರವನ್ನೂ ಕೂಡ ಪಡೆಯಬಹುದು.

ಇದಕ್ಕೆ ಮೊದಲು ಯುಪಿಎ-2 ಹಣಕಾಸು ಮಂತ್ರಿಗಳು ಕೂಡ ವಿದೇಶಗಳಲ್ಲಿ ಭಾರತದ ಶ್ರೀಮಂತರು ಪೇರಿಸಿಟ್ಟಿರುವ ಕಪ್ಪು ಹಣವನ್ನು ವಶಪಡಿಸಿಕೊಳ್ಳಲು ಸಾಧ್ಯವಾಗುವಂತಹ ಒಂದು ಮಸೂದೆಯನ್ನು ಸಂಸತ್ತಿನ ಮಳೆಗಾಲದ ಅಧಿವೇಶನದಲ್ಲಿ ಮಂಡಿಸುವುದಾಗಿ ಒಂದು ಅಂತರ್‍ರಾಷ್ಟ್ರೀಯ ಸಮ್ಮೇಳನದಲ್ಲಿ ಹೇಳಿದ್ದಾರೆ.


★

ಬಯೊಮೆಟ್ರಿಕ್ ನೋಂದಾವಣೆಯಲ್ಲಿ ಆತುರವೇಕೆ?

ಕೇಂದ್ರ ಸರಕಾರದ ನಾಗರಿಕ ನೋಂದಾವಣೆ / ಜನಗಣತಿ ಕಾರ್ಯಾಚರಣೆಗಳ ನಿರ್ದೇಶನಾಲಯ ಎಲ್ಲ ನಾಗರಿಕರ ಬಯೊಮೆಟ್ರಿಕ್ ಅಂದರೆ ಜೀವಸಂಖ್ಯಾಶಾಸ್ತ್ರೀಯ ನೋಂದಾವಣೆಯನ್ನು ಆರಂಭಿಸಿದೆ ಎಂದು ವರದಿಯಾಗಿದೆ. ನಾಗರಿಕರ ಹಸ್ತ ಬೆರಳುಗುರುತುಗಳು, ಕಣ್ಣರೆಪ್ಪೆಗಳ ಗುರುತುಗಳು ಇತ್ಯಾದಿ ಮಾನವ ಅಂಗಾಂಗಗಳ ಗುರುತುಗಳಿಗೆ ಬಯೊಮೆಟ್ರಿಕ್ ಅಂದರೆ ಜೀವಸಂಖ್ಯಾಶಾಸ್ತ್ರೀಯ ನೋಂದಾವಣೆ ಎನ್ನುತ್ತಾರೆ. ಆದರೆ ಸದ್ಯಕ್ಕೆ ಕಾನೂನಿನಲ್ಲಿ ಇದಕ್ಕೆ ಅವಕಾಶವಿಲ್ಲ. ನಾಗರಿಕತ್ವ ಕಾನೂನು, 1955 ಮತ್ತು ನಾಗರಿಕತ್ವ ನಿಯಮಗಳು 2003 ಎಲ್ಲ ನಾಗರಿಕರ ಕಡ್ಡಾಯ ನೋಂದಾವಣೆಯ ಅಂಶವನ್ನು ಹೊಂದಿದೆ, ಆದರೆ ಬಯೊಮೆಟ್ರಿಕ್ ನೋಂದಾವಣೆಯ ಬಗ್ಗೆ ಅದರಲ್ಲಿ ಏನೂ ಇಲ್ಲ.

ಈ ಬಗ್ಗೆ ಹಲವು ಪ್ರಶ್ನೆಗಳಿದ್ದು ಅವುಗಳ ಇತ್ಯರ್ಥವಾಗದೆ ಇಂತಹ ನೋಂದಾವಣೆ ಸರಿಯಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ. ಈ ಮಾಹಿತಿಗಳ ದುರ್ಬಳಕೆಯ ತಡೆಗೆ ಕ್ರಮಗಳಿರಬೇಕು. ಇವನ್ನು ಪಡಿತರ ವ್ಯವಸ್ಥೆ ಅಥವ ರೇಗಾದಂತಹ ಸಾಮಾಜಿಕ ಸೌಲಭ್ಯಗಳ ನೀಡಿಕೆಗೆ ತಳಕು ಹಾಕಬಾರದು ಎಂಬುದು ಪ್ರಜಾಪ್ರಭುತ್ವವಾದಿಗಳ ಬೇಡಿಕೆ. ಈ ಅಂಶಗಳಿರುವ ರಾಷ್ಟ್ರೀಯ ಗುರುತು ಪ್ರಾಧಿಕಾರ(ಎನ್‌ಐಎ) ಕುರಿತಾದ ಮಸೂದೆಯೊಂದು ಈಗ ಸಂಸತ್ತಿನ ಸ್ಥಾಯೀ ಸಮಿತಿಯ ಮುಂದಿದೆ. ಹೀಗಿರುವಾಗ ಸಂಸತ್ತಿನ ಅನುಮೋದನೆಯಾಗಲೀ, ಕಾನೂನಿನ ಅನುಮೋದನೆಯಾಗಲೀ ಇರದ ಇಂತಹ ನೋದಾವಣೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಭ್ರಷ್ಟಾಚಾರದ ತಡೆಯ ಬಗ್ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಚಾಟಿಯೇಟುಗಳ ನಂತರವೇ ಕ್ರಿಯೆಗಿಳಿಯುವ, ಶ್ರೀಮಂತರಿಗೆ ಸೌಲಭ್ಯಗಳನ್ನು ಒದಗಿಸಲು ತುದಿಗಾಲ ಮೇಲೆ ನಿಂತಿರುವ ಯುಪಿಎ-2 ಸರಕಾರಕ್ಕೆ ಬಯೊಮೆಟ್ರಿಕ್ ನೋದಾವಣೆಯ ಬಗ್ಗೆ, ಗುರುತು ಪತ್ರಗಳ ಬಗ್ಗೆ ಇಷ್ಟೊಂದು ಕಾಳಜಿಯೇಕೆ? ನಾಗರಿಕ ಸೌಲಭ್ಯಗಳ ಪೂರೈಕೆಯನ್ನು ಸುಗಮಗೊಳಿಸಲಿಕ್ಕೋ ಅಥವ ನವ-ಉದಾರವಾದಿ ತತ್ವಗಳಿಗೆ ಅನುಗುಣವಾಗಿ ಅವನ್ನು ಸೀಮಿತಗೊಳಿಸುವುದನ್ನು ಸುಗಮಗೊಳಿಸಲಿಕ್ಕೋ ಎಂಬ ಆತಂಕ ಪ್ರಜಾಪ್ರಭುತ್ವವಾದಿಗಳ ವಿರೋಧಕ್ಕೆ ಕಾರಣ.



ಕೃಪೆ: ದಿ ಹಿಂದೂ

ಜಗದಗಲ

ಶರತ್‌ಚಂದ್ರ

ತುರ್ಕಿ: ಎಕೆಪಿ ಪಕ್ಷಕ್ಕೆ ಮೂರನೇ ಬಾರಿ ಜಯ

ತುರ್ಕಿಯಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಎಕೆಪಿ ಬಹುಮತ ಗಳಿಸಿ ಸತತ ಮೂರನೇ ಬಾರಿ ಅಧಿಕಾರಕ್ಕೆ ಬಂದಿದೆ. ಎಕೆಪಿ (ನ್ಯಾಯ ಮತ್ತು ವಿಕಾಸ ಪಾರ್ಟಿ) ತುರ್ಕಿಯ ಮಂದಗಾಮಿ ಇಸ್ಲಾಮಿಕ್ ಪಕ್ಷವಾಗಿದ್ದು 2002 ರಲ್ಲಿ ಮೊದಲ ಬಾರಿಗೆ ಅಧಿಕಾರಕ್ಕೆ ಬಂದಿತ್ತು. 14 ಸೀಟು ಕಳೆದುಕೊಂಡರೂ ಶೇ.3 ಹೆಚ್ಚು ಮತ ಗಳಿಸಿ, ಶೇ. 50 ಮತ ಗಳಿಸುವ ಮತ್ತು ಮೂರನೇ ಬಾರಿಗೆ ಅಧಿಕಾರ ಬರುವ ಮೂಲಕ ಎಕೆಪಿ ತುರ್ಕಿಯಲ್ಲಿ ವಿಕ್ರಮವನ್ನೇ ಸ್ಥಾಪಿಸಿದೆ. ಹಲವು ದಶಕಗಳ ಕಾಲ ಹಲವು ಬಾರಿ ಮಿಲಿಟರಿ ಕ್ಷಿಪ್ರಕ್ರಾಂತಿಗಳನ್ನು ಕಂಡಿದ್ದ, ಅಸ್ಥಿರ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿದ್ದ ತುರ್ಕಿಯಲ್ಲಿ ಇದು ಗಮನಾರ್ಹ ಹೊಸ ಬೆಳವಣಿಗೆ. ಎಕೆಪಿ 550 ಸೀಟುಗಳಲ್ಲಿ 327 ಸೀಟು ಪಡೆದಿದೆ. ಆದರೆ ಸಂವಿಧಾನ ಬದಲಾಯಿಸಲು ಬೇಕಾದ 367 ಸೀಟು ಪಡೆದಿಲ್ಲ. ಪ್ರಮುಖ ವಿರೋಧ ಪಕ್ಷ ಪೀಪಲ್ಸ್ ರಿಪಬ್ಲಿಕನ್ ಪಾರ್ಟಿ (ಸಿ.ಎಚ್.ಪಿ.) ಶೇ. 5 ಹೆಚ್ಚಿನ ಮತ ಮತ್ತು 23 ಹೆಚ್ಚಿನ ಸೀಟು ಗಳಿಸಿ ಎರಡನೇ ಸ್ಥಾನದಲ್ಲಿದೆ. ಅದು ಶೇ.26 ಮತ ಮತ್ತು 135 ಸೀಟು ಗಳಿಸಿದೆ. ನೇಶನಲ್ ಮೂವ್ ಮೆಂಟ್ ಪಾರ್ಟಿ 53 ಸೀಟು ಗಳಿಸಿ ಮೂರನೇ ಸ್ಥಾನದಲ್ಲಿದೆ. ತುರ್ಕಿಯ ಪ್ರಮುಖ ಜನಾಂಗೀಯ ಅಲ್ಪಸಂಖ್ಯಾತರಾದ ಕುರ್ದಿಶರ ಪಕ್ಷ 36 ಸೀಟು ಗಳಿಸಿದೆ.

ಎಕೆಪಿ ತುರ್ಕಿಯ 1982 ಮಿಲಿಟರಿ ಸರ್ಕಾರ ರಚಿಸಿದ್ದ ಸಂವಿಧಾನದಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡುವುದಾಗಿ ಚುನಾವಣಾ ಘೋಷಣೆಯಲ್ಲಿ ಹೇಳಿತ್ತು. ಕಟ್ಟುನಿಟ್ಟಿನ ಜಾತ್ಯತೀತ (ಸರ್ಕಾರ ಮತ್ತು ಶಿಕ್ಷಣದಿಂದ ಧರ್ಮವನ್ನು ಪ್ರತ್ಯೇಕಿಸುವ, ಉದಾ: ಬುರ್ಖಾದಂತಹ ಇಸ್ಲಾಮಿಕ್ ಉಡುಗೆ ಮೇಲೆ ನಿಷೇಧ) ಅಂಶಗಳನ್ನು ಸಡಿಲಗೊಳಿಸುವುದು, ಮಿಲಿಟರಿ ಮತ್ತು ನ್ಯಾಯಾಂಗದ ಕೆಲವು ವಿಶೇಷ ಅಧಿಕಾರಗಳನ್ನು ಮೊಟಕುಗೊಳಿಸುವುದು ಇದರಲ್ಲಿ ಸೇರಿದೆ. ಜಾತ್ಯತೀತ ಅಂಶಗಳು ಕೆಮಾಲ್ ಅತಾತುರ್ಕ್ ರೂಪಿಸಿದ ಸಂವಿಧಾನದ ಮೂಲ ಅಂಶಗಳು. ಆದರೆ ಇತರ ಅಂಶಗಳು ಮಧ್ಯೆ ಬಂದ ಹಲವು ಮಿಲಿಟರಿ ಸರ್ಕಾರಗಳು ರೂಪಿಸಿದವು. ಶಾಸಕಾಂಗಕ್ಕಿಂತ ಮಿಲಿಟರಿ ಮತ್ತು ನ್ಯಾಯಾಂಗಕ್ಕೆ ಹೆಚ್ಚಿನ ಮತ್ತು ವಿಶೇಷ ಅಧಿಕಾರ-ಸವಲತ್ತು ಕೊಡುವ ಅಂಶಗಳು. ಇವುಗಳ ಬಗ್ಗೆ ಈಗಿನ ಪಾರ್ಲಿಮೆಂಟಿನಲ್ಲೂ ವಿರೋಧ ಪಕ್ಷಗಳ ಸಹಕಾರ ಇಲ್ಲದೆ ಎಕೆಪಿ ಏನೂ ಮಾಡುವಂತಿಲ್ಲ.

ಎಕೆಪಿಯ ಮರುಆಯ್ಕೆಯನ್ನು ಹಲವು ರೀತಿಯಲ್ಲಿ ವಿಶ್ಲೇಷಿಸಲಾಗುತ್ತಿದೆ. ಜಾತ್ಯತೀತ ಶಕ್ತಿಗಳಿಗೆ ಸೋಲು, ಇಸ್ಲಾಮಿಕ್ ಶಕ್ತಿಗಳಿಗೆ ಜಯ ಇಂತಹ ಒಂದು ವಿಶ್ಲೇಷಣೆ. ಜನಪ್ರಿಯ ಇಸ್ಲಾಮಿಕ್ ಧಾರ್ಮಿಕ ರಾಜಕಾರಣ, ಆರ್ಥಿಕ ಆಧುನಿಕೀಕರಣ, ಪ್ರಜಾಪ್ರಭುತ್ವಕ್ಕೆ ನಿಷ್ಠೆಯ ಹೊಸ



ಮಿಶ್ರಣವನ್ನು ಎಕೆಪಿ ಸ್ಥಾಪಿಸಿದೆ ಎಂಬುದು ಇನ್ನೊಂದು ವಿಶ್ಲೇಷಣೆ. ಇದನ್ನು ಇಡೀ ಪಶ್ಚಿಮ ಏಶ್ಯಾದ ಮುಸ್ಲಿಂ ಬಹುಸಂಖ್ಯಾತ ದೇಶಗಳಿಗೆ ಸಾಮಾನ್ಯೀಕರಿಸುವ ಪ್ರತಿಕ್ರಿಯೆಗಳೂ ಬಂದಿವೆ. ತುರ್ಕಿಯ ರಾಜಕಾರಣ ಮತ್ತು ಅಲ್ಲಿನ "ಮಂದಗಾಮಿ" ಇಸ್ಲಾಮಿಕ್ ರಾಜಕೀಯದ ವಿಕಾಸದ ನಿರ್ದಿಷ್ಟ ಅಂಶಗಳ ಬೆಳಕಿನಲ್ಲಿ ನೋಡಿದರೆ ಇವು ಈ ಬೆಳವಣಿಗೆಯ ಎಲ್ಲಾ ಸಂಕೀರ್ಣತೆಗಳನ್ನು ಹಿಡಿಯುವುದಿಲ್ಲ ಎಂದಂತೂ ಹೇಳಬಹುದು.

ಎರಡನೇ ಮಹಾಯುದ್ಧದ ನಂತರ ತುರ್ಕಿಯ ರಾಜಕಾರಣದಲ್ಲಿ ಮಿಲಿಟರಿಯ ಪಾತ್ರ ಹೆಚ್ಚುತ್ತಾ ನಡೆದಿತ್ತು. ಇದು ತುರ್ಕಿಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಾ, ಆಳುವ ವರ್ಗಗಳನ್ನು ಬಲಗೊಳಿಸುತ್ತಾ ಬಂದಿತ್ತು. ಕ್ರಮೇಣ ಅಮೆರಿಕನ್ ಸಾಮ್ರಾಜ್ಯಶಾಹಿ ಜತೆ ಪ್ರಬಲವಾಗಿ ಗುರುತಿಸಿಕೊಂಡ ಆಳುವ ವರ್ಗ ಜನತೆಯ ಆರ್ಥಿಕ-ರಾಜಕೀಯ ಆಕಾಂಕ್ಷೆಗಳನ್ನು ದಮನಿಸುತ್ತಾ ಹೋಯಿತು. ಈ ದಮನದ ವಿರುದ್ಧ, ಬಡವಾಗುತ್ತಾ ನಡೆದ ಬಹುಸಂಖ್ಯಾತ ಜನತೆಯ ಆಕ್ರೋಶದ ಅಭಿವ್ಯಕ್ತಿಗೆ ಪ್ರಜಾಪ್ರಭುತ್ವ ದಾರಿಗಳು ಕಿರಿದಾಗುತ್ತಾ ಹೋಯಿತು. ಕಮ್ಯುನಿಸ್ಟ್ ಪಕ್ಷ ಸೇರಿದಂತೆ ಜಾತ್ಯತೀತ ಜನಪರ ಶಕ್ತಿಗಳು ತೀವ್ರ ದಮನಕ್ಕೊಳಗಾದವು. ಇಸ್ಲಾಮಿಕ್ ರಾಜಕಾರಣ ಈ ಹಿನ್ನೆಲೆಯಲ್ಲಿ ಹುಟ್ಟಿ ಬಲಗೊಳ್ಳುತ್ತಾ ಹೋಯಿತು. ಇದರಿಂದ ಬೆದರಿದ ಆಳುವ ವರ್ಗ ತುರ್ಕಿಯ ಜನತೆ ಗೌರವಿಸುವ ಜಾತ್ಯತೀತತೆಯನ್ನು ಇಸ್ಲಾಮಿಕ್ ಪಕ್ಷ ನಾಶ ಮಾಡುತ್ತದೆ. ಆದ್ದರಿಂದ ಅದರ ಮೇಲೆ ಹಲವು ನಿರ್ಬಂಧಗಳನ್ನು ಹೇರಬೇಕು ಎಂಬ ಅಸ್ತ್ರ ಬಳಸಲು ಆರಂಭಿಸಿತು.

ಕ್ರಮೇಣ ಪ್ರಜಾಪ್ರಭುತ್ವ-ವಿರೋಧಿ ಸರ್ವಾಧಿಕಾರ-ಪರ ಆಳುವ ವರ್ಗಗಳ ಜತೆ "ಜಾತ್ಯತೀತತೆಯ ರಕ್ಷಣೆ" ತಳಕು ಹಾಕಿಕೊಂಡಿತು. ಬದಲಾಗಿ ಜನಮಾನಸದಲ್ಲಿ ಇಸ್ಲಾಮಿಕ್ ರಾಜಕಾರಣ ಜನಪರ ಪ್ರಜಾಪ್ರಭುತ್ವ-ಪರ ಆಯಿತು. ಸಾಮ್ರಾಜ್ಯಶಾಹಿ-ಪರ ಮತ್ತು ಪಶ್ಚಿಮ ಏಶ್ಯಾದ ಮುಸ್ಲಿಂ ದೇಶಗಳ ವಿರುದ್ಧ ವಿದೇಶ ನೀತಿ, ಯುರೋಪಿಯನ್ ಒಕ್ಕೂಟಕ್ಕೆ ಸೇರುವ ತುರ್ಕಿ ಆಳುವ ವರ್ಗಗಳ ಗೀಳು, ತುರ್ಕಿಯ ಜಾತ್ಯತೀತತೆ "ಸಾಲದಾದ್ದರಿಂದ ಇದು ಸಾಧ್ಯವಾಗುತ್ತಿಲ್ಲ" ಎಂಬ ಅವರ ಪ್ರಚಾರ, ತುರ್ಕಿ ಬಗ್ಗೆ ಯುರೋಪಿಯನ್ ಒಕ್ಕೂಟದ ಪೂರ್ವಗ್ರಹ, "ಮುಸ್ಲಿಮರೆಲ್ಲ ಭಯೋತ್ಪಾದಕರು" ಮತ್ತು "ಕ್ರಿಶ್ಚಿಯನ್-ಇಸ್ಲಾಂ ನಾಗರಿಕತೆಗಳ ನಡುವೆ ಸಂಘರ್ಷ" ಎಂಬ ಬುಶ್ ವಾಣಿ – ಈ ಸಮೀಕರಣವನ್ನು ಇನ್ನಷ್ಟು ಗಟ್ಟಿ ಮಾಡಿತು. ಎಕೆಪಿಯ ಇಸ್ಲಾಮಿಕ್ ರಾಜಕಾರಣ ಜಾಣ್ಮೆಯಿಂದ ಇದನ್ನು ಬಳಸಿ ರಾಜಕೀಯ ನೆಲೆ ಗಟ್ಟಿಗೊಳಿಸಿತು. ಎಕೆಪಿ ಅಧಿಕಾರಕ್ಕೆ ಬಂದಾಗಿನಿಂದ ತುರ್ಕಿ ಅಮೆರಿಕ-ಯುರೋಪ್ ಜತೆ ಹೊಂದಿದ್ದ ಆರ್ಥಿಕ ಸಂಬಂಧ ಬಳಸಿ ಆರ್ಥಿಕ ಆಧುನಿಕೀರಣ, ಜನಸಾಮಾನ್ಯರ ಆರ್ಥಿಕ ಸ್ಥಿತಿ ಸುಧಾರಣೆ, ಪ್ಯಾಲೆಸ್ಟೈನ್ ಜನತೆ ಮತ್ತು ಪಶ್ಚಿಮ ಏಶ್ಯಾದ ಮುಸ್ಲಿಂ ದೇಶಗಳ ಜತೆ ಗುರುತಿಸಿಕೊಳ್ಳುವ ಸಾಮ್ರಾಜ್ಯಶಾಹಿ-ವಿರೋಧಿ ವಿದೇಶ ನೀತಿ, ಹಲವು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸುವ ಸುಧಾರಣೆಗಳು – ಎಕೆಪಿ ಮೇಲೆ ತುರ್ಕಿ ಜನತೆಯ ವಿಶ್ವಾಸ ಹೆಚ್ಚಿಸಿವೆ.

ತುರ್ಕಿಯ ಚುನಾವಣಾ ಫಲಿತಾಂಶವನ್ನು ಪಶ್ಚಿಮ ಏಶ್ಯಾದ ಮುಸ್ಲಿಂ ದೇಶಗಳಲ್ಲಿ ತಮ್ಮ ಆಳುವ ವರ್ಗಗಳನ್ನು ಧಿಕ್ಕರಿಸಿ, ಪ್ರಜಾಪ್ರಭುತ್ವ-ಪರ ಸಾಮ್ರಾಜ್ಯಶಾಹಿ-ವಿರೋಧಿ ಆಕಾಂಕ್ಷೆಗಳನ್ನು ಎತ್ತಿ ಹಿಡಿಯುವ ಜನತೆಯ ಹಲವು ಚಳುವಳಿಗಳು-ದಂಗೆಗಳ ಹಿನ್ನೆಲೆಯಲ್ಲಿ ನೋಡಬೇಕು. ತುರ್ಕಿಯ ಚುನಾವಣಾ ಫಲಿತಾಂಶ ಪಶ್ಚಿಮ ಏಶ್ಯಾದ ಜನತೆಯಲ್ಲಿ ಹೊಸ ಆತ್ಮ ವಿಶ್ವಾಸ ಮೂಡಿಸಬಹುದು. "ಅರಬ್ ವಸಂತ" ಎಂದು ಕರೆಯಲಾಗುತ್ತಿರುವ ವ್ಯಾಪಕ ಬದಲಾವಣೆಯನ್ನು ಗಟ್ಟಿಗೊಳಿಸಬಹುದು. ಆ ನಿಟ್ಟಿನಲ್ಲಿ ಇದು ಸಕಾರಾತ್ಮಕ ಬೆಳವಣಿಗೆಯೇ ಎನ್ನಬಹುದು.

ಲಿಬ್ಯಾ-ವಿರೋಧಿ ಕೂಟ ಶಿಥಿಲ ?

ಲಿಬ್ಯಾದ ಮೇಲೆ ನಾಟೋ ಕೂಟದ ಕಳೆದ ಹಲವು ವಾರಗಳ ಬಾಂಬ್ ದಾಳಿ, ಅದರ ಘೋಷಿತ ಉದ್ದೇಶದಂತೆ ನಾಗರಿಕರ ರಕ್ಷಣೆ ಮಾಡುವ ಬದಲು ನೂರಾರು ನಾಗರಿಕರ ಕೊಲೆ ಮಾಡುತ್ತಿದೆ. ಗದ್ದಾಫಿ ಸೈನ್ಯದ ಮಿಲಿಟರಿ ದಾಳಿ ತಡೆಯುವ ಬದಲು ನಾಗರಿಕರ ಆಸ್ತಿ-ಪಾಸ್ತಿ ನಾಶ ಮಾಡುತ್ತಿದೆ. ಗದ್ದಾಫಿ ಸರ್ಕಾರದ ವಿಮಾನಗಳು ಹಾರಾಡದಂತೆ ನೋಡಿಕೊಳ್ಳುವ ಮಿಲಿಟರಿ ಕಾರ್ಯಾಚರಣೆ, ಪೂರ್ಣ ಪ್ರಮಾಣದ ಭೂ-ಯುದ್ಧದಲ್ಲೂ ತೊಡಗಿದೆ. ಹಲವು ನಾಟೋ ವಿಶೇಷ ಪಡೆಗಳು ಲಿಬ್ಯಾದ ಒಳಗೆ ಗದ್ದಾಫಿ ವಿರೋಧಿ ಗೆರಿಲ್ಲಾಗಳಿಗೆ ಶಸ್ತ್ರಾಸ್ತ್ರ ಒದಗಿಸಿ ತರಬೇತಿ ನೀಡುವುದು ಮಾತ್ರವಲ್ಲ, ಅವರ ಜತೆ ಸಕ್ರಿಯವಾಗಿ ಯುದ್ಧದಲ್ಲೂ ತೊಡಗಿವೆ.

ಗದ್ದಾಫಿಗೆ ಯಾವುದೇ ಜನಬೆಂಬಲ ಇಲ್ಲ. ಗೆರಿಲ್ಲಾಗಳಿಗೆ ಪೂರ್ಣ ಜನಬೆಂಬಲ ಇದೆ – ಎಂಬ ನಾಟೋ ಪ್ರಚಾರ ಬೊಗಳೆ ಎಂದು ಸಿದ್ಧವಾಗಿದೆ. ನಾಟೋ ಕಾರ್ಯಾಚರಣೆ ಆರಂಭವಾಗುತ್ತಿದ್ದಂತೆ ಗದ್ದಾಫಿ ಓಡಿ ಹೋಗಿ ಸರ್ಕಾರ ಕುಸಿಯುತ್ತದೆ ಎಂಬ ಅವರ ಕನಸು ಹುಸಿಯಾಗಿದೆ. ನಾಟೋ ದಾಳಿಗಳಿಂದ ನಾಗರಿಕ ಸಾವು-ನೋವು ಹೆಚ್ಚಾಗುತ್ತಿದ್ದಂತೆ, ಇರಾಕ್-ಅಫ್ಘಾನಿಸ್ತಾನಗಳಂತೆ ದೀರ್ಘ ಕಾಲದ ಎಂದೂ ಮುಗಿಯದ ಯುದ್ಧ ಇದಾಗಬಹುದು ಎಂಬುದು ಅರಿವು ಆಗಲಾರಂಭಿಸಿದಂತೆ – ನಾಟೋ ಕೂಟದಲ್ಲಿ ಬಿರುಕು ಕಂಡಿದೆ. ಬ್ರಿಟನ್ ಮತ್ತು ಫ್ರಾನ್ಸ್ ಭೂ-ಯುದ್ಧ ಆರಂಭಿಸಿ ಲಿಬ್ಯಾ ಸರ್ಕಾರ ಬದಲಾಯಿಸುವ ನಿಜವಾದ ಉದ್ದೇಶದತ್ತ

ಪುಟ 15 ಕ್ಕೆ

ಅಪಹರಣ, ಹತ್ಯೆಯ ಹಿಂದೆ ......

ಪುಟ 3 ರಿಂದ

ಕಾರ್ಯಗಳಿಗಾಗಿ ಆ ಇಬ್ಬರನ್ನು ಅಪಹರಿಸಿ ಪಾಲಕರ ಮುಂದೆ ಕೋಟ್ಯಾಂತರ ರೂಪಾಯಿಗಳ ಬೇಡಿಕೆ ಇಡಲಾಗಿತ್ತು. ಎಂಬುದನ್ನೆ ಅವರೇ ಒಪ್ಪಿಕೊಂಡ ಸಂಗತಿ ಪ್ರಕಟವಾಗಿದೆ. ಇದನ್ನು ಆ ಸಂಘಟನೆಯ ಮುಖ್ಯಸ್ಥರು ಅಲ್ಲಗೆಳೆದಿದ್ದು, ಅವರಿಗೂ ತಮಗೂ ಸಂಬಂಧವಿಲ್ಲ ಎಂದೇನೋ ಹೇಳಿದ್ದಾರೆ. (ಸಂಬಂಧವಿದೆಯೆಂದು ಹೇಳಿ ಅವರು ಯಾರೇ?) ಅದು ಕೈ ತೊಳದುಕೊಳ್ಳುವ ಒಂದು ಹೇಳಿಕೆ ಮಾತ್ರ.

ಆದರೆ ಕೆ.ಎಫ್.ಡಿ.ಯನ್ನು, ಅದರ ಚಟುವಟಿಕೆಗಳನ್ನು, ಅದರ ಇತಿಹಾಸದ ಹೊರ ಒಳಗಿನ ನಂಟುಗಳನ್ನು ಬಲ್ಲವರು ಆ ಸಂಘಟನೆಯ ಮುಖಂಡರ ಮಾತುಗಳನ್ನು ನಂಬಲು ಸಾಧ್ಯವಾಗುವುದಿಲ್ಲ. ಅನುಮಾನ ವಂತೂ ಉಳಿದೇ ಇರುತ್ತದೆ.

'ಸಿಮಿ' ನಿಷೇಧದ ಬಳಿಕ

ಇದು ಆರಂಭವಾದದ್ದು 2005ರಲ್ಲಿ ಇದೇ ರೀತಿ ಕೇರಳದಲ್ಲಿ ಎನ್.ಡಿ.ಎಫ್. 1998ರಲ್ಲಿ ಬಹಿರಂಗಕ್ಕೆ ಬಂದದ್ದು, ಗಮನಿಸಬೇಕಾದ ಸಂಗತಿಯೆಂದರೆ ಇವೆಲ್ಲಾ 'ಸಿಮಿ' ಸಂಘಟನೆಯನ್ನು ಕೇಂದ್ರ ಸರ್ಕಾರ ನಿಷೇಧಿಸಿದ ನಂತರವೇ ಎಂಬುದು.ಕೆ.ಎಫ್.ಡಿ. ಇದೀಗ ತನ್ನನ್ನು ವಿಲೀನಗೊಳಿಸಿಕೊಂಡಿದೆ ಎನ್ನಲಾಗುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗಳು (ಪಿಎಫ್ಐ) ಪಕ್ಕಾ ಮೂಲಭೂತವಾದೀ ಸಂಘಟನೆಗಳು. ಹಿಂದುತ್ವ ಕೋಮುವಾದಿ ದಾಳಿ-ದೌರ್ಜನ್ಯಗಳಿಂದ ಆತಂಕಿತ ರಾಗಿರುವ ಮುಸ್ಲಿಂರನ್ನು ಹಾದಿ ತಪ್ಪಿಸಲು ಅವರನ್ನು ಮೂಲಭೂತವಾದಿಗಳನ್ನಾಗಿಸಿ ಕೊನೆಗೂ ಭಯೋತ್ಪಾದನಾ ಕೃತ್ಯಗಳಲ್ಲಿ ಸೆಳೆಯುತ್ತಿರುವ ಪ್ರಕರಣಗಳು ಹಲವು ಸಂಘಟನೆಗಳಿಂದ ನಡೆಯುತ್ತಲೇ ಇವೆ. ಕರ್ನಾಟಕದ ದ.ಕನ್ನಡಜಿಲ್ಲೆಯನ್ನು ಒಳಗೊಂಡು ಕರಾವಳಿ, ಕೇರಳಗಳಲ್ಲಿ ಪಿ.ಎಫ್.ಐ. ನಡೆಸಿರುವ ಕ್ರಿಮಿನಲ್ ಕೃತ್ಯಗಳು ಜಗಜ್ಜಾಹೀರು. ಉಪನ್ಯಾಸಕನ ಕೈ ಕತ್ತರಿಸಿದ ಘಟನೆಯನ್ನು ಒಳಗೊಂಡು ಹಲವಾರು ಭಾರೀ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾಗಿರುವುದನ್ನು ಕೇರಳದಲ್ಲಿ ಈ ಹಿಂದೆ ನೋಡಿದ್ದೇವೆ. ಸಂಘ ಪರಿವಾರದ ಧಾಳಿಗಳಿಗೆ ಪ್ರತಿರೋಧ, ರಕ್ಷಣೆ ಎಂಬ ನೆಪದಲ್ಲಿ ಹುಟ್ಟಿಕೊಂಡಿರುವ ಕೆ.ಎಫ್.ಡಿ.ಯು ಹೊರಗೆ ತಾನು ಎಲ್ಲರಂತೆ ಸಾಮಾಜಿಕ ಸಂಘಟನೆ ಎಂದು ಹೇಳಿಕೊಂಡರೂ ಅದು ಒಂದು ಭೂಗತ, ಅತ್ಯಂತ ನುರಿತ, ಪರಿಣತರುಳ್ಳ ಶಿಸ್ತುಬದ್ಧ ಸಂಘಟನೆ. ಅದರ ಕೃತ್ಯಗಳು ಎಳ್ಳಷ್ಟೂ ಹೊರಬಾರದಂತೆ ಎಚ್ಚರಿಕೆ ವಹಿಸುವ ನಿಷ್ಣತೆ ಅವರಲ್ಲಿದೆ. ಹುಣಸೂರು ವಿದ್ಯಾರ್ಥಿಗಳ ಅಪಹರಣ-ಹತ್ಯೆ ಪ್ರಕರಣದಲ್ಲಿ ಬಂಧಿತರಾದವರು ಹಿಂದೆ ಕೆ.ಎಫ್.ಡಿ.ಯ ಹಲವಾರು ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು ಎಂದು ಹೇಳಲಾಗುತ್ತಿದೆ. ಇವೆಲ್ಲಾ ಇನ್ನಷ್ಟು ಆಳವಾದ ತನಿಖೆ, ವಿಶ್ಲೇಷಣೆಗಳ ನಂತರ ಪೂರ್ಣ ಸತ್ಯ ಹೊರಬರಬೇಕಿದೆ.

ಘೋರ ಸಮರ್ಥನೆಗಳು!

ವಿಚಿತ್ರವೆಂದರೆ; 'ರಂಜನೆ, ಭೋದನೆ, ಪ್ರಚೋದನೆ ಲಂಕೇಶ್ ಪತ್ರಿಕೆ ಹಾಗೂ ಅದರ ಬಳಗ ಅವು ಬಂಧಿತರು ಕೆ.ಎಫ್.ಡಿ.ಯವರು ಅಲ್ಲವೇ ಅಲ್ಲವೆಂದೂ, ಇದು ಬಿಜೆಪಿ ಸರ್ಕಾರಕ್ಕಿರುವ ಅಲ್ಪಸಂಖ್ಯಾತರ ಮೇಲಿನ ದ್ವೇಷದ ಕಾರಣದಿಂದಲೇ ಹಾಗೆ ಹೇಳುತ್ತಿದೆಯೆಂದು ಅಷ್ಟೇ 'ಘೋರ' ವಾಗಿ ವಾದಿಸುತ್ತಿರುವುದು! ಕನಿಷ್ಠ ಇಂತಹ ಪ್ರಕರಣದಲ್ಲಿ ಆಳ ತನಿಖೆಯಾಗಲಿ ಎಂದಾದರೂ ನಿಲುವು ತಳೆಯದೇ ಯದ್ವಾಬಿದ್ವಿ, ಸಮರ್ಥನೆ ನ್ಯಾಯಪಕ್ಷಪಾತಿಯಂತೂ ಅಲ್ಲವೇ ಅಲ್ಲ. ಬಿಜೆಪಿ ಸರ್ಕಾರವನ್ನೂ ತೋರಿಸಿ ಕೆ.ಎಫ್.ಡಿ.ಯಂತಹ ಮೂಲಭೂತವಾದೀ ಸಂಘಟನೆಯನ್ನು ಸಮರ್ಥಿಸಿಕೊಳ್ಳುವುದು ಅಸಹ್ಯಕರ. ಇಂತಹ ಸಮರ್ಥನೆಯಲ್ಲಿ ಆಶ್ಚರ್ಯಕರವೂ ಅಲ್ಲ, ಹೊಸತೂ ಅಲ್ಲ. ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಈ ಮಾವೋವಾದಿ ಬಳಗ ಕೆಎಫ್‌ಡಿ-ಪಿಎಫ್ಐ ಜೊತೆಗಿನ ಆಳವಾದ ನಂಟು, ಹಾದಿ ತಪ್ಪಿದ ಸೈದ್ಧಾಂತಿಕ ಸಮರ್ಥನೆ ಗೊತ್ತಿರುವಂತಹದ್ದೇ.

ಇದೇ ಹೊತ್ತಿನಲ್ಲಿ, ಇನ್ನಷ್ಟು ಆಳವಾಗಿ ಪೂರ್ವಪರ ವಿಚಾರಿಸದೇ ಅಧಿಕೃತ ಮಾಹಿತಿಗಳನ್ನು ಕಲೆ ಹಾಕದೇ ರಾಜ್ಯದ ಬಿಜೆಪಿ ಸರ್ಕಾರ ಕೆಎಫ್‌ಡಿಯನ್ನು ನಿಷೇಧಿಸಿ ಬಿಡಬೇಕೆಂದು ಹೊರಟಿದೆ. ಈ ಆತುರ ಸಂಘ ಪರಿವಾರಕ್ಕೆ ಇದ್ದೇ ಇದೆ. ಆದರೆ ಅದು ತನ್ನ ಒಡಲ ಕೂಸುಗಳಾದ ಬಜರಂಗದಳ, ವಿಶ್ವ ಹಿಂದೂ ಪರಿಷತ್, ಶ್ರೀರಾಮಸೇನೆ ಯಂತಹ 'ಹಿಂದುತ್ವ' ದ 'ಭಯೋತ್ಪಾದಕ' ರನ್ನು ಪೋಷಿಸುತ್ತಾ ಕೆಎಫ್‌ಡಿಯನ್ನು ನಿಷೇಧಿಸಲು ಹೇಳುತ್ತಿರುವುದು ವಿಪರ್ಯಾಸ.

ಅದು ಬಜರಂಗದಳವೇ ಆಗಲಿ, ಕೆಎಫ್‌ಡಿ, ಪಿಎಫ್ಐಗಳೇ ಆಗಲಿ ಅವರನ್ನು ನಿಷೇಧಿಸಿಬಿಟ್ಟರೆ ಸಮಸ್ಯೆ ಪೂರ್ಣ ಬಗೆಹರಿಯುವುದಿಲ್ಲ. ಅವುಗಳನ್ನು ಕಾನೂನು ಬಳಸಿ ಎದುರಿಸುವಾಗಲೇ, ರಾಜಕೀಯ, ಸೈದ್ಧಾಂತಿಕ ಹಾಗೂ ಸಂಘಟನಾತ್ಮಕವಾಗಿ ಎದುರಿಸಬೇಕು. ಈ 'ಹಿಂದುತ್ವ'ದ ಕೋಮುವಾದಿ ಫ್ಯಾಸಿಸ್ಟರು ಮತ್ತು ಇಸ್ಲಾಂ ಹೆಸರಿನ ಮೂಲಭೂತವಾದಿಗಳು ಒಬ್ಬರನ್ನೊಬ್ಬರು ಪೋಷಿಸುವ, ಅವರ ಬೆಳವಣಿಗೆಗೆ ಅವಲಂಬಿಸುವ, ಪರಸ್ಪರ ಪ್ರೇರಕ-ಪೂರಕ ಶಕ್ತಿಗಳು ಎಂಬುದನ್ನು ಮರೆಯಲಾಗದು. ಇದನ್ನು 'ಬಹುಸಂಖ್ಯಾತ' ಅಲ್ಪಸಂಖ್ಯಾತ ಧರ್ಮಕ್ಕೆ ಸೇರಿದ ಎಲ್ಲಾ ನಾಗರೀಕರು ಗಂಭೀರವಾಗಿ ಪರಿಗಣಿಸಬೇಕು. ಎಚ್ಚರ ವಹಿಸಬೇಕು. ಇಲ್ಲವಾದರೆ ಸೌಹಾರ್ದ ಕರ್ನಾಟಕ ಉಳಿಯುವುದಾದರೂ ಹೇಗೆ?

ಪೆಟ್ರೋಲ್ ಬೆಲೆ ಏರಿಕೆಯ ಮಹಾ ವಂಚನೆ

ಪುಟ 5 ರಿಂದ

ಅಥವಾ ಸ್ವಲ್ಪ ಹೆಚ್ಚಿಗೂ ಸಿಗುತ್ತಿರುತ್ತದೆ. ಆದ್ದರಿಂದ ಸರ್ಕಾರಕ್ಕೆ ನಷ್ಟವಾಗುವ ಅಥವಾ ತ್ಯಾಗ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅಂತರರಾಷ್ಟ್ರೀಯ ಬೆಲೆಗಳು ಏರಿದಂತೆಲ್ಲಾ ಸರ್ಕಾರಕ್ಕೆ ಆಮದು ಸುಂಕದಲ್ಲಿ ತಂತಾನೇ ಹೆಚ್ಚುವರಿ ಆದಾಯ ಬರುತ್ತಿರುತ್ತದೆಯೇ ಹೊರತು ಯಾವುದೇ ಸಂದರ್ಭದಲ್ಲೂ ನಷ್ಟದ ಪ್ರಶ್ನೆ ಉದ್ಭವಿಸುವುದಿಲ್ಲ. ಇಷ್ಟಕ್ಕೂ ಈಗ ಕಡಿತ ಮಾಡಿದ್ದೇವೆಂದು ಹೇಳುತ್ತಿರುವ ಆಮದು ಸುಂಕ ಕಳೆದ ವರ್ಷ ಹೆಚ್ಚುವರಿಯಾಗಿ ಹಾಕಿದ್ದು. ಹೀಗಾಗಿ ಹೆಚ್ಚೆಚ್ಚು ತೆರಿಗೆಗಳನ್ನು ಸರ್ಕಾರ ವಿಧಿಸಿ ಆದಾಯ ಸಂಗ್ರಹ ಮಾಡುತ್ತದೆ ಮತ್ತು ಬೆಲೆ ಏರಿಕೆಗೆ ಇದೇ ಮೂಲ ಕಾರಣವಾಗಿದೆ.

ಅಡುಗೆ ಅನಿಲದ ಬೆಲೆಯನ್ನು 50 ರೂ. ಹೆಚ್ಚಿಸಿದ ನಂತರವೂ ಸರ್ಕಾರಕ್ಕೆ ಪ್ರತಿ ಸಿಲಿಂಡರ್ ಮೇಲೆ ರೂ.353.72 ನಷ್ಟವಾಗುತ್ತಿದೆ ಎನ್ನುತ್ತಿದೆ ಮನಮೋಹನಸಿಂಗ್ ಸರ್ಕಾರ. ಇದನ್ನು ಸಮರ್ಥನೆ ಮಾಡಿಕೊಳ್ಳಲು ಶ್ರೀಲಂಕ, ಬಾಂಗ್ಲಾ ದೇಶ, ಪಾಕಿಸ್ತಾನ, ನೇಪಾಳ ದೇಶಗಳೊಂದಿಗೆ ಹೋಲಿಸಿಕೊಂಡು ಅವರಿಗಿಂತ ನಮ್ಮದು ಕಡಿಮೆ ಬೆಲೆಯ ಗ್ಯಾಸ್ ಎನ್ನಲಾಗುತ್ತಿದೆ.

ಮೊದಲನೆಯದಾಗಿ ಹೋಲಿಸುತ್ತಿರುವ ಯಾವ ದೇಶಗಳೂ ಸ್ವತಂತ್ರವಾಗಿ ಅನಿಲವನ್ನು ಉತ್ಪಾದಿಸುವ ಸಾಮರ್ಥ್ಯವನ್ನು ನಮ್ಮ ರೀತಿಯಲ್ಲಿ ಹೊಂದಿಲ್ಲದ ದೇಶಗಳು ಮತ್ತು ಅತ್ಯಂತ ಬಡ ದೇಶಗಳು. ಆದರೆ ಅದೇ ದೇಶಗಳಲ್ಲಿ ನಮಗಿಂತ ಕಡಿಮೆ ಬೆಲೆಗೆ ಪೆಟ್ರೋಲ್ ಮತ್ತು ಡೀಸೆಲ್‌ನ್ನು ನೀಡಲಾಗುತ್ತಿದೆ. ಎಂಬುದನ್ನು ಸರ್ಕಾರ ಮರೆಮಾಚುತ್ತಿದೆ. ಅಡಿಗೆ ಅನಿಲದ ವಿಚಾರಕ್ಕೆ ಬಂದರೆ, ನಿಜ ಸರ್ಕಾರ ಸಾಕಷ್ಟು ಸಬ್ಸಿಡಿ ನೀಡುತ್ತಿದೆ ಎನ್ನುವುದು ನಿಜ. ಆದರೆ ಈ ಸಬ್ಸಿಡಿ ನೀಡುತ್ತಿರುವುದು ಜನರ ಅನುಕೂಲಕ್ಕಲ್ಲ. ರಿಲಯನ್ಸ್ ಕಂಪನಿಯ ಲೂಟಿಗೆ ಎಂಬುದು ಗಮನಾರ್ಹ. (ಮುಂದುವರೆಯುವುದು)

ಲಿಬ್ಯಾ-ವಿರೋಧಿ ಕೂಟ ಶಿಥಿಲ ?

ಪುಟ 14 ಕ್ಕೆ

ನಡೆಯಬೇಕು ಎಂದು ಒತ್ತಾಯಿಸುತ್ತಿವೆ. ಆದರೆ ಇಟಲಿ, ಜರ್ಮನಿ ಮುಂತಾದ ದೇಶಗಳು ಇದನ್ನು ವಿರೋಧಿಸುತ್ತಿವೆ.

ನಾಗರಿಕ ಸಾವು-ನೋವುಗಳು ಮತ್ತು ಅರಬ್ ಜನತೆಯ ಆಕ್ರೋಶಕ್ಕೆ ಬೆದರಿದ ಅರಬ್ ಸರ್ಕಾರಗಳ ಬೆಂಬಲ ಸಹ ದುರ್ಬಲವಾಗುತ್ತಿದೆ. ಅರಬ್ ಲೀಗ್ ಭೂ-ಯುದ್ಧ ಆರಂಭಿಸುವುದು ಅಥವಾ ಕ್ಷಿಪಣಿ ದಾಳಿ ಮುಂದುವರೆಸುವುದು ಅಥವಾ ಲಿಬ್ಯಾ ಸರ್ಕಾರ ಬದಲಾಯಿಸುವುದನ್ನು ವಿರೋಧಿಸಿದೆ. ನಾಗರಿಕರ ರಕ್ಷಣೆಗೆ ಮಾತ್ರ ನ್ಯಾಟೋ ಕಾರ್ಯಾಚರಣೆ ಸೀಮಿತವಾಗಿ ಇರಬೇಕು ಎಂದು ಹೇಳಿದೆ. ನ್ಯಾಟೋ "ಗೆಲುವು" ಪಡೆಯದೆ ಸೋಲು ಒಪ್ಪಿಕೊಳ್ಳಲು ಆಗದೆ ಸಂದಿಗ್ಧ ಸ್ಥಿತಿಯಲ್ಲಿದೆ. ಇದು ಅಮೆರಿಕನ್ ಮತ್ತು ಯುರೋಪಿಯನ್ ಸಾಮ್ರಾಜ್ಯಶಾಹಿಯ ಹುನ್ನಾರಕ್ಕೆ ಅಡ್ಡಿ ತಂದಿದೆ.

ಆದರೂ ಈ ಮಿಲಿಟರಿ ಕಾರ್ಯಾಚರಣೆಯನ್ನು ಎಷ್ಟು ದೀರ್ಘವಾದರೂ ಮುಂದುವರೆಸಲಿವೆ. ಇದಕ್ಕೆ ಹಲವು ಕಾರಣಗಳಿವೆ. ಒಂದು ಕಡೆ ಟುನಿಸಿಯಾದಿಂದ ಯೆಮೆನ್ ವರೆಗೆ ಪ್ರಜಾಪ್ರಭುತ್ವಕ್ಕೆ ಅರಬ್ ಜನತೆಯ ತಹ ತಹ-ದಂಗೆಗಳ ವಿರುದ್ಧ, ಶೇಕರ-ಆಳುವವರ ಪರವಾಗಿ ನಿಂತ ಅಮೆರಿಕ ಮತ್ತು ಯುರೋಪು ಕೂಟಕ್ಕೆ ಪ್ರಜಾಪ್ರಭುತ್ವ-ವಿರೋಧಿ ಎಂಬ ಹಣೆ ಪಟ್ಟಿ ಬಿದ್ದಿದೆ. ಅದನ್ನು ಅಳಿಸಲು ಒಂದು "ಜನತೆಯ ಸ್ವಾತಂತ್ರ್ಯ-ಹ-ಹೋರಾಟ"ಕ್ಕೆ ಬೆಂಬಲದ ನಾಟಕ ಬೇಕಾಗಿದೆ. ಇನ್ನೊಂದು ಕಡೆ ಇದೇ ಸಂದರ್ಭ ಬಳಸಿ, ಲಿಬ್ಯಾ ಮತ್ತು ಸಿರಿಯಾಗಳಲ್ಲಿ ತಮಗೆ ಬೇಡದ ಸರ್ಕಾರ ಇಳಿಸಿ, ಬೇಕಾದ ಸರ್ಕಾರ ತರಲು ಪ್ರಯತ್ನಿಸುತ್ತಿದೆ.

ಲಿಬ್ಯಾದಲ್ಲಿ ಸರ್ಕಾರ ಬದಲಾವಣೆ ಆಫ್ರಿಕಾ ಖಂಡದ ಮಿಲಿಟರಿ ವ್ಯೂಹದ ದೃಷ್ಟಿಯಿಂದಲೂ ಅಮೆರಿಕಕ್ಕೆ ಬೇಕಾಗಿದೆ. ಅಮೆರಿಕದ "ಆಫ್ರಿಕಾಮ್" ಮಿಲಿಟರಿ ಕಮಾಂಡಿಗೆ ಆಫ್ರಿಕಾದಲ್ಲಿ ಆಯಕಟ್ಟಿನ ಜಾಗದಲ್ಲಿ ಇನ್ನೂ ನೆಲೆ ಸಿಕ್ಕಿಲ್ಲ. ಸಾಲದ್ದಕ್ಕೆ ಗದ್ದಾಫಿ ಈಗ ಆಫ್ರಿಕನ್ ಕೂಟದ ನಾಯಕನಾಗಿದ್ದು, ಒಂದೇ ಆರ್ಥಿಕ ಕೂಟ, (ಡಾಲರು-ಯುರೋಗಳನ್ನು ತಿರಸ್ಕರಿಸಿ) ಒಂದೇ ನಾಣ್ಯ, ಮಿಲಿಟರಿ ಸಹಕಾರಕ್ಕೆ ಒತ್ತು ಕೊಟ್ಟಿದ್ದ. ಇದು ಅವರಲ್ಲಿ ನಡುಕ ತಂದಿದೆ. ಆದ್ದರಿಂದ ಸರ್ಕಾರ ಬದಲಾವಣೆ ತರಲು ಆಗದಿದ್ದರೂ, ಸುಡಾನಿನಂತೆ ಲಿಬ್ಯಾವನ್ನು ಒಡೆಯುವತ್ತ ಅವರ ಚಿತ್ತ. ತೈಲ ನಿಕ್ಷೇಪಗಳು ಮತ್ತು ಸ್ಥಾವರಗಳು ಇರುವ ಪೂರ್ವ ಲಿಬ್ಯಾವನ್ನು ಬಾಲಬಡುಕ ಗೆರಿಲ್ಲಾಗಳು ವಶಪಡಿಸಿ ಕೊಳ್ಳುವುದು ಅವರ ತಕ್ಷಣದ ಉದ್ದೇಶ. ಆಗ ಅವರಿಂದ ಆಯಕಟ್ಟಿನ ಜಾಗದಲ್ಲಿ "ಆಫ್ರಿಕಾಮ್" ಮಿಲಿಟರಿ ಕಮಾಂಡಿಗೆ ನೆಲೆ ಸಹ ಪಡೆಯಬಹುದು. ಅರಬ್ ಪ್ರದೇಶ ಮತ್ತು ಇಡಿಯ ಆಫ್ರಿಕಾದ ಮೇಲೆ ಹತೋಟಿ ಇಡಲು ಸಹಾಯವಾಗುತ್ತದೆ ಎಂದು ಅವರ ಲೆಕ್ಕಾಚಾರ. ಆದರೆ ಗದ್ದಾಫಿ ಸರ್ಕಾರದ ಪ್ರತಿರೋಧ ಈ ವರೆಗೆ ಅವರ ಲೆಕ್ಕಾಚಾರ ತಲೆಕೆಳಗು ಮಾಡಿದೆ.



ಕುಂದಾಪುರ ಸಮುದಾಯದ 'ಕುಲಂ'

ಒಂದು ವಿಶಿಷ್ಠ ಪ್ರಯೋಗ

ಟಿವಿ ಬಂದ ಮೇಲೆ ಜನ ನಾಟಕ ನೋಡಲು ಬರುವುದಿಲ್ಲ ಎಂಬುವುದು ಸತ್ಯವಲ್ಲ. ಪ್ರೇಕ್ಷಕರಿಗೆ ಇಷ್ಟವಾಗುವ ಸಶಕ್ತ ನಾಟಕವಿದ್ದರೆ ಜನ ಬರುತ್ತಾರೆ. ಟಿವಿ ಸಿನಿಮಾಗಳಿಂದ ಒಂದಷ್ಟು ಅಡೆತಡೆಗಳು ಉಂಟಾಗಿರಬಹುದು ಆದರೆ ಜನರೇ ಬರುತ್ತಿಲ್ಲ ಎನ್ನುವುದು ಸರಿಯಲ್ಲ. ಜನರಿಗೆ ಇತ್ತೀಚೆಗೆ ಟಿವಿ ಮೇಲೆ ನಿರಾಸಕ್ತಿ ಮೂಡಿದೆ. ಹಾಗಾಗಿ ಜನ ನೋಡುವ ನಾಟಕಗಳಾದರೆ ಬರುತ್ತಾರೆ ಎಂಬುವುದಕ್ಕೆ ಸಮುದಾಯ ಕುಂದಾಪುರ-30, ಕನ್ನಡ ಸಂಸ್ಕೃತಿ ಇಲಾಖೆ, ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿ, ಬೆಂಗಳೂರು ಇವರ ಸಹಯೋಗ ಮತ್ತು ಸಹಕಾರದೊಂದಿಗೆ ನಡೆದ ರಂಗೋತ್ಸವಕ್ಕೆ ಸೇರಿದ ಪ್ರೇಕ್ಷಕರು ಸಾಬೀತುಪಡಿಸಿದ್ದಾರೆ.

ಕುಲದ ಪ್ರಶ್ನೆ ಮಹಾಭಾರತದ ಕಾಲದಲ್ಲಿ ಪ್ರಾರಂಭವಾದದ್ದು ಅಲ್ಲ ಅಲ್ಲಿಯೇ ನಿಂತು ಹೋದದ್ದು ಅಲ್ಲ 'ಅವನ ಜಾತಿ ಯಾವುದು?' ಎಂಬ ಪ್ರಶ್ನೆ ಈಗಲೂ ಅಷ್ಟೇ ಜೀವಂತ. ಈ ಸಮಸ್ಯೆ ಈಗಲೂ ಜ್ವಲಂತ, ಕರ್ಣನ ಕುಲದ ಪ್ರಶ್ನೆಯನ್ನು ಎತ್ತಿಕೊಂಡು ರಚಿಸಲ್ಪಟ್ಟ ನಾಟಕ 'ಕುಲಂ', ಪಾಂಡವರಿಗೂ ಕೌರವರಿಗೂ ನಡೆದ ಮಹಾಭಾರತ ಯುದ್ಧದ ಸೆಲೆಯೊಂದರ ಮೇಲೆ ಈ ನಾಟಕ ಆಧರಿಸಿದೆ. ಈ 'ಕುಲಂ' ನಾಟಕವನ್ನು ರಾಜಪ್ಪ ಧಳವಾಯಿ ರಚನೆ ಮಾಡಿದರು. ಈ ರಂಗ ನಾಟಕವನ್ನು ಕುಂದಾಪುರ ಸಮುದಾಯ ರಂಗ ತಂಡ, ನಿನಾಸಂ ಪದವೀಧರರು ಸಂಪನ್ಮೂಲ ವ್ಯಕ್ತಿಯಾಗಿ ರಂಗ ಭೂಮಿಯ ಎಲ್ಲಾ ಆಯಾಮಗಳ ಅನುಭವ ಪಡೆದ ಜಿಲ್ಲೆಯಲ್ಲೇ ಅತಿ ಎಳೆಯ ರಂಗ ನಿರ್ದೇಶನದಲ್ಲಿ ಒಬ್ಬರಾದ ರಂಗ ಕರ್ಮಿ ವಾಸುದೇವ ಗಂಗೇರ ನಿರ್ದೇಶನದಲ್ಲಿ ಕುಂದಾಪುರ ಲಕ್ಷ್ಮೀನರಸಿಂಹ ಕಲಾ ಮಂದಿರ ಸಭಾಂಗಣದಲ್ಲಿ ಯಶಸ್ವಿ ರಂಗ ಪ್ರಯೋಗವಾಗಿಸಿದ್ದಾರೆ. ಕುಲದ ಕಾರಣದಿಂದ ಅವಮಾನಕ್ಕೊಳಗಾಗುವ ಕರ್ಣ, ಕುಲದ ಕಾರಣದಿಂದ ಅವಕಾಶ ವಂಚಿತನಾಗುವ ಏಕಲವ್ಯ ಇಬ್ಬರು ವಾಸ್ತವವಾಗಿ ಯಾರದ್ದೋ ಅಧಿಕಾರದ ಹಂಬಲಕ್ಕಾಗಿ ಬಲಿಯಾಗುವ ಪಾತ್ರಗಳು ನಮ್ಮ ವರ್ತಮಾನ ಕಾಲದ ಸಾಮಾಜಿಕ ರಾಜಕೀಯ ಕುತಂತ್ರಗಳ ಕರಾಳತೆಯನ್ನು ನೆನಪಿಸುವಂತಹದು. ಮನುಷ್ಯನನ್ನು ಮನುಷ್ಯನನ್ನಾಗಷ್ಟೇ ಕಾಣುವ ಜಗತ್ತನ್ನು ಎದುರು ನೋಡುತ್ತಾ ಮುಕ್ತ ಮನಸ್ಸನಿಂದ ಕರ್ಣನನ್ನು ಸ್ವೀಕರಿಸಿದ ರಾಧೆಯ ತಾಯ್ತನವನ್ನು ನಿಜದಲ್ಲಿ ನೋಡುವ ಹಂಬಲದಲ್ಲಿ ಸೃಜಿಸಲ್ಪಟ್ಟ ನಾಟಕ 'ಕುಲಂ' ದೃಶ್ಯ ಗುಣ ಪ್ರಧಾನ್ಯವಾಗಿದ್ದು, ಜನರ ಮನ ಸೆಳೆಯುವಲ್ಲಿ ಸಮರ್ಥವಾಗಿದೆ. ಉತ್ತಮ ಅಭಿನಯ, ಆಕರ್ಷಕವಾದ ರಂಗಸಜ್ಜಿಕೆಯ ಮೂಲಕ (ಬಾಲಕೃಷ್ಣ, ಹೆಚ್.ನರಸಿಂಹ, ಉದಯ ಗಾಂವ್ಕರ್) ಉತ್ತಮ ಸಂಗೀತ (ಅನೀಶ, ಮೇಘ ಸಮೀರ, ಶಮ) ಬೆಳಕುಗಳ ನೆರವಿನಿಂದ ನಿರ್ದೇಶಕ ವಾಸುದೇವ ಗಂಗೇರರ ರಂಗ ಬದ್ಧತೆ ಶ್ಲಾಘನೀಯ. ಯಾರದ್ದೋ ಅಧಿಕಾರದ ಹಂಬಲಕ್ಕಾಗಿ ಸ್ವಾರ್ಥ ಸಾಧನೆಗಾಗಿ ಯುದ್ಧದಲ್ಲಿ ಕರ್ಣನು



ಬಲಿಯಾಗುವ ಕರ್ಣನ ಪಾತ್ರಧಾರಿ ವಿಕ್ರಮ್ ಕೆ.ಎಸ್.ರವರ ಅಭಿನಯದ ದೃಶ್ಯಗಳು ನೋಡುಗರ ಮನ ಕಲಕಿದವು. ಅಂಗಿಕ ಅಭಿನಯ ರೂಪ ತಳೆದು ರಂಗ ಪ್ರವೇಶ ಮಾಡುವ ಬಗೆ, ಯಕ್ಷಗಾನದ ಗತ್ತು ಧನಾತ್ಮಕ ಕೊಡುಗೆಗಳು. ಸರಿಯಾದ ಅವಕಾಶಗಳು ದೊರೆತಲಿ ಕುಂದಾಪುರ ಹವ್ಯಾಸಿ ರಂಗಕ್ಕೆ ವಿಕ್ರಮ್ ಕೆ.ಎಸ್. ಉತ್ತಮ ಕೊಡುಗೆಯಾಗ ಬಲ್ಲರು. ದುರ್ಯೋಧನನಾಗಿ ರವಿ.ಪಿ.ಎಂ. ಲವಲವಿಕೆ ತೋರಿದರೆ ಅಶ್ವಥಾಮನಾಗಿ ಸುಧಾಕರ ಕಾಂಚನ್ ಪರಿಣಾಮಕಾರಿಯಾಗಿ ಅಭಿನಯಿಸಿದರು. ಕೃಷ್ಣನಾಗಿ ರವಿನಾ ಕುಮಾರಿ ಪರಿಪಕ್ವ ನಟನೆಯಿಂದ ತಾನೊಬ್ಬ ಅನುಭವಿ ಕಲಾವಿದೆ ಎಂಬುದನ್ನು ಸಾಬೀತುಪಡಿಸಿದರು. ಕುಂತಿಯಾಗಿ ಅಭಿಲಾಶರ ಅಭಿನಯ ಶ್ರೇಷ್ಠ ಮಟ್ಟದ್ದು. ಏಕಲವ್ಯನಾಗಿ ನಮಿತ, ಗಂಗೆಯಾಗಿ ರೇಷ್ಮ, ರಾಧೆಯಾಗಿ ಸಂಧ್ಯಾಭಟ್, ಶಿವಜನನಾಗಿ ಸುನೀಲ್ ಎಚ್.ಜಿ. ಮತ್ತು ನಿಶಾಂತ ಕೆ. ಪೂರ್ಣಚಂದ್ರ, ಮಾನಸ, ವಿಶ್ವನಾಥ ತನ್ಮಯತೆಯಿಂದ ಅಭಿನಯ ನೀಡಿದರು. ಸಹದೇವನಾಗಿ ಸುರೇಶ ಕಲ್ಲಾಗರ ಹಾವಭಾವ ಮಾತಿನ ಏರಿಳಿತ ಅಭಿನಯಗಳು ಅವರ ಪ್ರತಿಭೆಗೆ ಸಾಕ್ಷಿ. ರಂಗ ನಿರ್ವಹಣೆ ಸೂಕ್ತ ಹಾಗೂ ಪೂರಕವೆನಿಸಿತು (ಜಿ.ವಿ.ಕಾರಂತ, ಸದಾನಂದ ಬೈಂದೂರು, ಶಂಕರ ಆನಗಳ್ಳಿ) ಚಿನ್ನ ವಿ.ಗಂಗೇರ ಇವರ ವಸ್ತ್ರಾಲಂಕಾರಗಳು ಪಾತ್ರ ಔಚಿತ್ಯವನ್ನು ಎತ್ತಿ ಹಿಡಿದವು. ಸನ್ನಿವೇಶ ನಿರ್ಮಾಣಕ್ಕೆ ಸಹಾಯ ನೀಡಿದವು. ಈ ಯಶಸ್ವಿ ರಂಗ ಪ್ರಯೋಗ ಕೇವಲ ಒಂದೇ ಪ್ರದರ್ಶನಕ್ಕೆ ಸೀಮಿತ ಗೊಳ್ಳದೆ ಇನ್ನು ಹೆಚ್ಚು ಹೆಚ್ಚು ಪ್ರದರ್ಶನಗೊಳ್ಳಲಿ ಎಂದು ಹಾರೈಸೋಣ.

ವೆಂಕಟೇಶ ಕೋಣಿ,
ಕುಂದಾಪುರ

ಪೆಟ್ರೋಲ್ - ಡೀಸೆಲ್ - ಗ್ಯಾಸ್ ಬೆಲೆ ಏರಿಕೆಗೆ ಧಿಕ್ಕಾರ

ಬೆಂಗಳೂರು



ದೆಹಲಿ



JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owired by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH

ಕಾಮ್ರೇಡ್. ಬಾಲಕೃಷ್ಣ ಶೆಟ್ಟಿ.